

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಏಪ್ರಿಲ್ 26 ಶುಕ್ರವಾರ 2024

ಸಂಪುಟ: 45 | ಸಂಚಿಕೆ: 11 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಲೋಕಸಭಾ ಚುನಾವಣೆ 2024; ರಾಜ್ಯದ ಮೊದಲ ಹಂತದಲ್ಲಿ 14 ಕ್ಷೇತ್ರಗಳಲ್ಲಿ

ಇಂದು ಮತದಾನ

● ಬೆಳಗ್ಗೆ 7ರಿಂದ ಸಂಜೆ 6 ಗಂಟೆವರೆಗೆ ಮತದಾನ ● 14 ಕ್ಷೇತ್ರಗಳಲ್ಲಿ 274 ಅಭ್ಯರ್ಥಿಗಳ ಅದೃಷ್ಟ ಪರೀಕ್ಷೆ ● ಮೈಸೂರು, ಬೆಂಗಳೂರು ಗ್ರಾಮಾಂತರದಲ್ಲಿ ಸಿಎಂ, ಡಿಸಿಎಂಗೆ ಅಗ್ನಿ ಪರೀಕ್ಷೆ ● ಎಲ್ಲಾ ಕ್ಷೇತ್ರಗಳಲ್ಲಿ ಭಾರಿ ಬಂದೋಬಸ್ತ್ ● ಮುಕ್ತ, ಶಾಂತಿಯುತ ಚುನಾವಣೆಗೆ ವ್ಯಾಪಕ ವ್ಯವಸ್ಥೆ

ಮೈಸೂರು–ಕೊಡಗು | ಚಾಮರಾಜನಗರ | ಮಂಡ್ಯ | ಹಾಸನ | ಬೆಂಗಳೂರು ಗ್ರಾಮಾಂತರ | ತುಮಕೂರು | ಬೆಂಗಳೂರು ಉತ್ತರ



ಯದುವೀರ್ Vs ಎಂ.ಲಕ್ಷ್ಮಣ | ಬಾಲರಾಜ್ Vs ಸುನೀಲ್ ಬೋಸ್ | ಕುಮಾರಸ್ವಾಮಿ Vs ಸ್ಟಾರ್ ಚಂದ್ರು | ಪ್ರಜ್ವಲ್ ರೇವಣ್ಣ Vs ಶ್ರೇಯಸ್ ಪಟೇಲ್ | ಡಾ.ಮಂಜುನಾಥ್ Vs ಡಿ.ಕೆ.ಸುರೇಶ್ | ವಿ.ಸೋಮಣ್ಣ Vs ಮುದ್ದಹನುಮೇಗೌಡ | ಶೋಭಾ Vs ರಾಜೀವ್‌ಗೌಡ

ಚಿಕ್ಕಮಗಳೂರು | ದಕ್ಷಿಣ ಕನ್ನಡ | ಚಿತ್ರದುರ್ಗ | ಬೆಂಗಳೂರು ಕೇಂದ್ರ | ಬೆಂಗಳೂರು ದಕ್ಷಿಣ | ಚಿಕ್ಕಬಳ್ಳಾಪುರ | ಕೋಲಾರ



ಶ್ರೀನಿವಾಸ ಪೂಜಾರಿ Vs ಜಯಪ್ರಕಾಶ್ ಹೆಗ್ಡೆ | ಬ್ರಿಜೇಶ್ ಚೌಟ Vs ಪದ್ಮರಾಜ್ | ಗೋವಿಂದ ಕಾರಜೋಳ Vs ಚಂದ್ರಪ್ಪ | ಪಿ.ಸಿ.ಮೋಹನ್ Vs ಮನ್ಸೂರ್ | ತೇಜಸ್ವಿ ಸೂರ್ಯ Vs ಸೌಮ್ಯರೆಡ್ಡಿ | ಕೆ.ಸುಧಾಕರ್ Vs ರಕ್ಷಾರಾಮಯ್ಯ | ಎಂ.ಮಲ್ಲೇಶ್ Vs ಕೆ.ವಿ.ಗೌತಮ್

ಬೆಂಗಳೂರು, ಏ.25(ಕೆಎಂಶಿ)– ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಂಸದ ಡಿ.ಕೆ.ಸುರೇಶ್ ಸೇರಿದಂತೆ 274 ಅಭ್ಯರ್ಥಿಗಳ ರಾಜಕೀಯ ಭವಿಷ್ಯವನ್ನು ಮತದಾರರು ಶುಕ್ರವಾರ ನಿರ್ಧರಿಸಲಿದ್ದಾರೆ.

ಹಳೆ ಮೈಸೂರು ಭಾಗದ 14 ಲೋಕಸಭಾ ಕ್ಷೇತ್ರಗಳಿಗೆ ಶುಕ್ರವಾರ ಬೆಳಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆಯವರೆಗೂ ಮತದಾನಕ್ಕೆ ಅವಕಾಶವಿದೆ. ಮುಕ್ತ ಹಾಗೂ ಶಾಂತಿಯುತ ಮತದಾನಕ್ಕೆ ಚುನಾವಣಾ ಆಯೋಗ ಸಕಲ ಸಿದ್ಧತೆ ಮಾಡಿಕೊಂಡಿರುವುದಲ್ಲದೆ, ಈಗಾಗಲೇ ಮತಗಟ್ಟೆಗಳಲ್ಲಿ ಅಧಿಕಾರಿಗಳು ಬೀಡುಬಿಟ್ಟಿದ್ದಾರೆ. ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆಯಾಗಿ ಅರೆಸೇನಾ



ಪಡೆ, ನೆರೆ ರಾಜ್ಯ ಪೊಲೀಸರ ಜೊತೆಗೆ ನಮ್ಮ ಪೊಲೀಸರು ಹಾಗೂ ಹೋಂ ಗಾರ್ಡ್ ಸಿಬ್ಬಂದಿಯನ್ನು ಬಳಕೆ ಮಾಡಿಕೊಳ್ಳುತ್ತಿದೆ. ಆಡಳಿತಾರೂಢ ಕಾಂಗ್ರೆಸ್ ಹಾಗೂ ಎನ್‌ಡಿಎ ಮೈತ್ರಿಕೂಟದ ಬಿಜೆಪಿ–ಜೆಡಿಎಸ್ 14 ಕ್ಷೇತ್ರಗಳಲ್ಲೂ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಪ್ರತಿನಿಧಿಸುವ ಕ್ಷೇತ್ರಗಳಿಗೂ ಚುನಾವಣೆ ನಡೆಯುತ್ತಿದೆ.

ಸಿದ್ದರಾಮಯ್ಯ ತವರು ಮೈಸೂರು–ಕೊಡಗು, ಶಿವಕುಮಾರ್ ಪ್ರತಿನಿಧಿಸುವ ಬೆಂಗಳೂರು ಗ್ರಾಮಾಂತರ ಕ್ಷೇತ್ರವನ್ನು ಬಿಜೆಪಿ ವರಿಷ್ಠರು ಪ್ರತಿಷ್ಠೆಯಾಗಿ ತೆಗೆದುಕೊಂಡು ಎರಡೂ ಕ್ಷೇತ್ರಗಳನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಹೊಸ ಮುಖಗಳಿಗೆ ಅವಕಾಶ ಮಾಡಿಕೊಟ್ಟಿದೆ. ಮೈಸೂರು–ಕೊಡಗಿನಲ್ಲಿ ಹಾಲಿ ಸಂಸದ ಪ್ರತಾಪ್ ಸಿಂಹ ಅವರ ಬದಲು ರಾಜಮನೆತನದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್‌ಗೆ ಟಿಕೆಟ್ ನೀಡಿದ್ದರೆ, ಬೆಂಗಳೂರು ● 9ನೇ ಪುಟಕ್ಕೆ



ಮೈಸೂರು–ಕೊಡಗು, ಮಂಡ್ಯ, ಚಾ.ನಗರ, ಹಾಸನ

ಲೋಕಸಭಾ ಕ್ಷೇತ್ರದಲ್ಲಿ ಮತದಾನಕ್ಕೆ ಸಂಪೂರ್ಣ ಸಿದ್ಧತೆ

● ಬೆಳಗ್ಗೆ 7ರಿಂದ ಸಂಜೆ 6ರ ತನಕ ಹಕ್ಕು ಚಲಾವಣೆ ● ಪ್ರತಿ ಮತಗಟ್ಟೆಗೆ ಸಿಸಿ ಕ್ಯಾಮರಾ ಅಳವಡಿಕೆ ● ಕಂಟ್ರೋಲ್ ರೂಂನಲ್ಲಿ ಹದ್ದಿನಕಣ್ಣು ● ಮತಗಟ್ಟೆಗೆ ಮೊಬೈಲ್, ಕ್ಯಾಮರಾ ನಿಷಿದ್ಧ ● ಸೂಕ್ಷ್ಮ ಮತಗಟ್ಟೆಗಳಲ್ಲಿ ಬಿಗಿ ಭದ್ರತೆ



ನಿಮ್ಮ ಮತಗಟ್ಟೆ ಬಗ್ಗೆ ಮಾಹಿತಿ ಪಡೆಯುವುದು ಹೇಗೆ?

ಮತದಾರ ತಾನು ಮತದಾನ ಮಾಡುವ ಮತಗಟ್ಟೆ ಯಾವುದು ಎಂಬ ಮಾಹಿತಿ ಪಡೆಯಲು ಚುನಾವಣಾ ಆಯೋಗ ವಿಶೇಷ ಸೌಲಭ್ಯ ಕಲ್ಪಿಸಿದೆ. ಮತದಾರರು ತಮ್ಮ ಗುರುತಿನ ಚೀಟಿ ಸಂಖ್ಯೆ ನಮೂದಿಸಿ ಮತಗಟ್ಟೆಯ ವಿವರ, ಹೆಸರು ಹಾಗೂ ಸೀರಿಯಲ್ ನಂಬರ್ ತಿಳಿಯಬಹುದು. ಇದಕ್ಕಾಗಿ ಮತದಾರರು https://electoralsearch.eci.gov ನಲ್ಲಿ ಕ್ಲಿಕ್ ಮಾಡಿ ಮಾಹಿತಿ ಪಡೆಯಬಹುದು. ಮತದಾರರ ಸಹಾಯವಾಣಿ ಸಂಖ್ಯೆ 1950 ಅಥವಾ SMS ECI <space> Voter ID Number to 1950 ಮೂಲಕ ತಿಳಿಯಬಹುದು. ಇದಲ್ಲದೆ ಮತದಾರರ ಸಹಾಯವಾಣಿ 'Voter Help-line App (Android and iO) ಮೂಲಕ ಕೂಡ ಮಾಹಿತಿ ಪಡೆದು ಮತದಾನ ಮಾಡಬಹುದು.

ಮೈಸೂರು, ಏ.25(ಬಿಎಲ್‌ಯು)– ಲೋಕಸಭಾ ಚುನಾವಣೆ–2024ರ ದೇಶದಲ್ಲಿ ಎರಡನೇ ಹಂತ ಹಾಗೂ ರಾಜ್ಯದ ಮಟ್ಟಿಗೆ ಮೊದಲ ಹಂತದ ಮತದಾನ ನಾಳೆ (ಏಪ್ರಿಲ್ 26) ನಡೆಯಲಿದ್ದು, ಮೈಸೂರು–ಕೊಡಗು, ಮಂಡ್ಯ, ಚಾಮರಾಜನಗರ, ಹಾಸನ ಲೋಕಸಭಾ ಕ್ಷೇತ್ರದಲ್ಲಿ ತಮ್ಮ ತಮ್ಮ ಹಕ್ಕು ಚಲಾವಣೆಗೆ ಮತದಾರರು ಸಜ್ಜಾಗಿದ್ದಾರೆ.

ಶುಕ್ರವಾರ ಬೆಳಿಗ್ಗೆ 7 ಗಂಟೆಗೆ ಮತದಾನ ಆರಂಭವಾಗಲಿದ್ದು, ಸಂಜೆ 6 ಗಂಟೆತನಕ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆ ರಾಜ್ಯದ ಪ್ರತಿಷ್ಠೆಯ ಕಣಗಳಲ್ಲಿ ಒಂದಾಗಿದೆ. ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಸೇರಿದಂತೆ ಒಟ್ಟು 18 ಅಭ್ಯರ್ಥಿಗಳು ಸ್ಪರ್ಧಾ ಕಣದಲ್ಲಿದ್ದು, ತಮ್ಮ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಈ ಕ್ಷೇತ್ರ ಕೃಷ್ಣರಾಜ, ಚಾಮರಾಜ, ನರಸಿಂಹರಾಜ, ಚಾಮುಂಡೇಶ್ವರಿ, ಹುಣಸೂರು, ಪಿರಿಯಾಪಟ್ಟಣ, ಮಡಿಕೇರಿ, ವಿರಾಜಪೇಟೆ ವಿಧಾನಸಭಾ ಕ್ಷೇತ್ರಗಳನ್ನೊಳಗೊಂಡಿದ್ದು, ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗೆ ಚುನಾವಣಾ ಆಯೋಗ ಸರ್ವ ಸಿದ್ಧತೆ ಮಾಡಿದೆ. ಒಟ್ಟು 2,202 ಮತಗಟ್ಟೆ ಸ್ಥಾಪಿಸಿದ್ದು, 10,65,714 ● 6ನೇ ಪುಟಕ್ಕೆ

ರಾಮನವಮಿ: ವಿಶೇಷ ನೃತ್ಯೋತ್ಸವ



ಮೈಸೂರು,ಏ.25–ಮೈಸೂರಿನ ಮಂಚೇಗೌಡನಕೊಪ್ಪಲಿನಲ್ಲಿರುವ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರವು "37ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವದ" ಅಡಿಯಲ್ಲಿ ಮೂರನೇ ವರ್ಷದ "ರಾಮನವಮಿಯ ವಿಶೇಷ ನೃತ್ಯೋತ್ಸವ" ಕಾರ್ಯಕ್ರಮ ಆಯೋಜಿಸಲಾಗಿತ್ತು.

ರಾಮನವಮಿಯ ಪ್ರಯುಕ್ತ ವಿಶೇಷವಾದ ಭರತನಾಟ್ಯ ನೃತ್ಯ ಕಾರ್ಯಕ್ರಮ ಹಾಗೂ ರಾಮನನ್ನು ಕುರಿತ ವಿಶೇಷವಾದ ರೂಪಕಗಳನ್ನು ಕೂಡ ಸಡಗರದಿಂದ ಆಚರಿಸಿತು. ಈ ನೃತ್ಯೋತ್ಸವದಲ್ಲಿ ಸುಮಾರು 40ಕ್ಕಿಂತ ಹೆಚ್ಚು ನೃತ್ಯ ಕಲಾವಿದರು ಕಣ್ಮನ ತಣಿಸುವ ನೃತ್ಯ ಕಾರ್ಯಕ್ರಮ ನೀಡಿದರು.

ಕಾರ್ಯಕ್ರಮದಲ್ಲಿ ನಾಟ್ಯಾಂಜನಾ ನೃತ್ಯ ಮತ್ತು ಸಂಗೀತ ಶಾಲೆಯ ಸಂಸ್ಥಾಪಕಿ ವಿದುಷಿ ಆಶಾ ಹೇಮರಾಜು, ಲಹರಿ ಅಕಾಡೆಮಿ ಆಫ್ ಆರ್ಟ್ಸ್‌ನ ಎಚ್.ಎಂ.ಶೀಲಾಪ್ರಭಾ, ಶ್ರೀ ದುರ್ಗಾ ನೃತ್ಯ ಅಕಾಡೆಮಿಯ ಶ್ರೀ ವಿದ್ಯಾ ಶಶಿಧರ್ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಚೆನ್ನೈನ ಕೃಷ್ಣಧ್ವನಿ ಸ್ಕೂಲ್ ಆಫ್ ಡ್ಯಾನ್ಸ್, ಡಾ. ಗಾಯತ್ರಿ ಕೃಷ್ಣವೇಣಿ ಲಕ್ಷ್ಮಣನ್ ಮತ್ತು ಶಿಷ್ಯರು ನೃತ್ಯ ರೂಪಕ ಪ್ರದರ್ಶಿಸಿದರು.

ಯುವರಾಜ ಕಾಲೇಜಲ್ಲಿ ರಕ್ತದಾನ ಶಿಬಿರ



ಮೈಸೂರು,ಏ.25–ಮೈಸೂರಿನ ಯುವರಾಜ ಕಾಲೇಜಿನ ಐಕ್ಯೂಎಸಿ, ಎನ್‌ಸಿಸಿ ಹಾಗೂ ಎನ್‌ಎಸ್‌ಎಸ್ ವತಿಯಿಂದ ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ಹಾಗೂ ಡಾ. ಅಗರವಾಲ್ ಕಣ್ಣಿನ ಆಸ್ಪತ್ರೆ ಸಹಯೋಗದೊಂದಿಗೆ ಯುವರಾಜ ಕಾಲೇಜಿನಲ್ಲಿ ರಕ್ತದಾನ ಮಹಾದಾನ ಶೀರ್ಷಿಕೆಯಡಿ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು.

ಕಾಲೇಜಿನ ಸುಮಾರು 600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಿಬಿರದಲ್ಲಿ ಪಾಲ್ಗೊಂಡಿದ್ದರು. ಅದರಲ್ಲಿ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ರಕ್ತದಾನ ಮಾಡಿದರು. 200ಕ್ಕೂ ವಿದ್ಯಾರ್ಥಿಗಳು ಆರೋಗ್ಯ ತಪಾಸಣೆ ಮಾಡಿಸಿಕೊಂಡಿದ್ದಾರೆ. ಕಾರ್ಯಕ್ರಮದಲ್ಲಿ ಕಾಲೇಜು ಪ್ರಾಂಶುಪಾಲ ಪ್ರೊ ಎಂ.ಕೆ.ಮಹೇಶ್, ಪ್ರೊ.ಕೆ.ಅಜಯ್ ಕುಮಾರ್, ಪ್ರೊ. ಈ.ಕೃಷ್ಣಮೂರ್ತಿ, ಡಾ. ಅನಿಲ್‌ಕುಮಾರ್, ಡಾ.ಗಿರೀಶ್‌ಚಂದ್ರ, ಡಾ.ಪ್ರಮೋದ್, ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ಸುರೇಶ್, ಡಾ. ಅಗರವಾಲ್ ಕಣ್ಣಿನ ಆಸ್ಪತ್ರೆಯ ಎಸ್.ವಿನಯ್ ಕುಮಾರ್ ಮತ್ತಿತರರು ಪಾಲ್ಗೊಂಡಿದ್ದರು.

ಪಿಯುಸಿಗೆ ಉಚಿತ ಪ್ರವೇಶಾತಿ

ಮೈಸೂರು,ಏ.25–ಮೈಸೂರಿನ ಕುವೆಂಪುನಗರದ ಜ್ಞಾನಗಂಗಾ ಪದವಿಪೂರ್ವ ಕಾಲೇಜು ವತಿಯಿಂದ ಪ್ರಥಮ ಪಿಯುಸಿ ಉಚಿತ ದಾಖಲಾತಿಗೆ True Teachers Scholarship Test ಅನ್ನು 10ನೇ ತರಗತಿ ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದೆ. ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ 30 ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯನ್ನು (ಕೆಸಿಇಟಿ, ನೀಟ್, ಜೆಇಇ) ಒಳಗೊಂಡಂತೆ ಪ್ರಥಮ ಮತ್ತು ದ್ವಿತೀಯ ಪಿಯುಸಿ ಸಂಪೂರ್ಣ ಶಿಕ್ಷಣವನ್ನು ಉಚಿತವಾಗಿ ನೀಡಲಾಗುವುದು. ಪರೀಕ್ಷೆಯು 10ನೇ ತರಗತಿಯ ವಿಜ್ಞಾನ, ಗಣಿತ, ಕನ್ನಡ ಮತ್ತು ಇಂಗ್ಲೀಷ್ ವಿಷಯಗಳ ಸಿಲಬಸ್ ಆಧರಿಸಿ ಬಹು ಆಯ್ಕೆ ಮತ್ತು ವಿವರಣಾತ್ಮಕ ಮಾದರಿ ಟೆಸ್ಟ್ ಅನ್ನು ಮಾಡಲಾಗುತ್ತಿದ್ದು, ಏ.29ರಂದು ಬೆಳಗ್ಗೆ 10.30ರಿಂದ 12.30ರವರೆಗೆ ಕಾಲೇಜು ಆವರಣದಲ್ಲಿ ಪರೀಕ್ಷೆ ನಡೆಯಲಿದೆ. ಆಸಕ್ತರು ಏ.27ರೊಳಗೆ ನೋಂದಣಿ ಮಾಡಿಕೊಳ್ಳಬೇಕೆಂದು ಕೋರಲಾಗಿದೆ. ಮಾಹಿತಿಗೆ ಮೊ.9611012411, 8867320033 ಸಂಪರ್ಕಿಸಬಹುದು.



ಡಾ.ರಾಜ್‌ಕುಮಾರ್ ಜನ್ಮದಿನದ ಅಂಗವಾಗಿ ಮೈಸೂರಿನ ಡಾ.ರಾಜ್‌ಕುಮಾರ್ ಉದ್ಯಾನವನದಲ್ಲಿರುವ ಅವರ ಪ್ರತಿಮೆಗೆ ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿ ಮಾಲಾರ್ಪಣೆ ಮಾಡಿದರು. ಈ ವೇಳೆ ಜೆಡಿಎಸ್ ಮುಖಂಡ ದೊಡ್ಡಕಾನ್ಯ ಮಹೇಶ್, ಸಿ.ಗೋಪಾಲಗೌಡ, ರಾಚಪ್ಪ ಇನ್ನಿತರರಿದ್ದರು.

ನಿಧನ



ಬಿ.ಕೆಂಪೇಗೌಡ (ಬುಲೆಟ್ ರಾಜು)

ಮೈಸೂರು,ಏ.25– ಮೈಸೂರಿನ ಪಡುವರಹಳ್ಳಿ ನಿವಾಸಿ, ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯೆ ಶ್ರೀಮತಿ ಶಾಂತಕುಮಾರಿ ಅವರ ಪತಿ ಸರ್ಕಾರಿ ಮುದ್ರಣಾಲಯದ ನೌಕರ ಬಿ.ಕೆಂಪೇಗೌಡ (ಬುಲೆಟ್ ರಾಜು) ಅವರು ಗುರುವಾರ ರಾತ್ರಿ ನಿಧನರಾದರು. ಅವರಿಗೆ 58 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಶುಕ್ರವಾರ) ಮಧ್ಯಾಹ್ನ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉಡಿಯಂಡ ಕಿರಣ್ ಕುಟ್ಟಯ್ಯ



ಮೈಸೂರು,ಏ.25–ಮೈಸೂರಿನ ಎನ್.ಆರ್.ಮೊಹಲ್ಲಾ ನಿವಾಸಿ ದಿವಂಗತ ಬಾಬು ಅಯ್ಯಣ್ಣ ಅವರ ಪುತ್ರ ಉಡಿಯಂಡ ಕಿರಣ್ ಕುಟ್ಟಯ್ಯ (55) ಗುರುವಾರ ನಿಧನರಾದರು. ಮೃತರು ಪತ್ನಿ ವಿವಿನ ಕುಟ್ಟಯ್ಯ (ಕೀರ್ತಿಯಂಡ), ಪುತ್ರ ಮನವ್ ಅಯ್ಯಣ್ಣ ಕುಟ್ಟಯ್ಯ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಂಡೇರಾ ಗಂಗಮ್ಮ



ಮೈಸೂರಿನ ಹಿನಕಲ್ ರಸ್ತೆಯಲ್ಲಿರುವ ಎಸ್.ವಿ. ರಿಜೆನ್ಸಿ ಅಪಾರ್ಟ್‌ಮೆಂಟ್ ನಿವಾಸಿ ಹಾಗೂ ನಿವೃತ್ತ ಉಪಾಧ್ಯಾಯರಾದ ಕಂಡೇರಾ ಗಂಗಮ್ಮ (ಬಾಡಿರಾ) ಬುಧವಾರ ಸಂಜೆ ನಿಧನರಾದರು. ಅವರಿಗೆ 90 ವರ್ಷ ವಯಸ್ಸಾಗಿತ್ತು. ದಿವಂಗತ ಕಂಡೇರಾ ಎಸ್. ಮುದ್ದಪ್ಪ ಅವರ ಪತ್ನಿಯಾದ ಇವರು, ಮೂವರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ಗುರುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಘುಲಾಲ್ ಅಂಡ್ ಕಂಪನಿ ಮುಂಭಾಗ ಆಗಾಗ ಚಿಮ್ಮುತ್ತಿದೆ ಒಳಚರಂಡಿ ನೀರು; ರಾಜಮಾರ್ಗದ ಬಾಜಲ್ಲಿ ಏನಿದು ಹೇಸಿಗೆ!





ಮೈಸೂರು, ಏ.25– ಮೈಸೂರಿನ ಹೃದಯ ಭಾಗ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ರಘುಲಾಲ್ ಅಂಡ್ ಕಂಪನಿ ಔಷಧಿ ಅಂಗಡಿಯ ಮುಂದೆ ಮತ್ತೆ ಮತ್ತೆ ಒಳಚರಂಡಿ ನೀರು ಚಿಮ್ಮುತ್ತಿದೆ. ರಘುಲಾಲ್ ಅಂಡ್ ಕಂಪನಿ ಪಕ್ಕದ ಮ್ಯಾನ್‌ಹೋಲ್ ತುಂಬಿ ರಸ್ತೆಗೆ ಹರಿಯುತ್ತಿದ್ದು, ಇದರಿಂದ ಔಷಧಿಗಳನ್ನು ಕೊಳ್ಳಲು ಮತ್ತು ಇತರೆ ಅಂಗಡಿಗಳಿಗೆ ಬರುವ ಗ್ರಾಹಕರಿಗೆ ತುಂಬಾ ತೊಂದರೆಯಾಗಿದೆ. ಇದರಿಂದ ಬರುವ ದುರ್ನಾತದಿಂದ ಗ್ರಾಹಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ದೂರು ನೀಡಿದಾಗ ಮ್ಯಾನ್‌ಹೋಲ್ ಸ್ವಚ್ಛಗೊಳಿಸಿದ್ದಾಗ್ಯೂ ಆಗಿಂದಾಗ್ಗೆ ಈ ಸಮಸ್ಯೆ ಎದುರಾಗುತ್ತಿರುತ್ತದೆ. ಇದು ಮೈಸೂರು ಮಹಾನಗರ ಪಾಲಿಕೆಯು ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ನಿರ್ವಹಣೆ ಮಾಡುವ ಸ್ಥಿತಿಯನ್ನು ತೋರಿಸುತ್ತದೆ. ರಘುಲಾಲ್ ಅಂಗಡಿ ಮುಂದಿನ ಒಳಚರಂಡಿ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಕಂಡುಹಿಡಿಯುವಲ್ಲಿ ವಿಫಲವಾಗಿದೆ. ಇದರ ಬಗ್ಗೆ ಮೈಸೂರು ನಗರಪಾಲಿಕೆ ಆಯುಕ್ತರು ಕ್ರಮ ತೆಗೆದುಕೊಳ್ಳುವರೇ?

ಕನ್ನಡ ಅಂಕಿ ಬಳಸಿದ್ದಕ್ಕೆ ಸರ್ಕಾರಿ ಕೆಲಸದಿಂದ ವಜಾಗೊಂಡ ದೇಶವಳ್ಳಿ ರಾಮಚಂದ್ರಚಾರಿಗೆ ನಾಲ್ಕು ದಶಕ ಕಳೆದರೂ ಸಿಗದ ನ್ಯಾಯ

ಮೈಸೂರು, ಏ.25–ಕನ್ನಡ ಅಂಕಿ ಬಳಸಿದ ಕಾರಣಕ್ಕಾಗಿ ಸರ್ಕಾರಿ ಸೇವೆಯಿಂದ ವಜಾಗೊಂಡ ತಮ್ಮ ಪತಿಯ ಪ್ರಕರಣದ ಇತ್ತೀಚಿನ ಸ್ಥಿತಿಗತಿ ಬಗ್ಗೆ ಅಧಿಕಾರಿಗಳು ಮಾಹಿತಿ ನೀಡುತ್ತಿಲ್ಲ ಎಂದು ದೇಶವಳ್ಳಿ ರಾಮಚಂದ್ರಚಾರಿ ಅವರ ಪತ್ನಿ ಎಂ.ಎ. ಶಾಂತಕುಮಾರಿ ಆರೋಪಿಸಿದ್ದಾರೆ.

ತಮ್ಮ ಪತಿ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಹಾಸನ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾಗ ಕನ್ನಡ ಅಂಕಿಗಳನ್ನು ಬಳಸಿದರು ಎಂಬ ಕಾರಣಕ್ಕಾಗಿ 1993ರಲ್ಲಿ ಅವರನ್ನು ಕೆಲಸದಿಂದ ವಜಾ ಮಾಡಲಾಯಿತು. ನಂತರ ಅವರ ವಿರುದ್ಧ ಕ್ರಿಮಿನಲ್ ಪ್ರಕರಣವನ್ನೂ ದಾಖಲಿಸಲಾಗಿತ್ತು. ಕ್ರಿಮಿನಲ್ ಪ್ರಕರಣದಲ್ಲಿ ಅವರು ನಿರ್ದೋಷಿ ಎಂದು ನ್ಯಾಯಾಲಯ ತೀರ್ಪು ನೀಡಿದೆ. ಆದರೂ ಈವರೆವಿಗೂ ಪತಿಗೆ ಸರ್ಕಾರದಿಂದ ನ್ಯಾಯ ದೊರಕಿಲ್ಲ ಎಂದು ಅವರು ತಿಳಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಳೆದ ಡಿಸೆಂಬರ್ 8ರಂದು ವಿಧಾನಸೌಧದಲ್ಲಿ ನಡೆಸಿದ ಜನ ಸ್ಪಂದನಾ ಕಾರ್ಯಕ್ರಮದಲ್ಲಿ ತಮ್ಮ ಪತಿಯ ಪ್ರಕರಣದ ಇತ್ತೀಚಿನ ಸ್ಥಿತಿಗತಿ ಬಗ್ಗೆ ತಾವು ತೋರಿದ್ದು, ಮುಖ್ಯಮಂತ್ರಿಗಳ ವಿಶೇಷಾಧಿಕಾರಿಗಳು ನಮಗೆ ಮಾಹಿತಿ ನೀಡುವಂತೆ ತಿಳಿಸಿದ್ದರೂ ಕೂಡ ಈವರೆವಿಗೂ ಯಾವುದೇ ಅಧಿಕಾರಿ ನಮಗೆ ಮಾಹಿತಿ ನೀಡಿಲ್ಲ ಎಂದು ಆರೋಪಿಸಿರುವ ಅವರು, ಈ ಸಂಬಂಧ ಮುಖ್ಯಮಂತ್ರಿಗಳಿಗೆ ಪತ್ರ ರವಾನಿಸಿದ್ದಾರೆ.



ಡಾ.ರಾಜ್ ಶಿವಸೈನ್ಯ ಶಿವರಾಜ್‌ಕುಮಾರ್ ಅಭಿಮಾನಿಗಳ ಸಂಘದ ವತಿಯಿಂದ ಡಾ.ರಾಜ್‌ಕುಮಾರ್ ಅವರ 95ನೇ ಜಯಂತಿ ಪ್ರಯುಕ್ತ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ರಘು ಕೌಟಿಲ್ಯ, ಚಲನಚಿತ್ರ ನಟ ಸೋಮಣ್ಣ, ಬಿ.ಎಸ್.ರವಿ, ಮಹೇಶ್, ದೊರೆ, ರಾಜೇಂದ್ರ, ರಮೇಶ್, ರಾಮೇಗೌಡ ಇನ್ನಿತರರಿದ್ದರು.

ನೇಹಾ ಹಿರೇಮಠ್ ಹತ್ಯೆ ಪ್ರಕರಣದಲ್ಲಿ ಇಡೀ ಸಮುದಾಯವನ್ನು ದೂಷಿಸುತ್ತಿರುವುದು ಸರಿಯಲ್ಲ

ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್

ಮೈಸೂರು,ಏ.25(ಜಿಎ)–ಹುಬ್ಬಳ್ಳಿಯ ನೇಹಾ ಪ್ರಕರಣದಲ್ಲಿ ಪ್ರೇಮ ವೈಫಲ್ಯದ ವಿಕೃತ ಮನಸ್ಸಿನ ಯುವಕ ಮಾಡಿದ ಕೃತ್ಯಕ್ಕೆ ಇಡೀ ಸಮುದಾಯವನ್ನು ದೂಷಿಸುತ್ತಿರುವುದು ಸರಿಯಲ್ಲ ಎಂದು ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಹೇಳಿದರು.

ಮೈಸೂರಿನ ಎಸ್‌ಡಿಪಿಐನ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹುಬ್ಬಳ್ಳಿಯ ಯುವತಿ ನೇಹಾ ಪ್ರಕರಣದ ಬಗ್ಗೆ ನಮಗೂ ನೋವಿದೆ. ಆದರೆ, ರಾಜ್ಯ ಮತ್ತು ರಾಷ್ಟ್ರ ನಾಯಕರು ಸಂತಾಪ ಸೂಚಿಸುತ್ತಿದ್ದಾರೆ. ನ್ಯಾಯ ದೊರಕಬೇಕು ಎಂದು ಆಗ್ರಹಿಸುತ್ತಿದ್ದಾರೆ. ಈ ಪ್ರಕರಣವನ್ನು ಇಟ್ಟುಕೊಂಡು ಬಿಜೆಪಿ ಮತ್ತು ಕಾಂಗ್ರೆಸ್ ರಾಜಕೀಯ ಮಾಡುತ್ತಿರುವುದು ಸರಿಯಲ್ಲ ಎಂದರು.

ದೇಶದ ಪ್ರಧಾನ ಮಂತ್ರಿಗಳಿಂದ ಹಿಡಿದು ಯಾವುದೇ ಬಿಜೆಪಿ ಮುಖಂಡರು ಮಣಿಪುರ ಘಟನೆ ಬಗ್ಗೆ ಮಾತನಾಡಲಿಲ್ಲ. ಆದರೆ, ಈ ಪ್ರಕರಣದಲ್ಲಿ ಮುಸ್ಲಿಂ ಯುವಕ ಇರುವುದರಿಂದ ದೇಶದಲ್ಲಿ ಅಶಾಂತಿ ಮೂಡಿಸುವ ಮಟ್ಟಕ್ಕೆ ತಲುಪಿಸುತ್ತಿದ್ದಾರೆ. ಇತ್ತ ಮುಖ್ಯಮಂತ್ರಿಗಳು ಈ ಪ್ರಕರಣವನ್ನು ತಕ್ಷಣ ಸಿಐಡಿಗೆ ವಹಿಸಿದ್ದಾರೆ ಎಂದರು.

ಹುಬ್ಬಳ್ಳಿಯ ಪ್ರಕರಣಕ್ಕೆ ಇಷ್ಟು ಒತ್ತು ನೀಡುತ್ತಿರುವ ಬಿಜೆಪಿ, ಕಾಂಗ್ರೆಸ್ ಮುಖಂಡರು ಮೇಟಗಳ್ಳಿಯಲ್ಲಿ ಹಿಂದೂ ಯುವಕನೊಬ್ಬ ರುಕ್ಸಾನ ಎಂಬ ಮುಸ್ಲಿಂ ಯುವತಿಯನ್ನು ವಿವಾಹವಾಗುವುದಾಗಿ ನಂಬಿಸಿ ಮೋಸ ಮಾಡಿ ಆಕೆಯನ್ನು ಕೊಲೆ ಮಾಡಿರುವ ಬಗ್ಗೆ ಯಾರೂ ಪ್ರಶ್ನಿಸಲಿಲ್ಲ. ಸಿಎಂ ಗಂಭೀರವಾಗಿ ತೆಗೆದುಕೊಳ್ಳಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಗೋಷ್ಠಿಯಲ್ಲಿ ಸ್ವಾಮಿ, ಮಹಮ್ಮದ್ ಶಫಿವುಲ್ಲಾ, ಫರ್ಧಿನ್, ಫಿರ್ದೋಸ್, ಅಮ್ಜದ್ ಖಾನ್ ಇದ್ದರು.



ಕರ್ನಾಟಕ–ಗೋವಾ ಎನ್‌ಸಿಸಿ ನಿರ್ದೇಶನಾಲಯದ ಮಹಾನಿರ್ದೇಶಕ ಏರ್ ಕಮಾಂಡರ್ ಎಸ್.ಬಿ.ಅರುಣ್‌ಕುಮಾರ್ ಅವರು ಮೈಸೂರಿನ 3/– ಕೆಎಆರ್ ನೌಕಾ ಘಟಕಕ್ಕೆ ಭೇಟಿ ನೀಡಿದರು. ಈ ವೇಳೆ ಲೆಫ್ಟಿನೆಂಟ್ ಕಮಾಂಡರ್ ವಿನಯ್ ರಾಮಚಂದ್ರನ್, ಸಿಓಎಲ್ ರೋಹಿತ್ ಠಾಕೋರ್, ಗ್ರೂಪ್ ಕಮಾಂಡರ್, ಎನ್‌ಸಿಸಿ ಗ್ರೂಪ್ ಹೆಚ್‌ಕ್ಯೂ ಮೈಸೂರು ಮತ್ತು ಸಿಓಎಲ್ ಸಂಜಯ್ ಬಿಷ್ತ್, ಡೈರೆಕ್ಟರ್ (ಕರ್ನಾಟಕ –ಗೋವಾ), ಎಎನ್‌ಓ, ಪಿಐ ಸಿಬ್ಬಂದಿ, ನಾಗರಿಕ ಸಿಬ್ಬಂದಿ ಜೆಸಿಐ, ಕೆಡೆಟ್‌ಗಳು ಉಪಸ್ಥಿತರಿದ್ದರು.

ನಾಳೆ ಶಿವಾನುಭವ ದಾಸೋಹ ಉಪನ್ಯಾಸ

ಮೈಸೂರು,ಏ.25–ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಆಶ್ರಯದಲ್ಲಿ ಏ. 27ರಂದು ಸಂಜೆ 6ಕ್ಕೆ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಶಿವಾನುಭವ ದಾಸೋಹ ಮಾಲಿಕೆಯ 312ನೇ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ನಿವೃತ್ತ ಪ್ರಾಂಶುಪಾಲರು ಹಾಗೂ ಸುಗಮ ಸಂಗೀತ ಕಲಾವಿದರಾದ ಪ್ರೊ.ಎಸ್.ಮಲ್ಲಣ್ಣನವರು 'ಭುವನದ ಭಾಗ್ಯ ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳು' ಕುರಿತು ಉಪನ್ಯಾಸ ನೀಡಲಿದ್ದಾರೆ. ಮುಡಿಗುಂಡದ ಶ್ರೀ ವಿರಕ್ತಮಠದ ಶ್ರೀ ಶ್ರೀಕಂಠ ಸ್ವಾಮಿಗಳು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ.

ಬೇಸಿಗೆ ಚೆಸ್ ತರಬೇತಿ ಶಿಬಿರ

ಮೈಸೂರು, ಏ.25–ಮೈಸೂರು ಚೆಸ್ ಕ್ಲಬ್ ವತಿಯಿಂದ ಏ.29ರಿಂದ ಮೇ 19ರವರೆಗೆ ನಂಜುಮಳಿಗೆ ವೃತ್ತದ ಹತ್ತಿರವಿರುವ ಗೋಪಾಲ ಸ್ವಾಮಿ ಶಿಶುವಿಹಾರದಲ್ಲಿ ಬೇಸಿಗೆ ಚೆಸ್ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ವಿವರಗಳಿಗೆ ಕಾರ್ಯದರ್ಶಿ ಕೆ.ಜಿ.ಜಯಪ್ರಕಾಶ್, ಮೊ. 9880547121 ಸಂಪರ್ಕಿಸಬಹುದು.

ವಿವಿಧ ಕ್ಷೇತ್ರದ ಸಾಧಕರಿಗೆ ಡಾ.ರಾಜ್ ಕಲಾ ಸೇವಾರತ್ನ ಪ್ರಶಸ್ತಿ ಪ್ರದಾನ



ಮೈಸೂರು,ಏ.25–ಡಾ.ರಾಜ್‌ಕುಮಾರ್‌ರವರ 96ನೇ ಹುಟ್ಟುಹಬ್ಬದ ಪ್ರಯುಕ್ತ ಒಂದು ವಾರ ಕಾಲ ನಾದಬ್ರಹ್ಮ ಸಭಾಂಗಣದಲ್ಲಿ ನಗರದ ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್ ವತಿಯಿಂದ ಮೈಸೂರು ಜಯರಾಂ ಅವರ ಸಾರಥ್ಯದಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹತ್ತು ಮಂದಿ ಕಲಾವಿದರನ್ನು ಗುರುತಿಸಿ ಡಾ.ರಾಜ್ ಕಲಾ ಸೇವಾರತ್ನ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.


ಡ್ರಂ ವಾದಕ ಸಿ.ಆರ್.ರಾಘವೇಂದ್ರ ಪ್ರಸಾದ್, ಗಾಯಕರಾದ ಶಾರದಮ್ಮ, ಸರ್ವಮಂಗಳ, ತಬಲಾ ವಾದಕ ಎಂ.ಸಿ.ಜಗದೀಶ್, ರಂಗಭೂಮಿ ಕಲಾವಿದೆ ಮೇರಿ ವಸಂತ, ರಿದಂ ಪ್ಯಾಡ್ ವಾದಕ ಆ್ಯಂಡ್ರೊ, ಗಾಯಕರಾದ ರಾ.ಬಿ.ನಾಗರಾಜು, ರಮೇಶ್ ವೈ., ನೃತ್ಯ ನಿರ್ದೇಶಕ ಮೈಸೂರು ರಾಜು, ಗಾಯಕ ರವಿ ಆರ್. ಇವರುಗಳು ಡಾ.ರಾಜ್ ಕಲಾ ಸೇವಾ ರತ್ನ ಪ್ರಶಸ್ತಿಗೆ ಭಾಜನರಾದರು.

ಕಾರ್ಯಕ್ರಮವನ್ನು ಡಾ.ರಾಜ್‌ಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಉದ್ಯಮಿ ರವಿಗೌಡ, ನಾನು ನನ್ನ ತಂದೆ–ತಾಯಿಗಳಿಂದ ಏನು ಕಲಿತೆ ಗೊತ್ತಿಲ್ಲ. ಆದರೆ ಅಣ್ಣಾವ್ರ ಚಿತ್ರಗಳನ್ನು ನೋಡಿ ಅದರಿಂದ ಪ್ರಭಾವಿತನಾಗಿ ಸಾಕಷ್ಟು ಕಲಿತಿದ್ದೇನೆ. ಕೆಂಟಕಿ ಕರ್ನಲ್ ಪ್ರಶಸ್ತಿ ದಕ್ಷಿಣ ಭಾರತದ ಕೆಲವೇ ಕೆಲವು ಕಲಾವಿದರಿಗೆ ಸಿಗುವ ಪ್ರಶಸ್ತಿ. ಅದು ಡಾ.ರಾಜ್‌ರವರಿಗೆ ಸಿಕ್ಕಿರುವುದು ನಿಜಕ್ಕೂ ಶ್ಲಾಘನೀಯ. ಮೈಸೂರು ಜಯರಾಂರವರು ಇಂತಹ ಕಾರ್ಯಕ್ರಮ ಆಯೋಜನೆಗೊಳಿಸಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. 2028ಕ್ಕೆ ಡಾ.ರಾಜ್‌ಕುಮಾರ್‌ರವರ 'ಶತಮಾನೋತ್ಸವ ಸಂಭ್ರಮ' (100 ವರ್ಷ)ದ ಸಂದರ್ಭದಲ್ಲಿ ಮೈಸೂರಿನಲ್ಲಿ ಒಂದು ತಿಂಗಳ ಕಾಲ ನಿರಂತರವಾಗಿ ಡಾ.ರಾಜ್‌ಕುಮಾರ್‌ರವರ ವೈವಿಧ್ಯಮಯ ಕಾರ್ಯಕ್ರಮಗಳನ್ನು ನಡೆಸಲು ಸಿದ್ಧತೆ ಮಾಡಿಕೊಳ್ಳುತ್ತಿರುವ ಮೈಸೂರು ಜಯರಾಂರವರಿಗೆ ಶುಭ ಕೋರಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾರ್ಯಕ್ರಮದ ಆಯೋಜಕರಾದ ಮೈಸೂರು ಜಯರಾಂ, ನನಗೆ ಎಷ್ಟೇ ಕಷ್ಟ ಬಂದರೂ ಕಾರ್ಯಕ್ರಮ ಮಾತ್ರ ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ. ನಾನು ಸರ್ಕಾರಿ ವೃತ್ತಿಯಲ್ಲಿ ಸಾಕಷ್ಟು ಏರಿಳಿತಗಳನ್ನು ಕಂಡವನು. ನನ್ನನ್ನು ಸಾಕಷ್ಟು ಬಾರಿ ಕೆಲಸದಿಂದ ತೆಗೆದು ಪುನಃ ಅವರೇ ಕರೆದು ಸೇರಿಸಿಕೊಂಡ ಉದಾಹರಣೆಗಳೂ ಸಾಕಷ್ಟಿವೆ. ಮನೆಯಲ್ಲಿ ಇಷ್ಟೊಂದು ಸಾಲ ಮಾಡಿ ಏಕೆ ಕಾರ್ಯಕ್ರಮ ಮಾಡುತ್ತೀರಿ ಎಂದು ಪ್ರಶ್ನಿಸುತ್ತಾರೆ. ಆದರೆ ನಾನು ಇದ್ಯಾವುದಕ್ಕೂ ದೃತಿಗೆಡದೇ ಅಣ್ಣಾವ್ರ ಕಾರ್ಯಕ್ರಮವನ್ನು ನಿರಂತರವಾಗಿ ಆಯೋಜಿಸುತ್ತಾ ಬಂದಿದ್ದೇನೆ ಎಂದು ಭಾವುಕರಾಗಿ ನುಡಿದರು.

ಇದಾದ ನಂತರ ಡಾ.ರಾಜ್‌ಕುಮಾರ್ ಅವರು ಅಭಿನಯಿಸಿರುವ ಹಲವಾರು ಚಲನಚಿತ್ರಗೀತೆಗಳನ್ನು ಕಲಾವಿದರು ಸುಶ್ರಾವ್ಯವಾಗಿ ಪ್ರಸ್ತುತಪಡಿಸಿದರು. ವೇದಿಕೆಯಲ್ಲಿ ಗೌರವಾಧ್ಯಕ್ಷ ವೈ.ಡಿ. ರಾಜಣ್ಣ, ನಿರೂಪಕ ಸುಧೀಂದ್ರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

26.04.2024 ಶುಕ್ರವಾರ, ಮಳೆ ನಕ್ಷತ್ರ: ಅಶ್ವಿನಿ 13.04.2024 ರಿಂದ 26.04.2024 ಕ್ರೋಧಿ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಅನೂರಾಧ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7ರವರೆಗೆ
- **ಶ್ರೀ ರಾಮಸೇವಾ ಮಂಡಲಿ :** 71ನೇ ವರ್ಷದ ಶ್ರೀ ರಾಮೋತ್ಸವ, ವಿದುಷಿ ಶ್ರೀಮತಿ ಸುಕನ್ಯಾ ರಾಂಗೋಪಾಲ್ ಅವರಿಂದ ಲಯರಾಗ, ಸ್ತ್ರೀತಾಳ್ ತರಂಗ್ ತಂಡದಿಂದ ಸಮರ್ಪಣ, ಸ್ಥಳ: ಶ್ರೀರಾಮ ಸೇವಾ ಮಂಡಲಿ, 9ನೇ ಅಡ್ಡ ರಸ್ತೆ, ವಿದ್ಯಾರಣ್ಯಪುರಂ, ಸಂಜೆ 6.30ಕ್ಕೆ.
- **ಶ್ರೀ ರಾಮಾಭ್ಯುದಯ ಸಭಾ, ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** 134ನೇ ವರ್ಷದ ಶ್ರೀ ರಾಮೋತ್ಸವ, ವಿದ್ವಾನ್ ಡಾ. ವಿದ್ಯಾಭೂಷಣ್ ಮತ್ತು ತಂಡದಿಂದ ಶಾಸ್ತ್ರೀಯ ಸಂಗೀತ ಮತ್ತು ದೇವರನಾಮ, ಸ್ಥಳ: ಶ್ರೀರಾಮಮಂದಿರ, ವಿನೋಬ ರಸ್ತೆ, ಶ್ರೀರಾಮಪೇಟೆ ಸಂಜೆ 6.30 ರಿಂದ.
- **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** 58ನೇ ವರ್ಷದ ರಾಮೋತ್ಸವ, ಬೆಳಗ್ಗೆ 7ಕ್ಕೆ ಶ್ರೀ ದುರ್ಗಾ ಹೋಮ, ಸಂಜೆ 6ರಿಂದ ವಿದುಷಿ ಕೃತ್ತಿಕಾ ಶ್ರೀನಿವಾಸನ್ ಅವರಿಂದ ಗಾಯನ, ವಿದ್ವಾನ್ ಅಮೋಘ ನಡದೂರ್–ಪಿಟೀಲು, ವಿದುಷಿ ದೀಪಿಕಾ ಶ್ರೀನಿವಾಸನ್–ಮೃದಂಗ, ವಿದ್ವಾನ್ ಟಿ.ಎನ್. ಅಜಯ್–ಘಟಂ, ಸ್ಥಳ: ರಾಮಮಂದಿರ ಆವರಣ, ಜಯನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ವಿನೋದಾ ರವಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ– ಲೀಲಾ ಅಪ್ಪಾಜಿ, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ. ಶಿಲ್ಪಾರಾಣಿ ಎನ್. ಆರ್., ಮುಖ್ಯಸ್ಥರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಪ್ರಸ್ತುತಿ– ಎನ್. ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.10 ನಮ್ಮ ಅರೋಗ್ಯ, 10.00 ಶಾಸ್ತ್ರೀಯ ಸಂಗೀತ–ಕೆ.ಎಂ. ಸುರೇಂದ್ರ – ನಾಗಸ್ವರ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ, 1.20 ಭಾವಗೀತೆ, 1.30 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಡಾ. ಆರ್. ಎನ್. ಶ್ರೀಲತಾ – ಹಾಡುಗಾರಿಕೆ, 4.00 ಮಹಿಳಾರಂಗ–ಆರ್ಥಿಕ ಹಕ್ಕುಗಳು ಹಾಗೂ ಹೂಡಿಕೆ ಕುರಿತು ಲೆಕ್ಕ ಪರಿಶೋಧಕಿ ತೇಜಶ್ರೀ ಹೆಗಡೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಕೆ. ಬಿ. ಮೀನಾ, 4.30 ವೃತ್ತಿ ಮಾರ್ಗದರ್ಶನ– ಸೂಕ್ಷ್ಮಜೀವಿ ವಿಜ್ಞಾನ ಅಂದರೆ ಮೈಕ್ರೋಬಯಾಲಜಿ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಜೆ.ಎಸ್.ಎಸ್. ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್‌ನ ಮೈಕ್ರೊಬಯಾಲಜಿ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಡಾ. ಸುಮನಾ ಕೆ. ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ. ಶಿಲ್ಪಾರಾಣಿ ಎನ್. ಆರ್., ಮುಖ್ಯಸ್ಥರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಪ್ರಸ್ತುತಿ–ಎನ್. ಕೇಶವಮೂರ್ತಿ, 6.55 ಕೃಷಿರಂಗ ನಾಟಕ 'ಆಶಾಕಿರಣ', ರಚನೆ –ಡಾ. ಚಂದ್ರಶೇಖರಮೂರ್ತಿ, ನಿರ್ಮಾಣ–ಪ್ರಭುಸ್ವಾಮಿ ಮಳೀಮಠ್, ಕೃಷಿಲೋಕ, ಪ್ರಸ್ತುತಿ–ಆರ್. ಲೋಕೇಶ್ವರಿ, 8.00 ಸಂಧ್ಯಾರಾಗ– ಮಗನೊಂದಿಗೆ ಸ್ಕೂಟರ್‌ನಲ್ಲಿ ದೇಶದ ತೀರ್ಥಕ್ಷೇತ್ರಗಳನ್ನು ದರ್ಶಿಸಿದ ಮೈಸೂರಿನ ಚೂಡಾರತ್ನಮ್ಮ ಅವರೊಂದಿಗೆ ಮಾತುಕತೆ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ನಿಲಯದ ಕಲಾವಿದರಿಂದ ವಾದ್ಯವೃಂದ, 10.00 ತತ್ವ ಸಂಚಾರ, 10.30 ಸವಿನೆನಪು

ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಮತಯಾಚನೆ



ಮೈಸೂರು, ಏ.25(ಎಂಕೆ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಮತಯಾಚನೆ ನಡೆಸಿದರು.

ಗುರುವಾರ ಸಂಜೆ ವೇಳೆ ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕೆಲ ಕೈಗಾರಿಕೆಗಳಿಗೆ ಭೇಟಿ ನೀಡಿದ ಅವರು, ಕಾರ್ಖಾನೆಯಿಂದ ಕೆಲಸ ಮುಗಿಸಿಕೊಂಡು ಹೊರಬಂದ ಕಾರ್ಮಿಕರಿಗೆ ಮತ ನೀಡಿ, ತಪ್ಪದೇ ಮತದಾನ ಮಾಡುವ ಮೂಲಕ ಬೆಂಬಲಿಸುವಂತೆ ಮನವಿ ಮಾಡಿದರು.

ಮಹಿಳೆಯರು ಸ್ವಾವಲಂಬನೆಯಿಂದ ಜೀವನ ನಡೆಸಲು ರಾಜ್ಯ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ಅನುಕೂಲ ಮಾಡಿಕೊಟ್ಟಿವೆ. ಅದೇ ರೀತಿ ಮುಂದಿನ ದಿನಗಳಲ್ಲಿ ಕಾರ್ಮಿಕರ ಜೀವನ ಹಸನಾಗಲು ಕೇಂದ್ರದಲ್ಲಿಯೂ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದು ಅನಿವಾರ್ಯವಾಗಿದೆ. ಆದ್ದರಿಂದ ತಾವುಗಳು ನನಗೆ ಮತ ನೀಡಿ, ರಾಜ್ಯ ಸರ್ಕಾರದ ಸಿಎಂ, ಡಿಸಿಎಂ ಹಾಗೂ ಕಾಂಗ್ರೆಸ್ ಕೇಂದ್ರ ನಾಯಕರ ಕೈ ಬಲಪಡಿಸಲು ಸಹಕರಿಸಿ ಎಂದು ಕೋರಿದರು. ನಂತರ ಕುಂಬಾರ ಕೊಪ್ಪಲಿನ ಮನೆ ಮನೆ ಭೇಟಿ ನೀಡಿ ಮತ ತಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡುವಂತೆ ಮೊರೆ ಇಟ್ಟರು.



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಪರ ಮಾಜಿ ಮೇಯರ್ ಶಿವಕುಮಾರ್, ಕುವೆಂಪುನಗರ ವಿವಿಧೆಡೆ ಮನೆ ಮನೆಗೆ ತೆರಳಿ ಮತಯಾಚನೆ ನಡೆಸಿದರು. ವಾರ್ಡಿನ ಅಧ್ಯಕ್ಷ ಸಂಪತ್, ಉಮಾ, ಕೋಮಲ, ಮೀನಾಕ್ಷಿ ಉಪಸ್ಥಿತರಿದ್ದರು.



ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ಮಾಜಿ ಮೇಯರ್ ಹಾಗೂ ಬಿಜೆಪಿ ಮುಖಂಡ ಸಂದೇಶ್‌ಸ್ವಾಮಿ ಮನೆ ಮನೆಗೆ ತೆರಳಿ ಬಿಜೆಪಿ ಅಭ್ಯರ್ಥಿ ಯದುವೀರ್ ಪರ ಮತಯಾಚಿಸಿದರು. ಈ ವೇಳೆ ಪುನೀತ್, ಮುರುಳಿ ಹಾಜರಿದ್ದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಮನೆ ಮನೆ ಮತಯಾಚನೆ

ಮೈಸೂರು, ಏ.25(ಎಂಕೆ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣಾ ಮತದಾನಕ್ಕೆ ಇನ್ನು ಕೆಲವೇ ಕ್ಷಣಗಳಿವೆ. ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮನೆ ಮನೆ ಮತಯಾಚನೆ ಮೂಲಕ ಅಂತಿಮ ಹಂತದ ಕಸರತ್ತು ನಡೆಸಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ನಿವೃತ್ತ ಹಿರಿಯ ವೈದ್ಯ ಡಾ.ವಿ.ಲಕ್ಷ್ಮಿನಾರಾಯಣ ಅವರ ಮನೆಗೆ ಗುರುವಾರ ಮಧ್ಯಾಹ್ನ ಭೇಟಿ ನೀಡಿದ ಯದುವೀರ್, ನನಗೆ ಮತ ನೀಡುವ ಮೂಲಕ ಬೆಂಬಲ ನೀಡಬೇಕು ಎಂದು ಕೋರಿದರು. ಇದೇ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ನಿಮ್ಮ ಕುಟುಂಬಸ್ಥರು, ವೈದ್ಯಕೀಯ ಕ್ಷೇತ್ರದ ಸ್ನೇಹಿತರೆಲ್ಲರೂ ಬಿಜೆಪಿ ಅಭ್ಯರ್ಥಿಗೆ ಬೆಂಬಲ ನೀಡುವಂತೆ ತಾವು ತಿಳಿಸಬೇಕೆಂದು ಮನವಿ ಮಾಡಿದರು.

ಇದಕ್ಕೂ ಮುನ್ನ ಮನೆಗೆ ಆಗಮಿಸಿದ ಯದುವೀರ್ ಅವರಿಗೆ ಡಾ.ವಿ.ಲಕ್ಷ್ಮಿನಾರಾಯಣ ಅವರ ಪತ್ನಿ ಪ್ರೊ.ಲಕ್ಷ್ಮಿದೇವಿ, ಕೆಂಪು ನೀರು ಮಾಡಿ ದೃಷ್ಟಿ ತೆಗೆಯುವ ಮೂಲಕ ಅತ್ಯಂತ ಆತ್ಮೀಯವಾಗಿ ಸ್ವಾಗತಿಸಿದರು. ಕುಡಿಯಲು ಎಳನೀರು, ಡ್ರೈಫ್ರೂಟ್ಸ್‌ಗಳನ್ನು ನೀಡಿ ಆತ್ಮೀಯತೆ ತೋರಿದರು. ಹಾಗೆಯೇ ಡಾ.ವಿ.ಲಕ್ಷ್ಮಿನಾರಾಯಣ ಅವರ ಅಭಿನಂದನಾ ಗ್ರಂಥ 'ನಾರಾಯಣ ನಮನ', ಸಕ್ಕರೆಕಾಯಿಲೆ ಕುರಿತ 'ಮಧುಮೇಹ ಮನುಕುಲದ ಅಗೋಚರ ಶತ್ರು' ಹಾಗೂ 'ಡಯಾಬಿಟೀಸ್' ಕೃತಿಗಳನ್ನು ಯದುವೀರ್ ಅವರಿಗೆ ನೀಡಿ ಸತ್ಕರಿಸಿದರು.

ಪ್ರಮುಖ ನಾಲ್ವರು ಮುಖಂಡರು ಸಾಥ್



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್, ಹಿರಿಯ ವೈದ್ಯ ಡಾ.ವಿ.ಲಕ್ಷ್ಮಿನಾರಾಯಣ ಅವರ ಮನೆಗೆ ಭೇಟಿ ನೀಡಿ ಮತಯಾಚಿಸಿದರು. ಶಾಸಕ ಶ್ರೀವತ್ಸ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹಾಗೂ ಅಭ್ಯರ್ಥಿ ಪ್ರಚಾರ ಪ್ರಮುಖ್ ಹೇಮಂತ್‌ಕುಮಾರ್‌ಗೌಡ ಉಪಸ್ಥಿತರಿದ್ದರು.

ಪ್ರೊ.ಲಕ್ಷ್ಮಿದೇವಿ ಅವರು ಮಾತನಾಡುತ್ತಾ, ಯದುವೀರ್ ಸ್ಪರ್ಧಿಸುತ್ತಾರೆ ಎಂದಾಗ ಅವರ ಎದುರು ಯಾರೂ ನಿಲ್ಲಬಾರದು ಎಂದುಕೊಂಡಿದ್ದೇವು. ಮೈಸೂರು ಅರಸು ಮನೆತನದವರಿಗೆ ಸಂಸದರಾಗದಿದ್ದರೂ ಸಲ್ಲಬೇಕಾದ ಗೌರವ ಸಲ್ಲಲಿದೆ. ಆದರೂ ಯೋಗ್ಯರಾದವರು ಯೋಗ್ಯ ಸ್ಥಾನಕ್ಕೆ ಹೋಗಬೇಕು. ಹಾಗಾಗಿ ಯದುವೀರ್ ಸಂಸದರಾಗಲೇಬೇಕು ಎಂಬುದು ನಮ್ಮೆಲ್ಲರ ಆಶಯವಾಗಿದೆ. ಅದರಲ್ಲೂ ಅತೀ ಹೆಚ್ಚಿನ ಬಹುಮತ ಬರಬೇಕು ಎಂಬುದು ನಮ್ಮ ಸಂಕಲ್ಪವೂ ಆಗಿದೆ ಎಂದು ತಮ್ಮ ಇಂಗಿತ ವ್ಯಕ್ತಪಡಿಸಿದರು.

ನಿವೃತ್ತ ಹಿರಿಯ ಪ್ರಾಧ್ಯಾಪಕ ಪ್ರಧಾನ್ ಗುರುದತ್ ಅವರು, ಮೈಸೂರು ಒಡೆಯರು ರಾಜ್ಯಕ್ಕೆ ಕೊಟ್ಟಿರುವ ಕೊಡುಗೆಯನ್ನು ಯಾವ ಸರ್ಕಾರಗಳೂ ನೀಡಿಲ್ಲ. ಅವರ ಕೊಡುಗೆಗಳನ್ನು ಸ್ಮರಿಸಿದರೆ ಸಾಕು ಮತದಾರರು ತಾವಾಗಿಯೇ ಬಂದು ಯದುವೀರ್ ಅವರಿಗೆ ಮತ ನೀಡುತ್ತಾರೆ. ಯದುವೀರ್ ಅವರು ಗೆದ್ದರೆ ರಾಜ್ಯದ 28 ಲೋಕಸಭಾ ಕ್ಷೇತ್ರದ ಅಭ್ಯರ್ಥಿಗಳ ಪೈಕಿ ಅತ್ಯಂತ ಪ್ರಭಾವಿ ಸಂಸದರಾಗಿ ಗುರ್ತಿಸಿಕೊಳ್ಳಲಿದ್ದಾರೆ ಎಂದು ಭವಿಷ್ಯ ನುಡಿದರು.

ಕಾರ್ಯಯೋಜನೆ ರೂಪಿಸಿಕೊಂಡಿದ್ದಾರೆ: ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಮಾತನಾಡಿ, ಈಗಾಗಲೇ ಯದುವೀರ್ ಅವರು ಮೈಸೂರು ಮತ್ತು ಕೊಡಗು ಜಿಲ್ಲೆಯ ಜನತೆಯೊಂದಿಗೆ ಬೆರೆತಿದ್ದಾರೆ. ಜನರೊಂದಿಗೆ ಬೆರೆತವರು ಜನರ ಕೆಲಸ ಮಾಡುತ್ತಾರೆ ಎಂದು ಹೇಳಲಾಗದು. ಆದರೆ ಯದುವೀರ್ ಅವರು ಜನರೊಂದಿಗೆ ಬೆರೆಯುವುದಲ್ಲದೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ಸರ್ವಾಂಗೀಣ ಅಭಿವೃದ್ಧಿಗಾಗಿ ತಮ್ಮದೇ ಆದ ಕಾರ್ಯಯೋಜನೆ ರೂಪಿಸಿಕೊಂಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಅಲ್ಲದೆ ಸಾಹಿತಿಗಳಾದ ಪ್ರಧಾನ ಗುರುದತ್ ಅವರು, ತಮ್ಮ ಸಾಹಿತ್ಯ ವಲಯದ ಎಲ್ಲರಿಗೂ ಬಿಜೆಪಿ ಬೆಂಬಲಿಸುವಂತೆ ತಿಳಿಸಬೇಕು ಎಂದು ಕೋರಿದರು.

ಮತ ಪತ್ರ ನೀಡಿ ಬೆಂಬಲಿಸಲು ಮನವಿ: ಕಡೆಯಲ್ಲಿ ಮತದಾನದ ಮತ ಪತ್ರ ನೀಡಿದ ಯದುವೀರ್, ಬೆಂಬಲಿಸುವಂತೆ ಮನವಿ ಮಾಡಿದರು. ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹಾಗೂ ಅಭ್ಯರ್ಥಿ ಪ್ರಚಾರ ಪ್ರಮುಖ್ ಹೇಮಂತ್‌ಕುಮಾರ್‌ಗೌಡ ಉಪಸ್ಥಿತರಿದ್ದರು.

ಮತದಾರನ ಬಗ್ಗೆ ಸಂಶಯ ವ್ಯಕ್ತವಾದರೆ 'ಚಾಲೆಂಜ್'; ನೈಜ ಮತದಾರನ ಮತವನ್ನು ಬೇರೊಬ್ಬರು ಚಲಾಯಿಸಿದರೆ 'ಟೆಂಡರ್ಡ್' ವೋಟ್‌ಗೆ ಅವಕಾಶ

ಮೈಸೂರು, ಏ.25(ಎಸ್‌ಬಿಡಿ)– ಮತದಾರರ ಪಟ್ಟಿಯಲ್ಲಿರುವ ಅರ್ಹ ಮತದಾರರು 'ಚಾಲೆಂಜ್ಡ್ ವೋಟ್' ಹಾಗೂ 'ಟೆಂಡರ್ಡ್ ವೋಟ್' ಚಲಾಯಿಸಬಹುದು. ಈ ನಿಟ್ಟಿನಲ್ಲಿ ಪ್ರತಿ ಮತಗಟ್ಟೆಗೆ 20 ಬ್ಯಾಲೆಟ್ ಪೇಪರ್‌ಗಳನ್ನು ಒದಗಿಸಲಾಗಿದೆ ಎಂದು ಮೈಸೂರು ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ಚಾಲೆಂಜ್ಡ್ ವೋಟ್: ಮತದಾರರ ಪಟ್ಟಿಯಲ್ಲಿ ಹೆಸರಿರುವ ವ್ಯಕ್ತಿ ಮತದಾನಕ್ಕೆ ತೆರಳಿದ ವೇಳೆ ರಾಜಕೀಯ ಪಕ್ಷಗಳ ಪೋಲಿಂಗ್ ಏಜೆಂಟರು ಆ ವ್ಯಕ್ತಿಯ ಗುರುತು ಪ್ರಶ್ನಿಸಿದಾಗ ಅಥವಾ ಸಂಶಯ ವ್ಯಕ್ತಪಡಿಸಿದಾಗ 'ಚಾಲೆಂಜ್ಡ್ ವೋಟ್' ಅವಕಾಶ ಬಳಸಿಕೊಳ್ಳಬಹುದು. ಅಂದರೆ ಮತದಾರರ ಪಟ್ಟಿಯಲ್ಲಿರುವ ಹೆಸರಿನ ನಿರ್ದಿಷ್ಟ ವ್ಯಕ್ತಿ ತಾನೇ ಎಂದು 'ಸವಾಲಿನ ಮತ' ಚಲಾಯಿಸಬಹುದು.

ಪ್ರಕ್ರಿಯೆ ಹೇಗೆ?: ಮತದಾನಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಪೋಲಿಂಗ್ ಏಜೆಂಟ್, ಅವರನ್ನು ಚುನಾವಣೆ ಮತಗಟ್ಟೆ ಅಧಿಕಾರಿ (Presiding Officer) ಬಳಿ ಕರೆದೊಯ್ಯುತ್ತಾರೆ. ಆ ಅಧಿಕಾರಿ ಮತದಾರನ ಪರಿಚಯ ದೃಢೀಕರಿಸಲು ವಿಚಾರಣೆ ನಡೆಸಿ, ನಿಗದಿತ 2 ರೂ. ಠೇವಣಿ ಪಾವತಿಸಿಕೊಂಡು ಮತದಾನಕ್ಕೆ ಅವಕಾಶ ನೀಡುತ್ತಾರೆ. ನಂತರ ಆ ಮತದಾರ ಚುನಾವಣಾ ಆಯೋಗ ನಿಗದಿಪಡಿಸಿದ ಯಾವುದಾದರೂ ದಾಖಲೆ ಪ್ರಸ್ತುತಪಡಿಸಿ, ಇವಿಎಂ ಮೂಲಕ 'ಚಾಲೆಂಜ್ಡ್' ಮತ ಚಲಾಯಿಸಬಹುದು.

ಟೆಂಡರ್ಡ್ ವೋಟ್: ಮತದಾರರ ಪಟ್ಟಿಯಲ್ಲಿ ಹೆಸರಿರುವ ವ್ಯಕ್ತಿ ಮತದಾನಕ್ಕೆ ಆಗಮಿಸಿದ ವೇಳೆ ತಮ್ಮ ಮತವನ್ನು ಅದಾಗಲೇ ಬೇರೊಬ್ಬರು ಚಲಾಯಿಸಿದ್ದರೆ 'ಟೆಂಡರ್ಡ್ ವೋಟ್'ಗೆ ಸಂಬಂಧಿಸಿದ ಮತದಾರ, ಮತಗಟ್ಟೆ ಅಧಿಕಾರಿ ಬಳಿ ಮನವಿ ಮಾಡಬಹುದು. ಒಂದು ಗ್ರಾಮ ಅಥವಾ ಮತಗಟ್ಟೆ ವ್ಯಾಪ್ತಿಯಲ್ಲಿ ಒಂದೇ ಹೆಸರಿನ ಹಲವರು ಮತದಾರರಿದ್ದರೆ, ಕಾಕತಾಳೀಯವಾಗಿ ಅವರ ತಂದೆ ಹೆಸರೂ ಒಂದೇ ಆಗಿದ್ದಾಗ ಈ ರೀತಿಯ ಸಮಸ್ಯೆ ಸೃಷ್ಟಿಯಾಗಬಹುದು ಅಥವಾ ನಿರ್ದಿಷ್ಟ ಮತದಾರರ ಹೆಸರಿನಲ್ಲಿ ಬೇರೊಬ್ಬರು ಮತ ಚಲಾಯಿಸಿರುವ ಸಾಧ್ಯತೆಯೂ ಹೆಚ್ಚಿರುತ್ತದೆ. ಹಾಗಾದಾಗ ನೈಜ ಮತದಾರ 'ಟೆಂಡರ್ಡ್ ಬ್ಯಾಲೆಟ್ ಪೇಪರ್'ಗೆ ಅರ್ಜಿ ಸಲ್ಲಿಸಬಹುದು. ನಂತರ ಆ ಮತದಾರನಿಗೆ ಬ್ಯಾಲೆಟ್ ಪೇಪರ್ ಮೂಲಕ ಮತ ಚಲಾಯಿಸಲು ಅವಕಾಶ ನೀಡಲಾಗುವುದು.

ಪಟ್ಟಿಯಲ್ಲಿ ಹೆಸರಿರಬೇಕು: ಈ ಬಗ್ಗೆ ಪ್ರತಿಕ್ರಿಯಿಸಿದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ ಎಲ್.ಎಂ.ನದೀಶ್, 'ಚಾಲೆಂಜ್ಡ್ ವೋಟ್' ಹಾಗೂ 'ಟೆಂಡರ್ಡ್ ವೋಟ್' ಚಲಾವಣೆ ಬಲು ಅಪರೂಪ. ಆದರೆ ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದಿದ್ದರೂ ಆಧಾರ್ ಕಾರ್ಡ್ ಅಥವಾ ಎಪಿಕ್ ಕಾರ್ಡ್ ತೋರಿಸಿ ಮತ ಚಲಾಯಿಸಬಹುದು ಎಂದು ಸಾಮಾಜಿಕ ಜಾಲತಾಣದಲ್ಲಿ ತಪ್ಪು ಮಾಹಿತಿ ಹರಿಬಿಡಲಾಗುತ್ತದೆ. ಆದರೆ ಮತದಾರರ ಪಟ್ಟಿಯಲ್ಲಿ ಹೆಸರಿದ್ದವರು ಮಾತ್ರ ಮತದಾನ ಮಾಡಲು ಸಾಧ್ಯ. ಚಾಲೆಂಜ್ಡ್ ಹಾಗೂ ಟೆಂಡರ್ಡ್ ವೋಟ್ ಅವಕಾಶಕ್ಕೂ ಇದು ಅನ್ವಯವಾಗುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ.

ರಮ್ಮನಹಳ್ಳಿ ಚೆಕ್‌ಪೋಸ್ಟ್‌ನಲ್ಲಿ 81.90 ಲಕ್ಷ ರೂ. ಹಣ ಪತ್ತೆ



ಮೈಸೂರು, ಏ.25(ಎಂಕೆ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆಗೆ ಕೆಲ ಗಂಟೆಗಳಷ್ಟೇ ಬಾಕಿ ಇರುವ ಹೊತ್ತಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರಮ್ಮನಹಳ್ಳಿ ಚೆಕ್‌ಪೋಸ್ಟ್ ಬಳಿ 81.90 ಲಕ್ಷ ರೂ. ಪತ್ತೆಯಾಗಿದೆ.

ಗುರುವಾರ ರಾತ್ರಿ 8.30ರ ವೇಳೆ ಮಂಡ್ಯ ಕಡೆಯಿಂದ ರಮ್ಮನಹಳ್ಳಿ ಮಾರ್ಗವಾಗಿ ಮೈಸೂರು ಕಡೆಗೆ ಬರುತ್ತಿದ್ದ ಟಾಟಾ ಟಿಯಾಗೋ ಇವಿ (ಕೆ.ಎ.09.ಎಂಜೆ. 4996 ಎಲೆಕ್ಟ್ರಿಕಲ್ ಕಾರ್) ಕಾರನ್ನು ರಮ್ಮನಹಳ್ಳಿ ಚೆಕ್‌ಪೋಸ್ಟ್‌ನಲ್ಲಿ ತಡೆದು ತಪಾಸಣೆ ನಡೆಸಿದ ಚೆಕ್‌ಪೋಸ್ಟ್‌ನ ಎಸ್‌ಎಸ್‌ಟಿ ಮುಖ್ಯಸ್ಥ ನವೀನ್ ಮತ್ತು ಸಿಬ್ಬಂದಿ ತಂಡ ದಾಖಲೆ ಇಲ್ಲದ 81,90,100 ರೂ. ಹಣವನ್ನು ವಶಕ್ಕೆ ಪಡೆದಿದ್ದಾರೆ.

ವಿಷಯ ತಿಳಿದು ಸ್ಥಳಕ್ಕೆ ಭೇಟಿ ನೀಡಿದ ಎಆರ್‌ಓ ಎಲ್.ಎಂ.ನಂದೀಶ್, ತಹಸಿಲ್ದಾರ್ ಮಹೇಶ್‌ಕುಮಾರ್ ಹಾಗೂ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಕಾರಿನಲ್ಲಿ ಹಣ ಸಾಗಿಸುತ್ತಿದ್ದ ಮೂವರನ್ನು ಪ್ರಶ್ನಿಸಿದ್ದಾರೆ. ಆದರೆ ಹಣದ ಬಗ್ಗೆ ಸರಿಯಾದ ಮಾಹಿತಿ ಹಾಗೂ ಸೂಕ್ತ ದಾಖಲೆ ನೀಡದ ಕಾರಣ ಅನುಮಾನಾಸ್ಪದವಾಗಿ ಹಣ ಸಾಗಿಸಲಾಗುತ್ತಿದೆ ಎಂದು ಪತ್ತೆಯಾಗಿರುವ ಹಣವನ್ನು ವಶಕ್ಕೆ ಪಡೆದಿದ್ದಾರೆ.

ಮತದಾನ ಮಾಡಿದವರಿಗೆ ಗೋದಿ ಹಿಟ್ಟು ವಿತರಣೆ, ಹೋಟೆಲ್, ಹೆಚ್‌ಪಿ ಗ್ಯಾಸ್‌ನಿಂದ ರಿಯಾಯ್ತಿ ಆಫರ್



ಮೈಸೂರು, ಏ.25(ಎಸ್‌ಬಿಡಿ)– ಮತದಾನ ಮಾಡಿದ ಗ್ರಾಹಕರಿಗೆ ರಿಯಾಯ್ತಿ ಘೋಷಿಸುವ ಮೂಲಕ ಮೈಸೂರಿನ ವ್ಯಾಪಾರೋದ್ಯಮಿಗಳು ಪ್ರಜಾಪ್ರಭುತ್ವ ಹಬ್ಬದ ಸಂಭ್ರಮ ಹೆಚ್ಚಿಸಿದ್ದಾರೆ.

ಗೋದಿ ಹಿಟ್ಟು ವಿತರಣೆ: ಮೈಸೂರಿನ ಚಿಕ್ಕ ಗಡಿಯಾರ ವೃತ್ತದ ಬಳಿ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಮತದಾನ ಮಾಡಿ ಮೊದಲು ಬರುವ 2 ಸಾವಿರ ಜನರಿಗೆ ವಾಸವಿ ಸೇವಾ ಟ್ರಸ್ಟ್ ವತಿಯಿಂದ ತಲಾ 1 ಕೆಜಿ ಗೋದಿ ಹಿಟ್ಟು ನೀಡಲಾಗುತ್ತಿದೆ. ಇದಕ್ಕಾಗಿ ವಿಶೇಷ ಸ್ಟಾಲ್ ವ್ಯವಸ್ಥೆ ಮಾಡಿಕೊಳ್ಳಲಾಗಿದೆ.

ನಜರ್‌ಬಾದ್‌ನಲ್ಲಿರುವ ದಕ್ಷಿಣ ಪಾಕ ಹೋಟೆಲ್‌ನಲ್ಲಿ ಬೆಳಗ್ಗೆಯೇ ಮತ ಚಲಾಯಿಸಿ ಬರುವ ಗ್ರಾಹಕರಿಗೆ ಚೌಚೌ ಬಾತ್ ನೀಡಲು ಉದ್ದೇಶಿಸಲಾಗಿದೆ. ನಜರ್‌ಬಾದ್‌ನ ಹನುಮಂತು ಹೋಟೆಲ್ ಹಾಗೂ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಪುಣೇರಿ ಶ್ರೀಮಾನ್ ಚಹಾ ಅಂಗಡಿಯಲ್ಲಿ ರಿಯಾಯ್ತಿ ಘೋಷಿಸಲಾಗಿದೆ. ಶುಕ್ರವಾರ ಬೆಳಗ್ಗೆಯೇ ಮತ ಚಲಾಯಿಸಿದವರು ಈ ರೀತಿಯ ಹಲವು ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬಹುದು.

ಹೆಚ್‌ಪಿ ಗ್ಯಾಸ್ ಆಫರ್: ಮೈಸೂರು, ಚಾಮರಾಜನಗರ, ಮಂಡ್ಯ, ರಾಮನಗರ ಜಿಲ್ಲೆಯ ಮತದಾರರಿಗೆ ಹೆಚ್‌ಪಿ ಗ್ಯಾಸ್ ವಿನೂತನ ಆಫರ್ ನೀಡಿದೆ. ಹೆಚ್‌ಪಿ ಗ್ಯಾಸ್ ಖರೀದಿಯಲ್ಲಿ ಶಿಫಾರಸ್ಸು ಮಾಡಲಾದ 3 ಮತ್ತು 4 ಬರ್ನರ್ ಗ್ಲಾಸ್ ಟಾಪ್ ಸ್ಟೌವ್ ಮತ್ತು 2 ಬರ್ನರ್ ಸ್ಟೌವ್ ಹಾಗೂ ಇತರ ಉತ್ಪನ್ನಗಳ ಮೇಲೆ 500 ರೂ. ರಿಯಾಯ್ತಿ ಪಡೆಯಬಹುದು. ಅಲ್ಲದೆ ಉಚಿತವಾಗಿ ನಿಮ್ಮ ಅಡುಗೆ ಮನೆ ಸುರಕ್ಷತೆ ತಪಾಸಣೆ ಕಲ್ಪಿಸುವುದರ ಜೊತೆಗೆ ಸುರಕ್ಷಾ ಪೈಪ್ ಖರೀದಿಯಲ್ಲೂ ರಿಯಾಯ್ತಿ ಪಡೆಯಬಹುದು. ಏ.26ರಿಂದ ಜೂನ್ 4ರವರೆಗೂ ಈ ಆಫರ್ ಇರಲಿದ್ದು, ಹತ್ತಿರದ ಹೆಚ್‌ಪಿ ಗ್ಯಾಸ್ ವಿತರಕರನ್ನು ಸಂಪರ್ಕಿಸಬಹುದು ಎಂದು ಮೈಸೂರಿನ ಹೆಬ್ಬಾಳು ರಿಂಗ್ ರಸ್ತೆಯಲ್ಲಿನ ಅಮರ್ ದೀಪ್ ಗ್ಯಾಸ್ ಏಜೆನ್ಸಿ ಮಾಲೀಕ ಮೆಹುಲ್ ಜೆಪಟೇಲ್ ತಿಳಿಸಿದ್ದಾರೆ.

ಶೇ.30ರಷ್ಟು ರಿಯಾಯ್ತಿ: ಚಾಮುಂಡಿ ಬೆಟ್ಟದ ತಪ್ಪಲಿನ ಮರಳು ಶಿಲ್ಪ ಕಲಾವಿದೆ ಎಂ.ಎನ್.ಗೌರಿ ಅವರು ನಿರ್ಮಿಸಿರುವ ಸ್ಯಾಂಡ್ ಮ್ಯೂಸಿಯಂಗೆ ವೋಟ್ ಮಾಡಿ ಬರುವ ಪ್ರವಾಸಿಗರಿಗೆ ಟಿಕೆಟ್ ದರದಲ್ಲಿ ಶೇ.30ರಷ್ಟು ರಿಯಾಯ್ತಿ ನೀಡಲಾಗುತ್ತಿದೆ. ಮತದಾನ ಮಾಡಿರುವುದನ್ನು ಖಚಿತಪಡಿಸಿ ಈ ರಿಯಾಯ್ತಿ ಪಡೆಯಬಹುದು ಎಂದು ಅವರು ಹೇಳಿದ್ದಾರೆ. ಮೈಸೂರಿನ ವಿಜಯನಗರ 2ನೇ ಹಂತದ ಸ್ಮೈಲ್ ಆರ್ಕಿಟೆಕ್ ಡೆಂಟಲ್ ಕ್ಲಿನಿಕ್‌ನಲ್ಲೂ ನಿರ್ದಿಷ್ಟ ಸಂಖ್ಯೆಯ ಜನರಿಗೆ ಉಚಿತ ದಂತ ತಪಾಸಣೆ ಸೇವೆ ಕಲ್ಪಿಸಲಾಗುತ್ತಿದೆ.

ಹೀಗೆ ಹಲವು ಹೋಟೆಲ್ ಹಾಗೂ ಅಂಗಡಿಗಳಲ್ಲಿ ರಿಯಾಯ್ತಿ ನೀಡಲಾಗುತ್ತಿದ್ದು, ಮತದಾನ ಮಾಡಿ ಕೈ ಬೆರಳಿಗೆ ಹಚ್ಚುವ ಅಳಿಸಲಾಗದ ಶಾಯಿ ತೋರಿಸುವ ಮೂಲಕ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬಹುದು.

ವಿ.ರಾಮಸ್ವಾಮಿ ಮನವೊಲಿಕೆ ಫಲಶ್ರುತಿ; ಮತದಾನ ಬಹಿಷ್ಕಾರ ಕೈಬಿಟ್ಟ ಗ್ರಾಮಸ್ಥರು



ಚಾಮರಾಜನಗರ, ಏ.25– ಮತದಾನದಿಂದ ವಂಚಿತರಾಗದಂತೆ ನಂಜನಗೂಡು ತಾಲೂಕು ಬದನವಾಳು ಗ್ರಾಮಸ್ಥರ ಮನವೊಲಿಸುವಲ್ಲಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಸಹೋದರ ವಿ.ರಾಮಸ್ವಾಮಿ ಯಶಸ್ವಿಯಾದರು.

ಕೆಲ ಕಾರಣಗಳಿಂದ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಮತದಾನ ಬಹಿಷ್ಕರಿಸಲು ಬದನವಾಳು ಗ್ರಾಮದ ಹಲವರು ಚಿಂತನೆ ಮಾಡಿದ್ದರು. ವಿಷಯ ತಿಳಿದ ರಾಜಕೀಯ ಮುಖಂಡರು ಹಾಗೂ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ, ಮತದಾನದಿಂದ ದೂರ ಉಳಿಯದಂತೆ ಮನವಿ ಮಾಡಿದ್ದರು. ಆದರೂ ಗ್ರಾಮಸ್ಥರ ನಿಲುವು ಬದಲಾಗಿರಲಿಲ್ಲ. ಈ ಬಗ್ಗೆ ಮಾಹಿತಿ ತಿಳಿದ ವಿ.ರಾಮಸ್ವಾಮಿ ಅವರು ತಮ್ಮ ಬೆಂಬಲಿಗರೊಂದಿಗೆ ತೆರಳಿ ಗ್ರಾಮಸ್ಥರ ಮನವೊಲಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಕೋಟೆಹುಂಡಿ ಮಹದೇವು, ಭರತ್ ರಾಮಸ್ವಾಮಿ, ಹೆಚ್.ಜಿ.ರಮೇಶ್, ಶಿವಕುಮಾರ್, ಸುರೇಶ್, ದೇವಪುತ್ರ, ರಂಗಸ್ವಾಮಿ, ರವಿ ದೇವಪ್ರಕಾಶ್, ಮಹದೇವ್, ದೇವರಾಜ್, ರಾಜೇಶ್, ಸಿದ್ದಲಿಂಗ ಮತ್ತಿತರರಿದ್ದರು.

ಇದೇ ಸಂದರ್ಭದಲ್ಲಿ ಮನೆ ಮನೆಗೆ ತೆರಳಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ಮತ ಯಾಚಿಸಿದರು. ಕಾಂಗ್ರೆಸ್ ಯುವ ಮುಖಂಡ ಭರತ್ ರಾಮಸ್ವಾಮಿ, ಮುಡಾ ಮಾಜಿ ಸದಸ್ಯ ಸಿ.ಜಿ.ಶಿವಕುಮಾರ್, ಶ್ರೀನಿವಾಸ ಪ್ರಸಾದ್ ಅವರ ಹಿರಿಯ ಆಪ್ತ ಸಹಾಯಕ ಹೆಚ್.ಜಿ.ರಮೇಶ್, ಬದನವಾಳು ಬಸವಣ್ಣ ಮತ್ತಿತರ ಮುಖಂಡರು ಪ್ರತ್ಯೇಕ ತಂಡಗಳಲ್ಲಿ ಮತ ಯಾಚನೆ ಮಾಡಿದರು.

ಜ್ಞಾನವಾಪಿಯಲ್ಲಿ ASI ಸಮೀಕ್ಷೆಗೆ ತೀರ್ಪು ನೀಡಿದ್ದ ನ್ಯಾಯಾಧೀಶರಿಗೆ ವಿದೇಶಗಳಿಂದ ಜೀವ ಬೆದರಿಕೆ ಕರೆ!



ನವದೆಹಲಿ: ಜ್ಞಾನವಾಪಿ ಪ್ರಕರಣದ ತೀರ್ಪು ನೀಡಿದ ನ್ಯಾಯಾಧೀಶ ರವಿ ದಿವಾಕರ್ ಅವರಿಗೆ ವಿದೇಶಿ ಕರೆಗಳಿಂದ ಬೆದರಿಕೆಗಳು ಬರುತ್ತಿವೆ. ಈ ಸಂಬಂಧ ನ್ಯಾಯಾಧೀಶ ರವಿ ದಿವಾಕರ್ ಅವರು ಬರೇಲಿಯ ಹಿರಿಯ ಪೊಲೀಸ್ ವರಿಷ್ಠಾಧಿಕಾರಿಗೆ ಪತ್ರ ಬರೆದು ಮಾಹಿತಿ ನೀಡಿದ್ದಾರೆ.

ಮಾಧ್ಯಮ ವರದಿಗಳ ಪ್ರಕಾರ, ಏಪ್ರಿಲ್ 15ರಂದು ರಾತ್ರಿ 8:42ಕ್ಕೆ ನ್ಯಾಯಾಧೀಶ ರವಿ ದಿವಾಕರ್ ಅವರ ವೈಯಕ್ತಿಕ ಸಂಖ್ಯೆಗೆ ಅಂತಾರಾಷ್ಟ್ರೀಯ ಸಂಖ್ಯೆಯಿಂದ ಕರೆ ಬಂದಿತ್ತು. ಕರೆ ಮಾಡಿದವರು ಜೀವ ಬೆದರಿಕೆ ಹಾಕಿದ್ದಾರೆ. ಆದರೆ, ಈ ಕರೆಯ ನಂತರ ನ್ಯಾಯಾಧೀಶರು ಯಾವುದೇ ಕರೆಗೆ ಉತ್ತರಿಸಲಿಲ್ಲ. ಈ ಬಗ್ಗೆ ಮಾಹಿತಿ ನೀಡಿದ ನ್ಯಾಯಾಧೀಶ ರವಿ ದಿವಾಕರ್ ಸಿಬ್ಬಂದಿ, ಕೆಲ ದಿನಗಳ ಹಿಂದೆ ಅಪರಿಚಿತ ಫೋನ್‌ನಿಂದ ಬೆದರಿಕೆ ಬಂದಿತ್ತು. ಈ ಬಗ್ಗೆ ಪೊಲೀಸ್ ಅಧಿಕಾರಿಗಳಿಗೆ ಪತ್ರ ಬರೆದು ಘಟನೆಯ ಬಗ್ಗೆ ಮಾಹಿತಿ ನೀಡಿದ್ದೇನೆ ಎಂದರು. ಈ ಹಿಂದೆಯೂ ನ್ಯಾಯಾಧೀಶ ರವಿ ದಿವಾಕರ್ ಅವರಿಗೆ ಬೆದರಿಕೆಗಳು ಬಂದಿದ್ದವು. ಜ್ಞಾನವಾಪಿ ಪ್ರಕರಣದ ತೀರ್ಪು ನೀಡಿದ ನಂತರ, ರವಿ ದಿವಾಕರ್ ಅವರನ್ನು ಬರೇಲಿಗೆ ವರ್ಗಾಯಿಸಲಾಯಿತು. ಇದಾದ ಬಳಿಕ ನ್ಯಾಯಾಧೀಶ ರವಿ ದಿವಾಕರ್ ಹಾಗೂ ಅವರ ಕುಟುಂಬಕ್ಕೆ ಸರ್ಕಾರ ಭದ್ರತೆ ಒದಗಿಸಿತ್ತು.

ನ್ಯಾಯಾಧೀಶ ರವಿ ದಿವಾಕರ್ ಪರವಾಗಿ, ಪೊಲೀಸ್ ವರಿಷ್ಠಾಧಿಕಾರಿಗೆ ಪತ್ರ ಬರೆದು ಸಂಪೂರ್ಣ ವಿಷಯದ ಬಗ್ಗೆ ತಿಳಿಸಲಾಗಿದೆ. ಏಪ್ರಿಲ್ 15ರಂದು ರಾತ್ರಿ 8:42 ಕ್ಕೆ ಅಂತಾರಾಷ್ಟ್ರೀಯ ಸಂಖ್ಯೆಯಿಂದ ಖಾಸಗಿ ಸಂಖ್ಯೆಗೆ ಕರೆ ಬಂದಿತ್ತು ಎಂದು ಪತ್ರದಲ್ಲಿ ಬರೆಯಲಾಗಿದೆ. ಕಳೆದ 20–25 ದಿನಗಳಲ್ಲಿ ಅಂತಾರಾಷ್ಟ್ರೀಯ ಸಂಖ್ಯೆಗಳಿಂದ ಹಲವು ಕರೆಗಳು ಮತ್ತು ಬೆದರಿಕೆಗಳು ಬಂದಿವೆ

ಮುಂದಿನ ಐದು ದಿನ ರಾಜ್ಯದಲ್ಲಿ 2ರಿಂದ 3 ಡಿಗ್ರಿ ಸೆಲ್ಸಿಯಸ್ ತಾಪಮಾನ ಹೆಚ್ಚಳ ಸಾಧ್ಯತೆ



ಮೈಸೂರು,ಏ.25(ಪಿಎಂ)– ಮುಂದಿನ ಐದು ದಿನಗಳ ಕಾಲ ರಾಜ್ಯದಲ್ಲಿ ಗರಿಷ್ಠ ತಾಪಮಾನ 2ರಿಂದ 3 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗುವ ಸಾಧ್ಯತೆ ಇದೆಯೆಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಎಚ್ಚರಿಸಿದೆ. ಈಗಾಗಲೇ ರಣಬಿಸಿಲಿನಿಂದ ತತ್ತರಿಸಿರುವ ಜನತೆ ಇದೀಗ, ಮತ್ತಷ್ಟು ಹೆಚ್ಚಾಗಬಹುದಾದ ತಾಪದಿಂದ ತಪ್ಪಿಸಿಕೊಳ್ಳಲು ಮಾರ್ಗೋಪಾಯ ಕಂಡುಕೊಳ್ಳಬೇಕಾಗಿದೆ.

ಚಾಮರಾಜನಗರ, ಕೊಡಗು, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಏ.24 ರಿಂದ 28ರವರೆಗೆ ಬಿಸಿಗಾಳಿ ನಿರೀಕ್ಷೆ ಇದೆಯೆಂದೂ ಐಎಂಡಿ ತಿಳಿಸಿದೆ. ಐಎಂಡಿ ಇಂದಿನಿಂದ (ಗುರುವಾರದಿಂದ) ಐದು ದಿನಗಳವರೆಗೆ ಕರ್ನಾಟಕದ ಬಹುತೇಕ ಭಾಗಗಳಲ್ಲಿ ಬಿಸಿಗಾಳಿ ಬೀಸುವ ಎಚ್ಚರಿಕೆ ನೀಡಿದೆ. ಬೆಳಗ್ಗೆ 11ರಿಂದ ಸಂಜೆ 4ರವರೆಗೆ ಹೊರ ಹೋಗುವುದನ್ನು ತಪ್ಪಿಸುವಂತೆಯೂ ಸೂಚಿಸಿದೆ.

ಕೊಂಕಣ, ಗೋವಾ, ಆಂಧ್ರಪ್ರದೇಶ, ಕರ್ನಾಟಕ, ತೆಲಂಗಾಣ, ಪುದುಚೇರಿ, ತಮಿಳುನಾಡು ಮತ್ತು ಕೇರಳ ಸೇರಿದಂತೆ ಭಾರತದ ಹೆಚ್ಚಿನ ಭಾಗಗಳಲ್ಲಿ ಬೀಸಿಗಾಳಿ ಹೆಚ್ಚಾಗಲಿದೆ. ಐಎಂಡಿ ಕರ್ನಾಟಕಕ್ಕೆ ಆರೆಂಜ್ ಅಲರ್ಟ್ ಘೋಷಿಸಿದೆ. ಸೂರ್ಯನ ತಾಪಕ್ಕೆ ದೀರ್ಘಕಾಲ ತೆರೆದುಕೊಳ್ಳುವವರಲ್ಲಿ ಶಾಖ ಸಂಬಂಧಿತ ಅನಾರೋಗ್ಯ ಸಮಸ್ಯೆ ಎದುರಾಗುವ ಸಾಧ್ಯತೆ ಹೆಚ್ಚಿದೆ. ಹಾಗಾಗಿ ಮಕ್ಕಳು, ವಯೋವೃದ್ಧರು ಹಾಗೂ ಅನಾರೋಗ್ಯಪೀಡಿತರು ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ತಿಳಿಸಿದೆ.

ಗರಿಷ್ಠ ತಾಪಮಾನವು 40 ಡಿಗ್ರಿ ಸೆಲ್ಸಿಯಸ್ ದಾಟಿದಾಗ ಅಥವಾ ನಿರ್ದಿಷ್ಟ ಜಿಲ್ಲೆಯ ತಾಪಮಾನವು ಸಾಮಾನ್ಯಕ್ಕಿಂತ 4.5 ಡಿಗ್ರಿ ಸೆಲ್ಸಿಯಸ್ ಹೆಚ್ಚಾದಾಗ ಬಿಸಿಗಾಳಿಯ ಅಲರ್ಟ್ ನೀಡಲಾಗುವುದು ಎಂದು ಐಎಂಡಿಯ ಬೆಂಗಳೂರು ಕೇಂದ್ರ ತಿಳಿಸಿದೆ. ಮೈಸೂರು,



ಮಂಡ್ಯ, ವಿಜಯಪುರ, ಯಾದಗಿರಿ, ಕೊಪ್ಪಳ, ರಾಯಚೂರು, ಬಾಗಲಕೋಟೆ, ಕಲಬುರಗಿ, ಬಳ್ಳಾರಿ, ಚಿತ್ರದುರ್ಗ, ಕೋಲಾರ, ತುಮಕೂರು, ಬೆಳಗಾವಿ, ಗದಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಬಿಸಿಗಾಳಿಯ ಎಚ್ಚರಿಕೆ ನೀಡಲಾಗಿದೆ. ಏ.24ರಿಂದ 28ರವರೆಗೆ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬಿಸಿಗಾಳಿಯ ವಾತಾವರಣ ಇರಲಿದೆ. ಒಟ್ಟಾರೆ ಮುಂದಿನ ಐದು ದಿನಗಳ ಕಾಲ ರಾಜ್ಯಾದ್ಯಂತ ಗರಿಷ್ಠ ತಾಪಮಾನ 2ರಿಂದ 3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗಲಿದೆ.

ಬಿಸಿಲಿನ ತಾಪವು ಶುಕ್ರವಾರದ ಮತದಾನದ ಪ್ರಕ್ರಿಯೆ ಮೇಲೂ ಪರಿಣಾಮ ಉಂಟು ಮಾಡಲಿದೆ. ರಾಜ್ಯದ 14 ಲೋಕಸಭಾ ಕ್ಷೇತ್ರಗಳಲ್ಲಿ ನಡೆಯುವ ಮತದಾನದಲ್ಲಿ ಬಿಸಿಲಿನ ಝಳದ ಕಾರಣಕ್ಕೆ ಹಿನ್ನಡೆಯಾಗಬಾರದೆಂದು ಚುನಾವಣಾ ಆಯೋಗ ಪೂರ್ವ ಸಿದ್ಧತೆ ಕೈಗೊಂಡಿದೆ. 'ತಾಪಮಾನ ಹೆಚ್ಚುತ್ತಿರುವ ಸ್ಥಳಗಳಲ್ಲಿ ವಿಶೇಷ ವ್ಯವಸ್ಥೆ ಕಲ್ಪಿಸುವ ಮೂಲಕ ಮತದಾನಕ್ಕೆ ಯಾವುದೇ ಅಡೆತಡೆಯಾಗದಂತೆ ಕ್ರಮ ವಹಿಸಲಾಗಿದೆ. ಎಲ್ಲಾ ಮತಗಟ್ಟೆಗಳಲ್ಲಿ ಆರೋಗ್ಯ ಅಧಿಕಾರಿಗಳು ಹಾಗೂ ಆಂಬುಲೆನ್ಸ್‌ಗಳ ವ್ಯವಸ್ಥೆ ಮಾಡಲಾಗಿದೆ' ಎಂದು ಕರ್ನಾಟಕ ಮುಖ್ಯ ಚುನಾವಣಾ ಅಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಗರಿಷ್ಠ ತಾಪಮಾನದ ಮುನ್ಸೂಚನೆ

- ಮುಂದಿನ 2 ದಿನಗಳಲ್ಲಿ ವಾಯುವ್ಯ ಭಾರತದ ಹಲವು ಭಾಗಗಳಲ್ಲಿ ಗರಿಷ್ಠ ತಾಪಮಾನದಲ್ಲಿ ಸುಮಾರು 2 ಡಿಗ್ರಿ ಸೆಲ್ಸಿಯಸ್ ಏರಿಕೆಯಾಗುವ ಸಾಧ್ಯತೆ ಇದೆ. ಜೊತೆಗೆ ನಂತರದ 3 ದಿನಗಳವರೆಗೆ 2ರಿಂದ 3 ಡಿಗ್ರಿ ಸೆಲ್ಸಿಯಸ್ ಕುಸಿಯುವ ಸಾಧ್ಯತೆ ಇದೆ.
- ಮುಂದಿನ 3 ದಿನಗಳಲ್ಲಿ ಪೂರ್ವ ಭಾರತದಲ್ಲಿ ಗರಿಷ್ಠ ತಾಪಮಾನದಲ್ಲಿ 2ರಿಂದ 3 ಡಿಗ್ರಿ ಸೆಲ್ಸಿಯಸ್ ಏರಿಕೆಯಾಗುವ ಸಾಧ್ಯತೆ ಇದೆ. ನಂತರ ಯಾವುದೇ ಗಮನಾರ್ಹ ಬದಲಾವಣೆ ಸಾಧ್ಯತೆ ಇಲ್ಲ.
- ಮುಂದಿನ 4ರಿಂದ 5 ದಿನಗಳಲ್ಲಿ ಮಹಾರಾಷ್ಟ್ರದಲ್ಲಿ ಗರಿಷ್ಠ ತಾಪಮಾನದಲ್ಲಿ 2ರಿಂದ 3 ಡಿಗ್ರಿ ಸೆಲ್ಸಿಯಸ್ ಏರಿಕೆಯಾಗುವ ಸಾಧ್ಯತೆ ಇದೆ.
- ದೇಶದ ಉಳಿದ ಭಾಗಗಳಲ್ಲಿ ಗರಿಷ್ಠ ತಾಪಮಾನದಲ್ಲಿ ಯಾವುದೇ ಗಮನಾರ್ಹ ಬದಲಾವಣೆಯು ಕಂಡು ಬರುವುದಿಲ್ಲ.
- ಅಸ್ಸಾಂ, ಮೇಘಾಲಯ, ನಾಗಾಲ್ಯಾಂಡ್, ಮಣಿಪುರ, ಮಿಜೋರಾಂ, ತ್ರಿಪುರಾ, ತಮಿಳುನಾಡು, ಪುದುಚೇರಿ, ಕಾರೈಕಾಲ್, ಕೇರಳ, ಮಾಹೆ, ಕರಾವಳಿ ಕರ್ನಾಟಕದಲ್ಲಿ ಬಿಸಿ ಹವಾಮಾನ ಶುಕ್ರವಾರ ದಾಖಲಾಗಲಿದೆ.

ನಕ್ಕರೆ ಅದೇ ಸ್ವರ್ಗ

ಸಂದರ್ಶಕ : (ಕಂಪ್ಯೂಟರ್ ಜ್ಞಾನದ ಬಗ್ಗೆ) "ಮಿಸ್ಟರ್ ನಿಮಗೆ ಮೈಕ್ರೋಸಾಫ್ಟ್ ಆಫೀಸ್ ಗೊತ್ತಾ?"

ಅಭ್ಯರ್ಥಿ : "ಸಾರಿ ಸರ್, ನಂಗದು ಗೊತ್ತಿಲ್ಲ. ಆದ್ರೆ ನೀವು ಅಡ್ರೆಸ್ ಕೊಟ್ರೆ ನಾ ಖಂಡಿತ ಆ ಆಫೀಸ್ ಎಲ್ಲಿದೆ ಅಂತ ಪತ್ತೆ ಮಾಡ್ತೀನಿ"

ಮೈಸೂರು ಮಿತ್ರ

ಶುಕ್ರವಾರ, 26 ಏಪ್ರಿಲ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ದುಃಖ ಆತ್ಮಪರಿಶೀಲನೆಯ ಮಾರ್ಗ, ದುಃಖ ಹೃದಯಕ್ಕೊಂದು ಸಂಸ್ಕಾರ ನೀಡುತ್ತದೆ. –ಸುಭಾಷಿತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೆಳಗಾನ ದುಡಿದರೂ
ಬೆಳೆ ಕಾಸಿನ ಆದಾಯವಿಲ್ಲ

ನಿಮ್ಮ ಪತ್ರಗಳು

ಎಲ್ಲರೂ ತಪ್ಪದೇ ಮತ ಚಲಾಯಿಸೋಣ!

ಮಾನ್ಯರೆ,

ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದಲ್ಲಿ 18 ವರ್ಷ ತುಂಬಿದ ಪ್ರತಿಯೊಬ್ಬ ನಾಗರಿಕನಿಗೂ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕು ಹಾಗೂ ಜವಾಬ್ದಾರಿ ಇದೆ. ಮತದಾನವು ಪ್ರಜಾಪ್ರಭುತ್ವದ ಮೂಲಾಧಾರವಾಗಿದೆ ಹಾಗೂ ಭಾರತದ ರಾಜಕೀಯ ಭವಿಷ್ಯವನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಮತದಾನವು ಹಕ್ಕು ಮಾತ್ರವಲ್ಲ, ನಾಗರಿಕ ಕರ್ತವ್ಯವೂ ಆಗಿದೆ ಮತ್ತು ಅದನ್ನು ಚಲಾಯಿಸುವ ಮೂಲಕ ಮತದಾರರು ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಆ ಮೂಲಕ ದೇಶದ ಸಮಗ್ರ ಪ್ರಗತಿಗೆ ಕೊಡುಗೆ ನೀಡಬಹುದಾಗಿದೆ.

ಜನತಂತ್ರ ವ್ಯವಸ್ಥೆಯ ಚುನಾವಣೆಯಲ್ಲಿ ಮತದಾನವು ಒಂದು ಪ್ರಮುಖವಾದ ಅಂಗ. ಪ್ರಜಾಪ್ರಭುತ್ವದಲ್ಲಿ ಮತದಾನ ಹಾಗೂ ಚುನಾವಣೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ದೇಶದ ಪ್ರತಿಯೊಬ್ಬ ಪ್ರಜೆಯೂ ಮತದಾನದ ಮಹತ್ವವನ್ನು ಅರಿತು ಚುನಾವಣೆಯ ಸಂದರ್ಭದಲ್ಲಿ ಯೋಗ್ಯ ಅಭ್ಯರ್ಥಿಗೆ ಮತ ಚಲಾಯಿಸುವ ಮೂಲಕ ಭಾರತದ ಪ್ರಜಾಪ್ರಭುತ್ವದ ರಕ್ಷಣೆ, ಸುಭದ್ರ ಹಾಗೂ ಅಭಿವೃದ್ಧಿಪರ ಸರ್ಕಾರ ರಚನೆಗೆ ಮುಂದಾಗಬೇಕಿದೆ. ಮತದಾನದ ಹಕ್ಕನ್ನು ಪ್ರತಿಯೊಬ್ಬರು ಸದ್ಬಳಕೆ ಮಾಡಿಕೊಳ್ಳುವುದರ ಮೂಲಕ ಉತ್ತಮ ರಾಷ್ಟ್ರದ ಭವಿಷ್ಯವನ್ನು ರೂಪಿಸುವ ಜವಾಬ್ದಾರಿ ಪ್ರತಿಯೊಬ್ಬ ಮತದಾರರ ಮೇಲಿದೆ ಎಂಬುದನ್ನು ತಿಳಿಯಬೇಕಿದೆ. ಭಾರತವು ಸಮಾನತೆಯನ್ನು ಸಾರಿದ ದೇಶ. ಅದಕ್ಕಾಗಿ ನಾವೆಲ್ಲರೂ ಯಾವುದೇ ಆಸೆ ಆಮಿಷಗಳಿಗೆ ಹಣದ ಕಟ್ಟುಗಳಿಗೆ ಬಲಿಯಾಗಿ, ಮತವನ್ನು ಮಾರಿಕೊಳ್ಳುವ ಮುಂಚೆ ಇವೆಲ್ಲದಕ್ಕಿಂತ ನಮ್ಮ ಮತ, ಬೆಲೆ ಬಾಳುವಂತಹದ್ದು. ನಮ್ಮ ಮತ ನಾಡಿನ ಹಿತಕ್ಕಾಗಿರಬೇಕೆಂದು ನಾವೆಲ್ಲರೂ ಅರಿತುಕೊಂಡಿರಬೇಕು.

ಕೆಲವರು ಮತದಾನದ ಬಗ್ಗೆ ನಿರ್ಲಕ್ಷ್ಯ ತೋರುತ್ತಾರೆ. ಮತದಾನದಂದು ಕೆಲವರು ವೈಯಕ್ತಿಕ ಮೋಜಿನಲ್ಲಿ ತಲ್ಲೀನರಾಗುವುದು, ಪ್ರವಾಸಕ್ಕೆ ಹೊರಡುವುದು ಹಾಗೂ ಕ್ಷುಲ್ಲಕ ಕಾರಣಕ್ಕಾಗಿ ಮತದಾನವನ್ನು ವಿರೋಧಿಸುವುದು..... ಈ ಎಲ್ಲಾ ನಿರ್ಲಕ್ಷ್ಯದಿಂದ ಭ್ರಷ್ಟ, ಸಂವಿಧಾನ ವಿರೋಧಿ ಹಾಗೂ ಅಜ್ಞಾನಿ ಜನಪ್ರತಿನಿಧಿಯೊಬ್ಬ ಆರಿಸಿ ಬಂದರೆ ಅದರ ಹೊಣೆಗಾರರು ನಾವೇ ಆಗಿರುತ್ತೇವೆ! ಆದ್ದರಿಂದ ಮತದಾನದ ಹಕ್ಕನ್ನು ತಪ್ಪದೇ ಮರೆಯದೆ ಜವಾಬ್ದಾರಿಯಿಂದ ಚಲಾಯಿಸಬೇಕು.

ಚುನಾವಣೆ ಎಂಬ ಔಪಚಾರಿಕ ವ್ಯವಸ್ಥೆಯಲ್ಲಿ ಮತದಾರ ಬಾಂಧವರೇ ಪ್ರಭುಗಳು. ಹೀಗೆ ನಮ್ಮ ಮತ ನಮ್ಮ ಹಕ್ಕು ನಮ್ಮ ಮತ ನಮ್ಮ ಜವಾಬ್ದಾರಿ ಎಂಬುದನ್ನು ಅರಿತು ನಾಳಿನ ಭವಿಷ್ಯಕ್ಕಾಗಿ, ಬಾಳಿನ ಸಾಮರಸ್ಯಕ್ಕಾಗಿ ಮತ್ತು ನಾಡಿನ ಏಕತೆಗಾಗಿ ಪ್ರತಿಯೊಬ್ಬ ಮತದಾರರು ಮತದಾನದ ದಿನದಂದು ತಪ್ಪದೆ, ಮರೆಯದೆ, ಉದಾಸೀನ ಹಾಗೂ ನಿರ್ಲಕ್ಷ್ಯ ತೋರದೆ ಮತದಾನ ಮಾಡೋಣ. ಆ ಮೂಲಕ ಸುಭದ್ರ ರಾಷ್ಟ್ರವನ್ನು ನಾವು ನೀವುಗಳೆಲ್ಲರೂ ನಿರ್ಮಿಸೋಣ.

–ಹರಳಹಳ್ಳಿ ಪುಟ್ಟರಾಜು, ಶಿಕ್ಷಕರು. ಪಾಂಡವಪುರ.

ಯಾರದ್ದೊ ತಪ್ಪಿಗೆ ಮತ್ಯಾರಿಗೋ ಶಿಕ್ಷೆಯಾಗದಿರಲಿ

ಮಾನ್ಯರೆ,

ಗ್ರಾಮೀಣ ಭಾಗದಲ್ಲಿ ಒಂದು ಗಾದೆ ಮಾತಿದೆ. ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಎಳೆದಂಗೆ ಅಂತ. ಈ ಮಾತು ಚಾಮರಾಜನಗರ ಬಿಜೆಪಿ ಅಭ್ಯರ್ಥಿ ಎಸ್. ಬಾಲರಾಜ್‌ಗೆ ಅನ್ವಯಿಸುತ್ತದೆ. ಮಾಜಿ ಸಚಿವ ಎನ್.ಮಹೇಶ್ ರಾಮನಗರದ ಕಾರ್ಯಕ್ರಮವೊಂದರಲ್ಲಿ ಆಡಿದ ಮಾತು ಬಾಲರಾಜ್‌ಗೆ ಸಂಕಷ್ಟ ತಂದಿದೆ. ಯಾರೋ ಮಾಡಿದ ತಪ್ಪಿಗೆ ಬಾಲರಾಜ್‌ರನ್ನು ಶಿಕ್ಷಿಸುವುದು ತಪ್ಪು. ಈಗಾಗಲೇ ಎನ್. ಮಹೇಶ್ ಅವರು ತಮ್ಮ ಹೇಳಿಕೆಗೆ ಸ್ಪಷ್ಟನೆ ಮತ್ತು ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಇದರ ಪ್ರತಿಕೂಲ ಪರಿಣಾಮ ಬೀರುವುದು ಬಿಜೆಪಿ ಅಭ್ಯರ್ಥಿ ಬಾಲರಾಜ್ ಮೇಲೆ. ಸದ್ಯ ಚುನಾವಣೆ ಇರುವುದರಿಂದ ಮಹೇಶ್ ಮೇಲಿನ ಸಿಟ್ಟನ್ನು ಬಾಲರಾಜ್ ಮೇಲೆ ತೋರಿಸಿ ಶಿಕ್ಷಿಸುವುದು ತಪ್ಪು. ಯಾರದೋ ತಪ್ಪಿಗೆ ಮತ್ಯಾರಿಗೋ ಶಿಕ್ಷೆಯಾಗದಿರಲಿ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.

ಹಕ್ಕಿನ ಚಲಾವಣೆಯಲ್ಲಿ ಆನಂದ ಅನುಭವಿಸಿ

ಮಾನ್ಯರೆ,

ನಾಡ ಹಬ್ಬ, ಧಾರ್ಮಿಕ ಸಂಸ್ಕೃತಿಯ ಹಬ್ಬಗಳೆಲ್ಲಾ ವರ್ಷಕ್ಕೊಮ್ಮೆ ಬರುವುದಾದರೆ ಜನತಂತ್ರದ ಹಬ್ಬ ಐದು ವರ್ಷಗಳಿಗೊಮ್ಮೆ ಬರಲಿದೆ. ನಿರೀಕ್ಷಿತ ಆ ಹಬ್ಬದ ದಿನ 26ನೇ ದಿನಾಂಕ ಬಂದಿದೆ. ಆದ್ದರಿಂದ ನಾವು ನಮ್ಮ ಹಕ್ಕನ್ನು ಚಲಾಯಿಸುವುದರ ಮೂಲಕ ವಾರ್ಷಿಕ ಹಬ್ಬಗಳಿಗಿಂತ ಹೆಚ್ಚು ಸಂಭ್ರಮಿಸಬೇಕು. ಯಾರು ಈ ಸಂಭ್ರಮದಲ್ಲಿ ಆನಂದವನ್ನು ಅನುಭವಿಸುತ್ತಾರೋ ಅವರೇ ನಿಜವಾದ ದೇಶಾಭಿಮಾನಿಗಳು. ಈ ಸಂಭ್ರಮದಲ್ಲಿ ಭಾಗಿಗಳಾಗದೇ ವ್ಯವಸ್ಥೆಯನ್ನು ದೂರುವುದರಲ್ಲಿ ಅರ್ಥವಿರುವುದಿಲ್ಲ. ಪ್ರಜಾತಂತ್ರದಲ್ಲಿ ನಮಗೆ ದೊರೆತಿರುವ ಈ ಹಕ್ಕು ಅಭೂತಪೂರ್ವ ಅಮೂಲ್ಯವಾದ ಅಧಿಕಾರ. ಆದುದರಿಂದ ಯಾವುದೇ ಪ್ರಲೋಭನೆಗಳಿಗೆ ಆಮಿಷಗಳಿಗೆ ಒಳಗಾಗದೇ ನಮ್ಮ ಆಯ್ಕೆಯ ಜನಪ್ರತಿನಿಧಿಯನ್ನು ಚುನಾಯಿಸಿ ಆ ಮೂಲಕ ದೇಶವನ್ನು ಅಭಿವೃದ್ಧಿ ಪಥದತ್ತ ಮುನ್ನಡೆಸುವಲ್ಲಿ ನಮ್ಮ ಪಾತ್ರವು ಸೇರಿದಂತಾಗಬೇಕು. ಸಮೀಕ್ಷೆಗಳ ಹಾಗೂ ಪ್ರಚಾರದ ಆಧಾರದ ಮೇಲೆ ಗೆಲ್ಲುವ ಸಂಭಾವ್ಯ ಅಭ್ಯರ್ಥಿಗೆ ಮತ ಹಾಕದಿದ್ದಲ್ಲಿ ತಮ್ಮ ಮತ ವ್ಯರ್ಥವೆಂದು ಭಾವಿಸಬಾರದು. ನೀವು ಮತ ಚಲಾಯಿಸುವ ಅಭ್ಯರ್ಥಿ ಗೆಲ್ಲಲಿ ಸೋಲಲಿ ಯೋಗ್ಯ, ಪ್ರಾಮಾಣಿಕ ವ್ಯಕ್ತಿಗೆ ಮತ ಚಲಾಯಿಸುವ ಮೂಲಕ ಅಂತಹವರಿಗೆ ಮನೋಸ್ಥೈರ್ಯ, ನೈತಿಕ ಸ್ಥೈರ್ಯ ತುಂಬಿ ನಮ್ಮ ಮತಕ್ಕೆ ನ್ಯಾಯ ನೀಡಬೇಕು.

–ಕೆ.ಎಂ. ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು

ಇಂತಹ ಟೀಕೆಗಳ ಅವಶ್ಯಕತೆ ಇತ್ತೇ?

ಮಾನ್ಯರೆ,

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಇತ್ತೀಚೆಗೆ ರಾಜಸ್ಥಾನದ ಚುನಾವಣಾ ಪ್ರಚಾರ ಸಭೆಗಳಲ್ಲಿ ಮಾಡಿದ್ದಾರೆಂದು ಹೇಳಲಾದ ಭಾಷಣವನ್ನು ವಿರೋಧಿಸಿ, ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್ ಚುನಾವಣಾ ಆಯೋಗಕ್ಕೆ ದೂರು ನೀಡಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. 2006 ರಲ್ಲಿ ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ಮಾಡಿದ್ದರೆಂದು ಹೇಳಲಾದ ಭಾಷಣವನ್ನು ಉಲ್ಲೇಖಿಸುತ್ತಾ, ಮುಂದಿನ ಲೋಕಸಭಾ ಚುನಾವಣೆಯಲ್ಲಿ ಒಂದು ವೇಳೆ ಕಾಂಗ್ರೆಸ್ ನೇತೃತ್ವದ ವಿರೋಧ ಪಕ್ಷಗಳು ಅಧಿಕಾರಕ್ಕೆ ಬಂದರೆ, ಜನರ ಆಸ್ತಿಯನ್ನು ಅಲ್ಪಸಂಖ್ಯಾತರಿಗೆ ಹಂಚಲಾಗುವುದು, ಮಹಿಳೆಯರು ಹಾಕಿಕೊಳ್ಳುವ ಚಿನ್ನ ಮತ್ತು ಬೆಳ್ಳಿಯ ಆಭರಣಗಳಿಗೂ ಉಳಿಗಾಲವಿಲ್ಲವೆಂಬ ಪ್ರಧಾನಿಯವರ ಭಾಷಣ ವಿರೋಧ ಪಕ್ಷಗಳಿಂದ ಕಟು ಟೀಕೆಗೆ ಒಳಗಾಗುತ್ತಿದೆ. ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಕಾಂಗ್ರೆಸ್ಸಿನ ಈ ಬಾರಿಯ ಲೋಕಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ಇಂತಹ ಯಾವುದೇ ಪ್ರಸ್ತಾಪ ಇಲ್ಲವೆಂದು ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರು ಇಂತಹ ಹೇಳಿಕೆ ನೀಡುವ ಔಚಿತ್ಯ ಏನಿತ್ತು? ಚುನಾವಣಾ ಭಾಷಣಗಳು ದೇಶ ಎದುರಿಸುತ್ತಿರುವ ಸಮಸ್ಯೆಗಳತ್ತ ಕೇಂದ್ರೀಕೃತವಾಗಬೇಕೇ ಹೊರತು ಅನವಶ್ಯಕವಾಗಿ ಇಲ್ಲಸಲ್ಲದ ವಿಚಾರಗಳ ಪ್ರಸ್ತಾಪ ಮಾಡಿ ಜನರಲ್ಲಿ ಗೊಂದಲ ಮೂಡಿಸುವಂತಾಗಬಾರದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು, 9341731661



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ


ಬೇಡಿ ತಿನ್ನು ನೀಡಿದಷ್ಟು, ದುಡಿದು ತಿನ್ನು ಬೇಕಾದಷ್ಟು!!

ನಮ್ಮ ಜೀವನದಲ್ಲಿ ವಯಸ್ಸಾದಂತೆ ನಾವು ಹಲವಾರು ರೀತಿಯ ಅನುಭವವನ್ನು ಗಳಿಸುತ್ತೇವೆ. ಹಾಗೆ ನೋಡಿದರೆ ಪ್ರತಿದಿನದ ಬದುಕೂ ಒಂದೊಂದು ಪಾಠವನ್ನು ಕಲಿಸುತ್ತಲೇ ಇರುತ್ತದೆ. ಆದರೆ ನಾವು ತೊಂದರೆಗಳಿಗೆ ಸಿಕ್ಕಿ ಹಾಕಿಕೊಂಡಾಗ ಮಾತ್ರವೇ ಪಾಠ ಕಲಿಯುವ ಅವಕಾಶ ಸಿಗುತ್ತದೆ ಎಂದು ಭಾವಿಸುತ್ತೇವೆ. ಇಲ್ಲದಿದ್ದಾಗ ಆಗುವ ಅನುಭವವನ್ನು ನಾವು ಗಮನಿಸುವುದಿಲ್ಲ. ಸಾಮಾನ್ಯವಾಗಿ ನಾವು ಜೀವನದ ಹಲವು ರೀತಿ–ನೀತಿಗಳಿಗೆ ಹೊಂದಿಕೊಂಡು ಬಿಟ್ಟಿರುತ್ತೇವೆ. ಎಂದರೆ ಅದರಿಂದ ಹೊರಬರುವುದರೆಡೆಗೂ ಗಮನ ಕೊಡುವುದಿಲ್ಲ. ಇಲ್ಲೆಲ್ಲಾ ಈಗ ಇರುವುದೂ ಹೋಗಿಬಿಟ್ಟರೆ ಮುಂದೆ ಜೀವನಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಕಷ್ಟವೋ ಸುಖವೋ ಈಗಿದ್ದಂತೆಯೇ ಜೀವನ ನಡೆದುಕೊಂಡು ಹೋದರೆ ಸಾಕು ಎಂದು ಭಾವಿಸುವವರ ಸಂಖ್ಯೆ ಜಾಸ್ತಿ ಇದೆ. ಇದಕ್ಕೆ ನಾವು ಸುರಕ್ಷಿತ ವಲಯ (ಕಂಫರ್ಟ್ ಝೋನ್) ಎಂದು ಕರೆಯುತ್ತೇವೆ. ಕೆಲವೊಮ್ಮೆ ಈ ಮನೋಭಾವ ನಮಗೆ ಗೊತ್ತಿಲ್ಲದಂತೆಯೇ ನಾವು ಸಾಧಿಸಬಹುದಾದ ದಾರಿಗೆ ಅಡ್ಡಗಾಲಾಗುತ್ತದೆ. ಕೆಲವೊಂದು ಕಠಿಣ ನಿರ್ಧಾರವನ್ನು ಕೈಗೊಳ್ಳದಿದ್ದರೆ ಜೀವನದಲ್ಲಿ ಏನನ್ನೂ ಸಾಧಿಸಲಾಗುವುದಿಲ್ಲ. ನಮ್ಮಲ್ಲಿ ಹೇಳುವ ಒಂದು ಉತ್ತಮವಾದ ಮಾತು ಎಂದರೆ 'ಒಂದನ್ನು ಪಡೆಯಬೇಕಾದರೆ ಮತ್ತೊಂದನ್ನು ಕಳೆದುಕೊಳ್ಳಬೇಕಾಗುತ್ತದೆ' ಎಂದು. ಒಬ್ಬ ಸಾಧಕ ಸಾಧನೆಯನ್ನು ಮಾಡಬೇಕಾದರೆ ತನ್ನ ವೈಯಕ್ತಿಕ ಬದುಕಿನ ಹಲವು ಸಂತಸದ ಕ್ಷಣಗಳನ್ನು ಕಳೆದುಕೊಂಡಿರುತ್ತಾನೆ. ಹಲವು ಸಮಯ ಊಟ–ತಿಂಡಿಗಳನ್ನೂ ನಿರ್ಲಕ್ಷಿಸುತ್ತಾನೆ. ಅಂತಹವರಿಂದ ಮಾತ್ರ ಸಾಧನೆಗಳಾಗುತ್ತದೆ. ಹೇಗೋ ಕುಳಿತು ತಿಂದು ಆರಾಮವಾಗಿದ್ದರೆ ಸಾಕು, ಅದೇ ಜೀವನ ಎಂದುಕೊಂಡವರು ತಮ್ಮ ಜೀವನದಲ್ಲಿ ಯಾವ ಸಾಧನೆಯನ್ನೂ ಮಾಡಲಾಗುವುದಿಲ್ಲ.

ಜೀವನದ ಯಶಸ್ಸಿಗೆ ಹಲವು ಮಾರ್ಗಗಳಿರುತ್ತವೆ. ಕೆಲವೊಮ್ಮೆ ಅದು ಬಳಸು ದಾರಿಯೂ ಆಗಿರಬಹುದು. ಆದರೆ ನನಗೆ ಸೂಕ್ತ ಎನಿಸಿದ ದಾರಿಯಲ್ಲಿ ಹೋಗುವುದೂ ಉತ್ತಮ ವಿವೇಚನೆಯಾಗುತ್ತದೆ. ಯಾರಿಗೋ, ಯಾವುದೋ ದಾರಿಯಲ್ಲಿ ಯಶ ಸಿಕ್ಕಿದೆ ಎಂದರೆ ನಾವೂ ಅದೇ ದಾರಿಯಲ್ಲಿ ತೆರಳಿ ಅದೇ ರೀತಿಯ ಯಶಸ್ಸು ಕಾಣಲಾಗುವುದಿಲ್ಲ. ಅಲ್ಲದೆ ನಮ್ಮ ಜೀವಿತಾವಧಿಯೂ ಕಡಿಮೆಯೇ, ಇರುವುದರಲ್ಲಿ ಒಂದಷ್ಟು ಸಾಧನೆ ಮಾಡದಿದ್ದರೆ ಜೀವನಕ್ಕೆ ಸಾರ್ಥಕತೆ ಸಿಗುವುದಿಲ್ಲ.

ನಮ್ಮಲ್ಲಿರುವ ಮತ್ತೊಂದು ಮಾರ್ಗದರ್ಶಿ ಮಾತು ಎಂದರೆ 'ದುಡಿದು ತಿನ್ನು ಬೇಕಾದಷ್ಟು, ಆದರೆ ಬೇಡಿ ತಿನ್ನು ನೀಡಿದಷ್ಟು'. ಈ ಮಾತು ಬಹಳವಾದ ಅರ್ಥವನ್ನು ನೀಡುತ್ತದೆ. ನಮಗೆ ನಮ್ಮ ಸ್ವಂತಿಕೆ, ಪರಿಶ್ರಮದ ಮನೋಭಾವ ಇಲ್ಲದಿದ್ದಾಗ ಬೇಡಿ ತಿನ್ನಬೇಕಾಗುತ್ತದೆ. ದುಡಿಯುವ ಮನಸ್ಸಿಲ್ಲದಿದ್ದರೂ ಹೀಗೇ ಬೇಡಿ ತಿನ್ನಬೇಕಾಗುತ್ತದೆ. ಜೀವನದಲ್ಲಿ ಸೂಕ್ತ ಯೋಜನೆಗಳು ಇಲ್ಲದಿದ್ದಾಗಲೂ ಬೇಡುವ ಪರಿಸ್ಥಿತಿ ಬರುತ್ತದೆ. ಬೇಡುವುದು ಎಂದಾಗ ಅದು ಇಷ್ಟೇ ಪ್ರಮಾಣದ್ದು ಎಂದು ನಿಗದಿಪಡಿಸಲಾಗುವುದಿಲ್ಲ. ಅದಕ್ಕೆ ತೃಪ್ತಿಯೂ ಇರುವುದಿಲ್ಲ. ಏನು ಹಾಗೂ ಎಷ್ಟು ಸಿಗುವುದೋ ಅಷ್ಟನ್ನೇ ಪ್ರಸಾದ ಎಂದು ಸ್ವೀಕರಿಸಬೇಕು. ಆದರೆ ಬೇಡಿ ತಿನ್ನುವಾಗ ಮುಂದಿನ ಜೀವನ ಹೇಗೆ ಎಂಬ ಯೋಚನೆಯನ್ನೂ ಹೊಂದಿರಬೇಕು. ಬೇಡುವುದು ಕನಿಷ್ಠವಾದ ಆಯ್ಕೆಯಾಗಿರಬೇಕು. ಬೇಡಿ ತಿನ್ನುವುದು ಅಲ್ಪ ಸಮಯಕ್ಕೆ ಮಾತ್ರ ಅನ್ವಯವಾಗುವಂತಿರಬೇಕು.

ಇತ್ತೀಚೆಗೆ ಪತ್ರಿಕೆಗಳಲ್ಲಿ ನಾವು ಶ್ರೀಲಂಕಾ ದೇಶದ ಆರ್ಥಿಕ ಕುಸಿತ, ಅರಾಜಕತಾ ವಾತಾವರಣದ ಬಗ್ಗೆ ಓದಿದ್ದೆವು. ಅಲ್ಲಿನ ಸರ್ಕಾರ ಕೆಲವು ಯೋಜನೆಗಳನ್ನು ಜನರ ಅನುಕೂಲಕ್ಕಾಗಿ ಎಂದು ಮಾಡಹೊರಟಿತು. ಆದರೆ ಅದು ಅನಗತ್ಯವೂ ಆಗಿತ್ತು.



ಇದನ್ನು ಪೂರೈಸಲು ತನ್ನಲ್ಲಿ ಆರ್ಥಿಕ ಸಂಪನ್ಮೂಲದ ಕೊರತೆ ಇದೆ ಎಂದಾದಾಗ ಅವರಿಗೆ ಹೊಳೆದದ್ದು ಇತರೆ ದೇಶಗಳಿಂದ ಸಾಲ ಪಡೆಯುವುದು. ಹಾಗೆ ಸಿಕ್ಕಸಿಕ್ಕಲ್ಲಿ ಸಾಲ ಮಾಡಿದ ದೇಶ, ಕೊನೆಗೆ ಮತ್ತಷ್ಟು ಸಾಲವನ್ನು ಪಡೆಯಲಾಗದ ಸ್ಥಿತಿ ತಲುಪಿತು. ಅವರ ಸ್ಥಿತಿ ಕಂಡ ಇತರೆ ದೇಶಗಳು ಸಾಲ ನೀಡಲು ನಿರಾಕರಿಸಿದವು. ಸಾಲದ ಮರುಪಾವತಿಯ ಭರವಸೆ ಇಲ್ಲದಿದ್ದಾಗ ಯಾರೂ ಸಾಲ ನೀಡುವುದಿಲ್ಲ! ಆಗ ಶ್ರೀಲಂಕಾಕ್ಕೆ ತನ್ನ ಆರ್ಥಿಕ ಸಂಪನ್ಮೂಲಕ್ಕಾಗಿ ಜನರ ಮೇಲೆ ಹೆಚ್ಚಿನ ತೆರಿಗೆ ವಿಧಿಸುವುದು ಅನಿವಾರ್ಯವಾಯಿತು. ಅಲ್ಲಿಯವರೆಗೆ ಸರ್ಕಾರ ನೀಡುತ್ತಿದ್ದ ಸವಲತ್ತಿಗೆ ಹೊಂದಿಕೊಂಡಿದ್ದ ಜನರು ಇದ್ದಕ್ಕಿದ್ದಂತೆಯೇ ಸರ್ಕಾರದಿಂದ ಸಹಾಯ ಪಡೆಯುವುದಿರಲಿ, ತಮ್ಮಿಂದಲೇ ಸರ್ಕಾರ ಹೆಚ್ಚಿನ ತೆರಿಗೆ ಹಣವನ್ನು ಅಪೇಕ್ಷಿಸಿದಾಗ ಸರ್ಕಾರದ ವಿರುದ್ಧ ತಿರುಗಿಬಿದ್ದರು. ದೇಶದ ಆಡಳಿತದ ಪ್ರಮುಖರ ವಿರುದ್ಧ ದಂಗೆ ಎದ್ದರು. ಅಲ್ಲಿಯವರೆಗೆ ತಮ್ಮ ದೇಶದ ಆಡಳಿತ ಉತ್ತಮ ಎಂದು ಭಾವಿಸುತ್ತಿದ್ದವರಿಗೆ ಅದೇ ಆಡಳಿತದ ಪ್ರಮುಖರು ಶತ್ರುಗಳಂತೆ ಕಂಡರು. ಇದು ಬೇಡಿ ತಿನ್ನುವವರ ಸ್ಥಿತಿ–ದುಸ್ಥಿತಿ.

ಅದೇ ರೀತಿ ನಮ್ಮ ಪಕ್ಕದ ಕೇರಳ ರಾಜ್ಯವೂ ತನ್ನ ಸಾಮರ್ಥ್ಯ ಮೀರಿ ಸಾಲ ಮಾಡಿ, ಮತ್ತೆ ಸಾಲ ಪಡೆಯಬೇಕೆಂದಾಗ ದೇಶದ ಸರ್ವೋಚ್ಚ ನ್ಯಾಯಾಲಯ ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದೆ. ಎಲ್ಲದಕ್ಕೂ ಒಂದು ಮಿತಿ ಇರಬೇಕು. ನನ್ನಲ್ಲಿ ಹೇರಳವಾಗಿ ದುಡ್ಡಿದೆ ಎಂದರೂ ಅದನ್ನು ಖರ್ಚು ಮಾಡುವಾಗ ವಿವೇಚನೆಯುಕ್ತವಾಗಿ ವ್ಯಯಿಸಬೇಕಾಗುತ್ತದೆ. ಇದಕ್ಕೇ ಹೇಳುವುದು ಕೂತು ತಿಂದರೆ ಕುಡಿಕೆ ಹಣ ಸಾಲುವುದಿಲ್ಲ ಎಂದು. ನಾವು ಅನಿವಾರ್ಯವಾಗಿ ಸಾಲ ಮಾಡಬೇಕು ಎಂದಾದಾಗ ಮೊದಲು ನಾವು ಯೋಚಿಸುವುದು ಸುಲಭವಾಗಿ ಸಾಲ ಕೊಡುವವರು ಯಾರು ಎಂದು. ಇದಕ್ಕೆ ಮುಂಚೆ ನಮ್ಮ ವಿವೇಚನೆ ಕೆಲಸ ಮಾಡಬೇಕು. ನಾನು ಸಾಲ ಪಡೆಯುತ್ತಿದ್ದೇನೆ, ಅದಕ್ಕೆ ಇಷ್ಟು ಎಂದು ಬಡ್ಡಿಯನ್ನೂ ಪಾವತಿಸಬೇಕಾಗುತ್ತದೆ. ನಾನು ಪಡೆದ ಸಾಲವನ್ನು ಯಾವುದಕ್ಕೆ ಉಪಯೋಗಿಸುತ್ತೇನೆ. ಅದನ್ನು ಬಳಸುವುದರಿಂದ ನನ್ನ ಆರ್ಥಿಕ ಸ್ಥಿತಿ ಉತ್ತಮಗೊಳ್ಳುತ್ತದೆಯೇ ಮಾಡಿದ ಹಣಕ್ಕೆ ಪ್ರತಿಫಲ ಯಾವಾಗ ದೊರಕುತ್ತದೆ. ಸಾಲದ ಕಂತುಗಳನ್ನು ಪಾವತಿಸುವ ವೇಳೆಗೆ ನನ್ನ ಹೂಡಿಕೆಯಿಂದ ಲಾಭ ಬರುವುದೇ. ಬಾರದಿದ್ದಲ್ಲಿ ನಾನು ಹಣವನ್ನು ವಾಪಸ್ಸು ಕೊಡುವ ದಾರಿ ಯಾವುದು ಎಂಬ ಬಗ್ಗೆ ಯೋಚಿಸಬೇಕು. ನಾನು ಬಡ್ಡಿ ಪಾವತಿಯ ಜೊತೆಗೆ ಅಸಲನ್ನೂ ತೀರಿಸಬೇಕಾಗಿದೆ, ಇಲ್ಲದಿದ್ದರೆ ಬಡ್ಡಿಯ ಮೇಲೆ ಬಡ್ಡಿ ಬೀಳುತ್ತದೆ (ಚಕ್ರಬಡ್ಡಿ), ಹೀಗಾದಾಗ ಹಣ ವಾಪಸು ಮಾಡಲು ಸಾಧ್ಯವಾಗದಾದಾಗ ತಾನು ಸಾಲ ಪಡೆಯಲು ನೀಡಿದ ತನ್ನ ಗ್ಯಾರಂಟಿ (ಜಾಮೀನು) ತನಗೆ ಹಿಂದಿರುಗಿ ಬರುವುದಿಲ್ಲ ಎಂಬುದು ಗೊತ್ತಿರಬೇಕು. ಇಲ್ಲದಿದ್ದರೆ ಆಸ್ತಿಯನ್ನು ಕಳೆದುಕೊಳ್ಳಬೇಕಾಗುತ್ತದೆ. ನೆರೆಯ ಶ್ರೀಲಂಕಾ ಮಾಡಿದ ತಪ್ಪೇ ಇದು. ಸಾಲ



> **ಎಲ್ಲದಕ್ಕೂ ಒಂದು ಮಿತಿ ಇರಬೇಕು. ನನ್ನಲ್ಲಿ ಹೇರಳವಾಗಿ ದುಡ್ಡಿದೆ ಎಂದರೂ ಅದನ್ನು ಖರ್ಚು ಮಾಡುವಾಗ ವಿವೇಚನೆಯುಕ್ತವಾಗಿ ವ್ಯಯಿಸಬೇಕಾಗುತ್ತದೆ. ಇದಕ್ಕೇ ಹೇಳುವುದು ಕೂತು ತಿಂದರೆ ಕುಡಿಕೆ ಹಣ ಸಾಲುವುದಿಲ್ಲ ಎಂದು. ನಾವು ಅನಿವಾರ್ಯವಾಗಿ ಸಾಲ ಮಾಡಬೇಕು ಎಂದಾದಾಗ ಮೊದಲು ನಾವು ಯೋಚಿಸುವುದು ಸುಲಭವಾಗಿ ಸಾಲ ಕೊಡುವವರು ಯಾರು ಎಂದು. ಇದಕ್ಕೆ ಮುಂಚೆ ನಮ್ಮ ವಿವೇಚನೆ ಕೆಲಸ ಮಾಡಬೇಕು. ನಾನು ಸಾಲ ಪಡೆಯುತ್ತಿದ್ದೇನೆ, ಅದಕ್ಕೆ ಇಷ್ಟು ಎಂದು ಬಡ್ಡಿಯನ್ನೂ ಪಾವತಿಸಬೇಕಾಗುತ್ತದೆ. ನಾನು ಪಡೆದ ಸಾಲವನ್ನು ಯಾವುದಕ್ಕೆ ಉಪಯೋಗಿಸುತ್ತೇನೆ. ಅದನ್ನು ಬಳಸುವುದರಿಂದ ನನ್ನ ಆರ್ಥಿಕ ಸ್ಥಿತಿ ಉತ್ತಮಗೊಳ್ಳುತ್ತದೆಯೇ ಮಾಡಿದ ಹಣಕ್ಕೆ ಪ್ರತಿಫಲ ಯಾವಾಗ ದೊರಕುತ್ತದೆ. ಸಾಲದ ಕಂತುಗಳನ್ನು ಪಾವತಿಸುವ ವೇಳೆಗೆ ನನ್ನ ಹೂಡಿಕೆಯಿಂದ ಲಾಭ ಬರುವುದೇ. ಬಾರದಿದ್ದಲ್ಲಿ ನಾನು ಹಣವನ್ನು ವಾಪಸ್ಸು ಕೊಡುವ ದಾರಿ ಯಾವುದು ಎಂಬ ಬಗ್ಗೆ ಯೋಚಿಸಬೇಕು.**

ಪಡೆಯುವಾಗ ಸಾಲ ನೀಡುವವರು ಬಡ್ಡಿ ವಿಧಿಸುತ್ತಾರೆ ಎಂದು ಗೊತ್ತಿದ್ದೂ ಸಾಲ ಪಡೆದಿದ್ದು. ಪಡೆದ ಸಾಲವನ್ನು ಯಾವುದೇ ದೇಶದ ಆರ್ಥಿಕ ಸ್ಥಿತಿ ಉತ್ತಮಗೊಳಿಸುವ ಕೆಲಸಕ್ಕೆ ವಿನಿಯೋಗಿಸದೆ ಜನರಿಗೆ ಉಚಿತ ಕೊಡುಗೆಗಳನ್ನು ನೀಡಲು ಬಳಸಿದ್ದು, ಕೊನೆಗೆ ಮತ್ತಷ್ಟು ಸಿಗದೆ, ಹಿಂದೆ ಸಾಲ ನೀಡಿದವರು ಮರುಪಾವತಿಗಾಗಿ ಒತ್ತಾಯಿಸಿದಾಗ ಜನರ ಮೇಲೆ ತೆರಿಗೆ ಹಾಕಿದ್ದು, ಅದನ್ನು ಜನರು ವಿರೋಧಿಸಿದ್ದು, ಸಾಲ ವಾಪಸು ಮಾಡಲಾಗದ ಹಾಗೂ ಮತ್ತಷ್ಟು ಸಾಲ ಪಡೆಯಲಾಗದ ಸ್ಥಿತಿಗೆ ಆ ದೇಶ ತಲುಪಿ ಅರಾಜಕತೆ ಉಂಟಾಯಿತು. ಇಂದಿಗೂ ಆ ದೇಶ ಚೇತರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಮುಂದೆಯೂ ಹಿಂದಿನ ಸ್ಥಿತಿಗೆ ಮರಳುವ ಭರವಸೆಯು ಕಾಣದಾಗಿದೆ.

ಇದರ ಮತ್ತೊಂದು ಮುಖ ನಾವು ಕಂಡಿದ್ದು ನೆರೆ ರಾಷ್ಟ್ರ ಪಾಕಿಸ್ತಾನದಲ್ಲಿ. ಇತ್ತೀಚಿನವರೆಗೆ ಭಾರತದ ಖೋಟಾನೋಟುಗಳ ಮುದ್ರಣ ಹಾಗೂ ಇತರೆ ವಾಮಮಾರ್ಗಗಳಿಂದ ದೇಶ ಮುನ್ನಡೆಸುತ್ತಿದ್ದ ಆ ದೇಶದಲ್ಲಿ ಭಾರತ ನೋಟ್‌ಬ್ಯಾನ್‌ನಂತಹ ಕಠಿಣ ಕ್ರಮ ತೆಗೆದುಕೊಂಡಾಗ ಅದರ ವಾಮಮಾರ್ಗಗಳಿಗೆ ತೊಡಕಾಯಿತು. ಅದನ್ನು ಬಗೆಹರಿಸಲು ಕಂಡ ಮಾರ್ಗ ಇತರೆ ದೇಶಗಳಿಂದ ಸಾಲ ಪಡೆಯುವುದು. ಕೊನೆಗೆ ಅಲ್ಲೂ ಶ್ರೀಲಂಕಾದ ಸ್ಥಿತಿಯೇ ನಿರ್ಮಾಣವಾಗಿದೆ. ಸಾಲ ನೀಡುವವರು ವಿಧಿಸುವ ಷರತ್ತುಗಳನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾಯಿತು. ಜನರ ಮೇಲೆ ವಿಪರೀತ ತೆರಿಗೆಗಳನ್ನು ವಿಧಿಸಲಾಗುತ್ತಿದೆ. ಇದರಿಂದ ಅಲ್ಲಿ ಅರಾಜಕತೆ ಹೆಚ್ಚಾಗುತ್ತಿದೆ. ಆಡಳಿತದ ಬಗ್ಗೆ ತೀವ್ರವಾದ ಅಸಮಾಧಾನ ಜಾಸ್ತಿಯಾಗುತ್ತಿದೆ.

ನೆರೆಯ ಕೇರಳ ರಾಜ್ಯವೂ ಇಂತಹುದೇ ಸಂಕಷ್ಟಕ್ಕೆ ಸಿಲುಕಿದ್ದು, ಮತ್ತೆ ಹೆಚ್ಚುವರಿ ಸಾಲ ಪಡೆಯದಂತೆ ನ್ಯಾಯಾಲಯ ಸೂಚಿಸುವ ಮಟ್ಟಕ್ಕೆ ಹೋಗಿದೆ.

ಕೆಲವು ರಾಜ್ಯಗಳಲ್ಲಿ ಆಡಳಿತ ನಡೆಸುವವರು ಹೀಗೆಯೇ ಸಾಲ ಮಾಡುವಾಗ ಮುಂದೆ ಅದಕ್ಕೆ ಬಡ್ಡಿ ಸಹಿತ ಮರುಪಾವತಿ ಮಾಡಬೇಕಾಗುತ್ತದೆ ಎಂಬುದನ್ನು ಯೋಚಿಸದೇ ತಾತ್ಕಾಲಿಕ ಉಪಯೋಗದ ಬಗ್ಗೆ ಗಮನ ಹರಿಸಿ ಸಾಲ ಮಾಡುತ್ತಾರೆ. ಅವರಿಗೆ ಮುಂದೆ ತಾವು ಆಡಳಿತದಲ್ಲಿ ಮುಂದುವರೆಯುವ ಭರವಸೆಯೇ ಇರುವುದಿಲ್ಲ. ಮುಂದೆ ಅಧಿಕಾರಕ್ಕೆ ಬರುವವರು ತಾವು ಮಾಡಿದ ಸಾಲವನ್ನು ತೀರಿಸಿಕೊಳ್ಳಲಿ, ನಾವು ಅಧಿಕಾರದಲ್ಲಿ ಇರುವವರೆಗೆ ತಮ್ಮ ಅಧಿಕಾರಕ್ಕೆ ಧಕ್ಕೆಯಾಗದಿದ್ದರೆ ಸಾಕು ಎಂಬ ಮನೋಭಾವ ಕಾಣುತ್ತದೆ. ಹೀಗೆ ಪಡೆದ ಸಾಲ ಯಾವುದಕ್ಕೆ ಉಪಯೋಗಿಸಬೇಕು ಎಂಬ ವಿವೇಚನೆ ಇಲ್ಲದಿದ್ದರೆ, ಆಗಲೂ ದುಂದುವೆಚ್ಚದಿಂದ ದಿವಾಳಿ, ಅರಾಜಕತೆ ಉಂಟಾಗುತ್ತದೆ.

ನಾವು ವೈಯಕ್ತಿಕವಾಗಿ ಸಾಲ ಮಾಡುವಾಗ ಅದು ಅನಿವಾರ್ಯವೇ, ಸಾಲ ಪಡೆಯದೆಯೂ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದೇ, ಸಾಲ ಪಡೆದರೆ ಅದನ್ನು ತೀರಿಸುವ ಮಾರ್ಗ ಯಾವುದು ಎಂಬುದನ್ನು ಯೋಚಿಸುತ್ತೇವೆ. ಯಾರೋ ಸುಲಭವಾಗಿ ಸಾಲ ಕೊಡುತ್ತಾರೆ ಎಂದು ಅಗತ್ಯಕ್ಕಿಂತ ಹೆಚ್ಚು ಸಾಲ ಪಡೆಯುವುದಿಲ್ಲ. ಸಾಲ ತೀರಿಸಲಾಗದಿದ್ದರೆ ಆಗುವ ತೊಂದರೆಗಳೇನು ಎಂಬುದನ್ನು ಯೋಚಿಸುತ್ತೇವೆ. ಇದು ಆಡಳಿತಗಾರರಿಗೂ ಅನ್ವಯಿಸಬೇಕು.

ಈ ಹಿಂದೆ ಸರ್ಕಾರ ಮಾಡುವ ವೆಚ್ಚಗಳಲ್ಲಿ ಒಂದಷ್ಟು ವೆಚ್ಚ ಸರ್ಕಾರದ ಆಸ್ತಿ ಖರೀದಿಗೆ, ಇರುವ ಆಸ್ತಿಯನ್ನು ಉತ್ತಮಗೊಳಿಸುವುದಕ್ಕೆ ಎಂದು ಬಳಸಲಾಗುತ್ತಿತ್ತು. ಇಲ್ಲಿ ಆಸ್ತಿಯ ಮೇಲಿನ ಹೂಡಿಕೆ ಎಂದರೆ ಮುಂದೆ ಅದರಿಂದ ಲಾಭ ಬರಬೇಕು ಎಂಬುದು. ಹಾಗಾಗಿ ಕೆಲವು ಆಸ್ತಿ ಖರೀದಿ, ಕಟ್ಟಡಗಳ ನಿರ್ಮಾಣ ಇತ್ಯಾದಿಗಳ ಮೇಲೆ ಹಣ ವಿನಿಯೋಗಿಸುತ್ತಿದ್ದವು. ಇದಕ್ಕೆ ಪಡೆದ ಸಾಲ ಪೂರಕವಾಗಿರುತ್ತಿತ್ತು. ಮುಂದೆ ಆ ರೀತಿಯ ಹೂಡಿಕೆಗಳು ಲಾಭ ತಂದುಕೊಡುತ್ತಿತ್ತು. ಈ ಬಗ್ಗೆ ಯೋಚಿಸಬೇಕು. ನಾವು ಪಡೆಯುವ ಸಾಲದಲ್ಲಿ ಮೋಜು–ಮಸ್ತಿ ಮಾಡಬಾರದು, ಬದಲಾಗಿ ತನ್ನ ಅನಿವಾರ್ಯತೆಗಳನ್ನು ನಿವಾರಿಸಿಕೊಂಡು ಹೊಸದಾಗಿ ಸ್ವಂತಿಕೆಯ, ನೆಮ್ಮದಿಯ ಜೀವನ ನಡೆಸುವಂತಾಗಿರಬೇಕು.

ನಾವು ಜೀವನದಲ್ಲಿ ದುಡಿಯುವ ಮನೋಭಾವ ಹೊಂದಿದಾಗ ದುಡಿಯುತ್ತೇವೆ. ಹಾಗೆ ದುಡಿದು ಗಳಿಸಿದ ಹಣವನ್ನು ಉಪಯೋಗಿಸುವಾಗ ವಿವೇಚನೆ ಮಾಡುತ್ತೇವೆ. ಏಕೆಂದರೆ ಹಣ ಗಳಿಸುವ ಶ್ರಮ ನಮಗೆ ಅರಿವಾಗಿರುತ್ತದೆ. ಆಗ ಅನಿವಾರ್ಯತೆಗಳಿಗೆ ಮಾತ್ರ ಖರ್ಚು ಮಾಡುತ್ತೇವೆ. ಹಾಗೆ ಸಂಪಾದಿಸಿದ ಹಣದ ಮೇಲೆ ನಮಗೆ ಅಧಿಕಾರವಿರುತ್ತದೆ. ಆದರೆ ಶ್ರಮದ ಅರಿವು ಇರುವುದರಿಂದ ವ್ಯರ್ಥವಾಗಿ ಖರ್ಚು ಮಾಡಲು ಮನಸ್ಸು ಒಪ್ಪುವುದಿಲ್ಲ. ಹಣ ಅಥವಾ ಇತರೆ ಸವಲತ್ತುಗಳು ಸುಲಭವಾಗಿ ಸಿಗುತ್ತದೆ ಎಂದಾದಾಗ ಮನಸ್ಸು ಹೆಚ್ಚು ಶ್ರಮಪಡಲು ಪ್ರೇರೇಪಿಸುವುದಿಲ್ಲ. ಕ್ರಮೇಣ ಅದಕ್ಕೇ ಹೊಂದಿಕೊಂಡು ನಾವು ನಿರುಪಯುಕ್ತರಾಗುತ್ತೇವೆ.

ಬೇಡುವಾಗ ನಮ್ಮ ಅತೀ ಅಗತ್ಯದ ಸಲುವಾಗಿ ಮಾತ್ರ ಬೇಡಬೇಕು. ಬೇಡುವ ದೈನೆಸಿ ಮನೋಭಾವ ಶಾಶ್ವತವಾಗಿರುವುದು ಒಳ್ಳೆಯದಲ್ಲ. ಬೇಡುವಾಗ ಉದ್ದೇಶ ಅನಿವಾರ್ಯತೆಗಾಗಿ ಆಗಿರಬೇಕು. ನಮ್ಮ ಆರ್ಥಿಕ ಶಕ್ತಿ ಉತ್ತಮವಾದಾಗ ನಾವು ಇತರೆ ಬೇಡುವವರಿಗೆ ಸಹಾಯ ಮಾಡಬಹುದು. ಅಂತಹ ಸ್ಥಿತಿ ನಮ್ಮದಾಗಬೇಕು. ಅದಕ್ಕಾಗಿ ನಿರಂತರ ಪ್ರಯತ್ನ ನಡೆಸಬೇಕು.



ಮೈಸೂರು ಜಿಲ್ಲಾ ಸರ್ಕಾರಿ ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್ ಅವರ ನೇತೃತ್ವದಲ್ಲಿ ಮೈಸೂರು ವಕೀಲರ ವಿವಿಧೋದ್ದೇಶ ಸಹಕಾರ ಸಂಘದ ನೂತನ ಅಧ್ಯಕ್ಷ ಚಂದ್ರಶೇಖರ್, ಉಪಾಧ್ಯಕ್ಷ ಚನ್ನನಾಯಕ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ವಕೀಲರ ಸಂಘದ ಕಾರ್ಯದರ್ಶಿ ಸುಧೀರ್, ಮೈಸೂರು ಜಿಲ್ಲಾ ಸರ್ಕಾರಿ ವಕೀಲ ಉಮೇಶ್‌ಕುಮಾರ್, ಅಪರ ಸರ್ಕಾರಿ ವಕೀಲ ಕೆ.ಎಸ್.ಲೋಕೇಶ್, ಹೆಚ್.ಎಂ.ಪ್ರಭು, ಎಂ.ವಿ.ವೇದವ್ಯಾಸ್ ಉಪಸ್ಥಿತರಿದ್ದರು.

ಪಾಟ್ನಾದ ಹೋಟೆಲ್‌ನಲ್ಲಿ ಭೀಕರ ಅಗ್ನಿ ಅವಘಡ; 6 ಮಂದಿ ಸಾವು

ಪಾಟ್ನಾ, ಏ.25– ರಾಜಧಾನಿ ಪಾಟ್ನಾದ ಹೋಟೆಲ್ ಒಂದರಲ್ಲಿ ಭೀಕರ ಅಗ್ನಿ ದುರಂತ ಸಂಭವಿಸಿದ್ದು, 6 ಜನರು ಸಾವನ್ನಪ್ಪಿದ್ದಾರೆ. ಪಾಟ್ನಾ ರೈಲ್ವೆ ನಿಲ್ದಾಣದ ಬಳಿ ಇರುವ ಹೋಟೆಲ್ ಒಂದರಲ್ಲಿ ಅಗ್ನಿ ಆಕಸ್ಮಿಕ ಸಂಭವಿಸಿ ಈ ದುರಂತ ಸಂಭವಿಸಿದೆ.

ಪಾಟ್ನಾ ಜಂಕ್ಷನ್ ರೈಲ್ವೆ ನಿಲ್ದಾಣದ ಸಮೀಪದಲ್ಲಿರುವ ಹೋಟೆಲ್‌ನಲ್ಲಿ ಅಗ್ನಿ ಅಪಘಾತ ನಡೆದಿದೆ. ರಕ್ಷಣಾ ಕಾರ್ಯಾಚರಣೆ ಮುಂದುವರೆದಿದ್ದು, 20ಕ್ಕೂ ಹೆಚ್ಚು ಜನರನ್ನು ಸುರಕ್ಷಿತವಾಗಿ ಹೊರಗೆ ಕರೆತರಲಾಗಿದೆ. ಅಗ್ನಿ ಅವಘಡದಿಂದಾಗಿ ಕಟ್ಟಡದ ಮುಂಭಾಗದಲ್ಲಿರುವ ಸೇತುವೆ ಮೇಲೆ ಭಾರಿ ಟ್ರಾಫಿಕ್ ಜಾಮ್ ಉಂಟಾಗಿದ್ದು, ಸ್ಟೇಷನ್ ರಸ್ತೆಯೂ ಸಂಪೂರ್ಣ ಬಂದ್ ಆಗಿತ್ತು. ಬೆಂಕಿ ಕಾಣಿಸಿಕೊಂಡ ಸುಮಾರು ಒಂದೂವರೆ ಗಂಟೆಗಳ ನಂತರ ಮೃತದೇಹಗಳನ್ನು ಹೊರ ತೆಗೆಯಲಾಯಿತು. ಪಾಲ್ ಹೋಟೆಲ್‌ನಲ್ಲಿ ಬೆಂಕಿ ಅವಘಡದಲ್ಲಿ ಆರು ಮಂದಿ ಸಾವನ್ನಪ್ಪಿದ್ದಾರೆ ಎಂದು ಪಾಟ್ನಾ ಎಸ್‌ಪಿ ರಾಜೀವ್ ಮಿಶ್ರಾ ಖಚಿತಪಡಿಸಿದ್ದಾರೆ. ಸತ್ತವರಲ್ಲಿ ಮೂವರು ಮಹಿಳೆಯರು ಮತ್ತು ಮೂವರು ಪುರುಷರು ಸೇರಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ. ಅಡುಗೆ ಕೋಣೆಯಲ್ಲಿ ಕಾಣಿಸಿಕೊಂಡ ಬೆಂಕಿ 4 ಅಂತಸ್ತಿನ ಕಟ್ಟಡವನ್ನು ಆವರಿಸಿದೆ ಎಂದು ಸ್ಥಳೀಯರು ಹೇಳಿದ್ದಾರೆ. ಸಿಲಿಂಡರ್ ಸ್ಫೋಟದಿಂದ ಅವಘಡ ಸಂಭವಿಸಿದೆ ಎಂದು ಹೇಳಲಾಗುತ್ತಿದೆ.



ಖ್ಯಾತ ಯಕ್ಷಗಾನ ಭಾಗವತ ಸುಬ್ರಹ್ಮಣ್ಯ ಧಾರೇಶ್ವರ ನಿಧನ

ಮುಖ್ಯಮಂತ್ರಿ ಸಿದ್ದರಾಮಯ್ಯ ಸಂತಾಪ

ಬೆಂಗಳೂರು, ಏ.25– ಬಡಗು ತಿಟ್ಟು ಯಕ್ಷಗಾನದ ಖ್ಯಾತ ಭಾಗವತ, ತೆಂಕುತಿಟ್ಟಿನಲ್ಲೂ ಹೆಸರು ಗಳಿಸಿ ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳನ್ನು ಹೊಂದಿರುವ ಸುಬ್ರಹ್ಮಣ್ಯ ಧಾರೇಶ್ವರ ಅವರು ಇಂದು (ಗುರುವಾರ) ಬೆಳಗ್ಗೆ ನಿಧನರಾಗಿದ್ದಾರೆ. ಬೆಂಗಳೂರಿನ ತಮ್ಮ ಪುತ್ರನ ಮನೆಯಲ್ಲಿದ್ದ ಅವರು ಅಲ್ಪಕಾಲದ ಅಸೌಖ್ಯದಿಂದಾಗಿ ನಸುಕಿನ ಜಾವ ಇಹಲೋಕ ತ್ಯಜಿಸಿದರು. ಪತ್ನಿ, ಪುತ್ರ ಮತ್ತು ಪುತ್ರಿಯನ್ನು ಅಗಲಿದ್ದಾರೆ.



46 ವರ್ಷಗಳ ಕಾಲ ಯಕ್ಷಗಾನ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಅವರು ಪೆರ್ಡೂರು, ಅಮೃತೇಶ್ವರಿ ಮೇಳ, ಹಿರೇಮಹಾಲಿಂಗೇಶ್ವರ ಮೇಳ, ಶಿರಸಿ ಮೇಳಗಳಲ್ಲಿ ಪ್ರಧಾನ ಭಾಗವತರಾಗಿ ತಿರುಗಾಟ ನಡೆಸಿದ್ದರು. ಬಡಗು ತಿಟ್ಟಿನ ಜನಪ್ರಿಯ ಮೇಳವಾಗಿರುವ ಪೆರ್ಡೂರು ಮೇಳವೊಂದರಲ್ಲೇ 28 ವರ್ಷಗಳ ಕಾಲ ತಿರುಗಾಟ ನಡೆಸಿದ್ದರು. 1957ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದಲ್ಲಿ ಜನಿಸಿದ ಸುಬ್ರಹ್ಮಣ್ಯ ಧಾರೇಶ್ವರ ಅವರು ಚಿಕ್ಕವರಿದ್ದಾಗಲೇ ಸಂಗೀತ ಕಲಿತು ಕಾರ್ಯಕ್ರಮಗಳನ್ನು ನೀಡುತ್ತಿದ್ದರು. ಇದೇ ವೇಳೆ ಎಲೆಕ್ಟ್ರಿಕ್ ಅಂಗಡಿ ಪ್ರಾರಂಭಿಸಿ ಯಕ್ಷಗಾನ ಮೇಳಕ್ಕೆ ಲೈಟಿಂಗ್ ವ್ಯವಸ್ಥೆ ಮಾಡಿಕೊಟ್ಟಿದ್ದರು. ಇವರ ಪ್ರತಿಭೆ ಮತ್ತು ಸಾಮರ್ಥ್ಯವನ್ನು ನಾರಣಪ್ಪ ಉಪ್ಪೂರರು ಕಂಡು ರಂಗಸ್ಥಳಕ್ಕೆ ಕರೆತಂದರು.

ಅಲ್ಲಿಂದ ತಿರುಗಿ ನೋಡದ ಸುಬ್ರಹ್ಮಣ್ಯ ಧಾರೇಶ್ವರ ಅಲ್ಪಸಮಯದಲ್ಲೇ ಜನಪ್ರಿಯರಾದರು. ಪೌರಾಣಿಕ ಮಾತ್ರವಲ್ಲದೆ ಸಾಮಾಜಿಕ ಕಥಾಹಂದರವುಳ್ಳ ಪ್ರಸಂಗಗಳಲ್ಲಿ ಹೊಸತನದ ಪ್ರಯೋಗ ಮಾಡಿ ಯಶಸ್ವಿಯಾದರು. ಯಕ್ಷಗಾನದಲ್ಲಿ ಹೊಸ ಅಲೆ ಎಬ್ಬಿಸಿದ್ದ ಅಪ್ರತಿಮ ಭಾಗವತ ಕಾಳಿಂಗ ನಾವುಡರ ಅಗಲಿಕೆಯಿಂದ ಉಂಟಾಗಿದ್ದ ನಿರ್ವಾತವನ್ನು ತುಂಬುವಲ್ಲಿ ಸುಬ್ರಹ್ಮಣ್ಯ ಯಶಸ್ವಿಯಾಗಿದ್ದರು. ಅಚ್ಚರಿಯೆಂಬಂತೆ ಕೀರ್ತಿಯ ಉತ್ತುಂಗದಲ್ಲಿರುವಾಗಲೇ ಅವರು ನಿವೃತ್ತರಾಗಿದ್ದರು.

ಮುಖ್ಯಮಂತ್ರಿ ಸೇರಿ ಗಣ್ಯರ ಸಂತಾಪ: ಹಿರಿಯ ಕಲಾವಿದರ ನಿಧನಕ್ಕೆ ಸಿಎಂ ಸಿದ್ದರಾಮಯ್ಯ ಸೇರಿ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮಹಿಳೆಯರು ಏಕಕಾಲದಲ್ಲಿ ಹಲವು ಕಾರ್ಯಗಳ ನಿರ್ವಹಿಸುವ ಸಾಮರ್ಥ್ಯ ಉಳ್ಳವರು

ಎಜುಕೇರ್, ಐಟಿಇಎಸ್ ಅಂಡ್ ವುಮೆನ್‌ಕಾನ್ ಟ್ರಸ್ಟ್ ಸಂಸ್ಥಾಪಕಿ ರಚನಾ ಮಹೇಶ್ ಅಭಿಪ್ರಾಯ



ಮೈಸೂರು, ಏ. 25– ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವ್ಯವಹಾರ ನಿರ್ವಹಣಾ ವಿಭಾಗ, ಐಕ್ಯೂಎಸಿ ವತಿಯಿಂದ ವೈಸ್–ವುಮೆನ್ ಇನ್ ಸ್ಮಾಲ್ ಎಂಟರ್‌ಪ್ರೈಸಸ್ ಸಹಯೋಗದಲ್ಲಿ ಉದ್ಯಮಶೀಲತೆ ಅವಕಾಶಗಳು ಮತ್ತು ಸವಾಲುಗಳು ಕುರಿತು ಸಂವಾದ ಆಯೋಜಿಸಲಾಗಿತ್ತು.


ಸಂವಾದ ಕಾರ್ಯಕ್ರಮದಲ್ಲಿ ಮೈಸೂರಿನ ಎಜುಕೇರ್, ಐಟಿಇಎಸ್ ಅಂಡ್ ವುಮೆನ್‌ಕಾನ್ ಟ್ರಸ್ಟ್ ಸಂಸ್ಥಾಪಕಿ ರಚನಾ ಮಹೇಶ್ ಮಾತನಾಡಿ, ಮಹಿಳೆಯರು ಏಕಕಾಲದಲ್ಲಿ ಹಲವು ಕಾರ್ಯಗಳನ್ನು ನಿರ್ವಹಿಸುವ ಸಾಮರ್ಥ್ಯ ಉಳ್ಳವರಾಗಿದ್ದಾರೆ. ಆದ್ದರಿಂದ ಮಹಿಳೆ ಯಶಸ್ವಿ ವ್ಯಾಪಾರವನ್ನು ನಡೆಸಲು ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗೆಗೆ ವಿವರಿಸಿದರು. ಅಲ್ಲದೇ ಮಹಿಳೆ ಉದ್ದಿಮೆದಾರಳಾಗಿ ಮುನ್ನುಗ್ಗಲು ಸದೃಢ ಮನಃಸ್ಥಿತಿಯನ್ನು ಹೊಂದಿರಬೇಕು. ಹಾಗಾಗಿ ವಿದ್ಯಾರ್ಥಿನಿಯರಿಗೆ ಉದ್ಯಮದಾರರಾಗಲು ವೈವಿಧ್ಯಮಯವಾದ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡಿದರು.

ಮೈಸೂರಿನ ಕಲ್ಯಾಣಿ ಹೋಟೆಲ್‌ನ ವ್ಯವಸ್ಥಾಪಕ ನಿರ್ದೇಶಕಿ ಹಾಗೂ ಕಾಲೇಜಿನ ಹಿರಿಯ ವಿದ್ಯಾರ್ಥಿನಿ ಶ್ರೀಮತಿ ವರ್ಷಿತ ರುಕ್ಮಾಂಗದ ಅವರು, ಒಂದು ಹೋಟೇಲ್ ಉದ್ಯಮ ನಡೆಸಿ ಯಶಸ್ವಿಯಾದ ತಮ್ಮ ಉದ್ಯಮ ಜೀವನದ ಅನುಭವವನ್ನು ಹಂಚಿಕೊಂಡರು. ಜಗತ್ತಿನಾದ್ಯಂತ ಬಹುತೇಕ ಉದ್ಯಮಗಳಲ್ಲಿ ಅಸಂಖ್ಯಾತ ಮಹಿಳೆಯರು ಅದರಲ್ಲಿನ ಸಮಸ್ಯೆ ಮತ್ತು ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ಉನ್ನತ ಸ್ಥಾನವನ್ನಲಂಕರಿಸಿರುವುದನ್ನು ಹಲವು ನಿದರ್ಶನಗಳ ಮೂಲಕ ವಿವರಿಸಿದರು. ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ವ್ಯವಹಾರ ನಿರ್ವಹಣಾ ವಿಭಾಗದ ಮುಖ್ಯಸ್ಥರಾದ ಡಾ. ಶೈಲಾ ಎಸ್ ಇನ್ನಿತರರು ಉಪಸ್ಥಿತರಿದ್ದರು.

ದೇಶದ 13 ರಾಜ್ಯಗಳ 88 ಕ್ಷೇತ್ರಗಳಿಗೆ ಇಂದು ಮತದಾನ



ರಾಹುಲ್ ಗಾಂಧಿ



ಓಂ ಬಿರ್ಲಾ



ಶಶಿ ತರೂರ್



ರಾಜೀವ್ ಚಂದ್ರಶೇಖರ್

ನವದೆಹಲಿ, ಏ.25– 2024ರ ಲೋಕಸಭೆಗೆ ದೇಶದಲ್ಲಿ ಎರಡನೇ ಹಂತದ ಚುನಾವಣೆ ನಾಳೆ (ಏ.26) ನಡೆಯಲಿದೆ. ಕರ್ನಾಟಕದ 14 ಸೇರಿದಂತೆ ಒಟ್ಟು 13 ರಾಜ್ಯಗಳ 88 ಲೋಕಸಭಾ ಕ್ಷೇತ್ರಗಳಿಗೆ ನಾಳೆ ಮತದಾನ ನಡೆಯಲಿದೆ.

ದೇಶದ 543 ಲೋಕಸಭಾ ಕ್ಷೇತ್ರಗಳಿಗೆ 7 ಹಂತಗಳಲ್ಲಿ ಮತದಾನ ದಿನಾಂಕ ನಿಗದಿಪಡಿಸಲಾಗಿದ್ದು, ಏ.19ರಂದು ಮೊದಲ ಹಂತದಲ್ಲಿ 102 ಕ್ಷೇತ್ರಗಳಿಗೆ ಚುನಾವಣೆ ನಡೆದಿದ್ದು, ನಾಳೆ 89 ಕ್ಷೇತ್ರಗಳಿಗೆ ಚುನಾವಣೆ ನಡೆಯಬೇಕಿತ್ತು. ಆದರೆ ಮಧ್ಯಪ್ರದೇಶದ ಬೇತುಲ್ ಲೋಕಸಭಾ ಕ್ಷೇತ್ರದ ಬಿಎಸ್‌ಪಿ ಅಭ್ಯರ್ಥಿ ಅಶೋಕ್ ಭಾಲವಿ ಅವರು ಏ.19ರಂದು ನಿಧನ ಹೊಂದಿದ ಕಾರಣದಿಂದ ನಾಳೆ ಈ ಕ್ಷೇತ್ರದಲ್ಲಿ ನಡೆಯಬೇಕಿದ್ದ ಚುನಾವಣೆಯನ್ನು ಚುನಾವಣಾ ಆಯೋಗವು ಮೇ 7ಕ್ಕೆ ಮುಂದೂಡಿದೆ. ರಾಜ್ಯದ 28 ಕ್ಷೇತ್ರಗಳ ಪೈಕಿ ನಾಳೆ 14 ಕ್ಷೇತ್ರಗಳಿಗೆ, ಅಸ್ಸಾಂನ 5, ಬಿಹಾರ 5, ಛತ್ತೀಸ್‌ಗಡ 3, ಕೇರಳ 20, ಮಧ್ಯಪ್ರದೇಶ 6, ಮಹಾರಾಷ್ಟ್ರ 8, ಮಣಿಪುರ 1, ರಾಜಸ್ತಾನ 13, ತ್ರಿಪುರ 1, ಉತ್ತರ ಪ್ರದೇಶ 8, ಪಶ್ಚಿಮ ಬಂಗಾಳ 3, ಜಮ್ಮು–ಕಾಶ್ಮೀರದ ಒಂದು ಕ್ಷೇತ್ರಕ್ಕೆ ನಾಳೆ ಮತದಾನ ನಡೆಯಲಿದೆ.

ಎಐಸಿಸಿ ನಾಯಕ ರಾಹುಲ್ ಗಾಂಧಿ ಸ್ಪರ್ಧಿಸುತ್ತಿರುವ ಕೇರಳದ ವೈನಾಡು ಕ್ಷೇತ್ರಕ್ಕೂ ನಾಳೆಯೇ ಮತದಾನ ನಡೆಯಲಿದ್ದು, ರಾಹುಲ್ ಗಾಂಧಿಯವರು ಈ ಕ್ಷೇತ್ರದ ಹಾಲಿ ಸಂಸದರಾಗಿದ್ದು, ಪುನರಾಯ್ಕೆಗಾಗಿ ಮತ್ತೆ ಸ್ಪರ್ಧಿಸಿದ್ದಾರೆ. ಲೋಕಸಭಾ ಸ್ಪೀಕರ್ ಓಂ ಬಿರ್ಲಾ ರಾಜಸ್ತಾನದ ಕೋಟಾ ಕ್ಷೇತ್ರದಿಂದ ಸ್ಪರ್ಧಿಸಿದ್ದಾರೆ. 2014 ಮತ್ತು 2019ರಲ್ಲಿ ಈ ಕ್ಷೇತ್ರದಿಂದ ಆಯ್ಕೆಯಾಗಿರುವ ಇವರು ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿ ಸ್ಪರ್ಧಿಗಿಳಿದಿದ್ದಾರೆ.

ಕೇರಳ ರಾಜಧಾನಿ ತಿರುವನಂತಪುರಂ ಕ್ಷೇತ್ರದಿಂದ ಕಾಂಗ್ರೆಸ್ ನಾಯಕ ಹಾಗೂ ಹಾಲಿ ಸಂಸದ ಶಶಿ ತರೂರ್ ಸ್ಪರ್ಧಿಸಿದ್ದು, ಈ ಕ್ಷೇತ್ರದಿಂದ ಸತತ 3 ಬಾರಿ ಗೆಲುವು ಸಾಧಿಸಿರುವ ಅವರು, 4ನೇ ಗೆಲುವಿಗಾಗಿ ಬಿಜೆಪಿ ನಾಯಕ, ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ವಿರುದ್ಧ ಸೆಣಸಾಡುತ್ತಿದ್ದಾರೆ.


ಕರ್ನಾಟಕದಲ್ಲಿ ಮೈಸೂರು ಲೋಕಸಭಾ ಕ್ಷೇತ್ರದಿಂದ ರಾಜವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕಾಂಗ್ರೆಸ್‌ನ ಎಂ. ಲಕ್ಷ್ಮಣ ಜೊತೆ ಸೆಣಸುತ್ತಿದ್ದಾರೆ. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಜೆಡಿಎಸ್ ಅಭ್ಯರ್ಥಿಯಾಗಿದ್ದು, ಮಂಡ್ಯದಲ್ಲಿ ಕಾಂಗ್ರೆಸ್‌ನ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ವಿರುದ್ಧ ಸ್ಪರ್ಧೆಗಿಳಿದಿದ್ದಾರೆ. ಜಯದೇವ ಹೃದ್ರೋಗ ಆಸ್ಪತ್ರೆಯ ಮಾಜಿ ನಿರ್ದೇಶಕ ಡಾ. ಸಿ.ಎನ್.ಮಂಜುನಾಥ್ ಅವರು ಬಿಜೆಪಿ ಅಭ್ಯರ್ಥಿಯಾಗಿ ಬೆಂಗಳೂರು ಗ್ರಾಮಾಂತರದಲ್ಲಿ ಹಾಲಿ ಸಂಸದ ಕಾಂಗ್ರೆಸ್‌ನ ಡಿ.ಕೆ.ಸುರೇಶ್ ವಿರುದ್ಧ ಕಣಕ್ಕಿಳಿದಿದ್ದಾರೆ.

ಮಾಜಿ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರು ಚಿತ್ರದುರ್ಗದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕಾಂಗ್ರೆಸ್‌ನ ಬಿ.ಎನ್. ಚಂದ್ರಪ್ಪ ವಿರುದ್ಧ ಸೆಣಸುತ್ತಿದ್ದಾರೆ. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಬೆಂಗಳೂರು ಉತ್ತರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದು, ಕಾಂಗ್ರೆಸ್‌ನ ರಾಜೀವ್‌ಗೌಡ ವಿರುದ್ಧ ಸ್ಪರ್ಧಿಸುತ್ತಿದ್ದಾರೆ.

ಹುಟ್ಟುಹಬ್ಬ ಆಚರಣೆ...



ಮೈಸೂರಿನ ಹೆಸರಾಂತ ಉದ್ಯಮಿ ಹಾಗೂ ಸಮಾಜ ಸೇವಾಕರ್ತ ಕೆ.ಪ್ರದೀಪ್ ಸಿಂಗ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಅವರ ಸ್ನೇಹ ಬಳಗದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಲಾಯಿತು.



ಮೈಸೂರಿನ ಖ್ಯಾತ ಉದ್ಯಮಿ ಹಾಗೂ ಯುವ ನಾಯಕ ಕೆ.ಪ್ರದೀಪ್ ಸಿಂಗ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಮಹೇಶ್, ಪಾರ್ಶ್ವನಾಥ್, ಶಂಭು ಇತರ ಸ್ನೇಹಿತರು ಅಭಿನಂದಿಸಿ, ಶುಭಾಶಯ ಕೋರಿದರು.

ಉಚಿತ ತಾಂತ್ರಿಕ ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ

ಮೈಸೂರು.ಏ.25– ಕರ್ನಾಟಕ ಸರ್ಕಾರದ ಎಐಟಿಟಿ, ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿ ವಾಸವಾಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಹ ಯುವಕ, ಯುವತಿಯರಿಗೆ ಉದ್ಯೋಗ ಆಧಾರಿತ ಉಚಿತ ತಾಂತ್ರಿಕ ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಟೂಲ್ ಡಿಸೈನ್‌ನಲ್ಲಿ ಪೋಸ್ಟ್ ಡಿಪ್ಲೊಮಾ ತರಬೇತಿಗೆ ಡಿಪ್ಲೊಮಾ/ಬಿಇ (ಎಂಇ/ಎಇ/ಐಪಿ/ಡಿಟಿಡಿಎಂ/ಡಿಪಿಎಂ) ವಿದ್ಯಾರ್ಹತೆ, ಟೂಲ್ ರೂಮ್ ಮೆಷಿನಿಸ್ಟ್ ತರಬೇತಿಗೆ ಎಸ್.ಎಸ್.ಎಲ್.ಸಿ, ಟೂಲ್ & ಡೈ ಮೇಕರ್ ತರಬೇತಿಗೆ ಎಸ್‌ಎಸ್‌ಎಲ್‌ಸಿ ಮತ್ತು ಐಟಿಐ, ಸಿಎನ್‌ಸಿ ಟೆಕ್ನೋಲಜಿ ಮತ್ತು ಸಿಎಮ್‌ಎಮ್ ತರಬೇತಿಗೆ ಐಟಿಐ/ಡಿಪ್ಲೊಮಾ, ಡಿಸೈನರ್ ಮೆಕ್ಯಾನಿಕಲ್(ಸಿಎಡಿ–ಸಿಎಎಮ್) ತರಬೇತಿಗೆ ಡಿಪ್ಲೊಮಾ ಅಥವಾ ಬಿಇ, ಎಲೆಕ್ಟ್ರಿಷಿಯನ್ ತರಬೇತಿಗೆ ಎಸ್‌ಎಸ್‌ಎಲ್‌ಸಿ ಅಥವಾ ಐಟಿಐ, ಕನ್ವೆನ್ಶನಲ್ ಮಷೀನ್ಸ್ ಮತ್ತು ಕ್ವಾಲಿಟಿ ಕಂಟ್ರೋಲ್ಸ್ ತರಬೇತಿಗೆ ಎಸ್‌ಎಸ್‌ಎಲ್‌ಸಿ ಅಥವಾ ಐಟಿಐ, ಸಿಎನ್‌ಸಿ ಮೆಷಿನ್ ಆಪರೇಟರ್ (ಟರ್ನರ್/ಮಿಲ್ಲರ್) ತರಬೇತಿಗೆ ಎಸ್‌ಎಸ್‌ಎಲ್‌ಸಿ ಅಥವಾ ಐಟಿಐ, ಉತ್ಪನ್ನ ವಿನ್ಯಾಸ ಎಂಜಿನಿಯರ್ ಸಿಎಡಿ–ಸಿಎಎಂ ತರಬೇತಿಗೆ ಡಿಪ್ಲೊಮಾ ಅಥವಾ ಬಿಇ, ಕ್ವಾಲಿಟಿ ಇನ್ಸ್‌ಪೆಕ್ಟರ್ ತರ ಬೇತಿಗೆ ಐಟಿಐ ಅಥವಾ ಡಿಪ್ಲೊಮಾ ಹಾಗೂ ಸಿಎನ್‌ಸಿ ಪ್ರೋಗ್ರಾಮರ್–ವಿಎಂಸಿ ಮತ್ತು ಟರ್ನಿಂಗ್ ತರಬೇತಿಗೆ ಡಿಪ್ಲೊಮಾ ಅಥವಾ ಬಿ.ಇ ವಿದ್ಯಾರ್ಹತೆಯನ್ನು ಹೊಂದಿರುವ 16ರಿಂದ 45 ವರ್ಷದೊಳಗಿನ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಮೇ 10 ಕೊನೆಯ ದಿನಾಂಕವಾಗಿದ್ದು, ಮಾಹಿತಿಗಾಗಿ ದೂ.ಸಂ: 99454 42654, 980615384 ಅನ್ನು ಸಂಪರ್ಕಿಸಬಹುದು.

ಲೋಕಾಯುಕ್ತ ಬಲೆಗೆ ಬಿದ್ದ 6 ಮಂದಿ ಭ್ರಷ್ಟ ಅಧಿಕಾರಿಗಳು: ಲಕ್ಷ ಲಕ್ಷ ರೂ. ಲಂಚ!

ಬಳ್ಳಾರಿ,ಏ.25–ಇಲ್ಲಿನ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ(ಬುಡ) ಕಚೇರಿ ಮೇಲೆ ದಾಳಿ ನಡೆಸಿದ ಲೋಕಾಯುಕ್ತ ಅಧಿಕಾರಿಗಳು ಲಕ್ಷ ಲಕ್ಷ ರೂ. ಲಂಚ ಸ್ವೀಕರಿಸುತ್ತಿದ್ದ ಆರು ಮಂದಿ ಭ್ರಷ್ಟ ಅಧಿಕಾರಿಗಳನ್ನು ಬಲೆಗೆ ಬೀಳಿಸಿದ್ದಾರೆ.

ಆಯುಕ್ತರಿಂದ ಹಿಡಿದು ಕೇಸ್ ವರ್ಕರ್‌ವರೆಗೂ ಅಧಿಕಾರಿಗಳು ಲಂಚ ಪಡೆದಿದ್ದರು.ಒಂದೇ ಪ್ರಕರಣದಲ್ಲಿ ಆರು ಮಂದಿ ಅಧಿಕಾರಿಗಳನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ. ಬುಡ ಕಮಿಷನರ್ ರಮೇಶ್ ವಟಗಲ್, ಬುಡ ಟೌನ್ ಪ್ಲಾನಿಂಗ್ ಮೆಂಬರ್ ಕಲ್ಲಿನಾಥ್, ಅಸಿಸ್ಟೆಂಟ್ ಟೌನ್ ಪ್ಲಾನರ್ ಯಶಸ್ವಿನಿ, ಬುಡ ಮ್ಯಾನೇಜರ್ ನಾರಾಯಣ, ಕೇಸ್ ವರ್ಕರ್ ಶಂಕರ್, ಜೂನಿಯರ್ ಇಂಜಿನಿಯರ್ ಕಾಜಾ ಹುಸೇನ್ ಅವರನ್ನು ಬಂಧಿಸಲಾಗಿದೆ.

ಬುಡ ಕಮಿಷನರ್ ರಮೇಶ್ ವಟಗಲ್ – 5 ಲಕ್ಷ ಪಡೆದಿದ್ದರು. 6 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಟೌನ್ ಪ್ಲಾನಿಂಗ್ ಮೆಂಬರ್ ಕಲ್ಲಿನಾಥ್, 3 ಲಕ್ಷ ಲಂಚದ ಬೇಡಿಕೆ ಇಟ್ಟಿದ್ದ ಅಸಿಸ್ಟೆಂಟ್ ಟೌನ್ ಪ್ಲಾನರ್ ಯಶಸ್ವಿನಿ, ಫೋನ್ ಪೇ ಮೂಲಕ 10 ಸಾವಿರ ಲಂಚ ಪಡೆದಿದ್ದ ಮ್ಯಾನೇಜರ್ ನಾರಾಯಣ, 20 ಸಾವಿರ ಲಂಚ ಪಡೆದಿದ್ದ ಕೇಸ್ ವರ್ಕರ್ ಶಂಕರ್, ಫೋನ್ ಪೇ ಮೂಲಕ 20 ಸಾವಿರ ಲಂಚ ಪಡೆದಿದ್ದ ಜೂನಿಯರ್ ಇಂಜಿನಿಯರ್ ಕಾಜಾ ಹುಸೇನ್ ಬಂಧಿಸಲಾಗಿದೆ.

ಎನ್.ಸಿಂಚನಾಗೆ 569 ಅಂಕ



ಮೈಸೂರು,ಏ.25–ಇತ್ತೀಚೆಗೆ ನಡೆದ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಮರಿಮಲ್ಲಪ್ಪ ಪದವಿ ಪೂರ್ವ ಕಾಲೇಜು ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಎನ್.ಸಿಂಚನಾ 600 ಕ್ಕೆ 569 (ಶೇ. 94.18) ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಮೈಸೂರಿನ ಡಾ.ಕೆ.ಕುಮಾರ ಅವರಿಗೆ 'ನೃತ್ಯ ಸಂವರ್ಧಕ್' ರಾಷ್ಟ್ರಪ್ರಶಸ್ತಿ ಪ್ರದಾನ



ಮೈಸೂರು,ಏ.25–ಮುಂಬೈನ ಪ್ರತಿಷ್ಠಿತ ನೃತ್ಯ ಸಂಸ್ಥೆ, ಅಥರ್ವ ಸ್ಕೂಲ್ ಆಫ್ ಫೈನ್ ಆರ್ಟ್ಸ್, ಏ.19 ಮತ್ತು 20ರಂದು ತಮ್ಮ ಸಂಸ್ಥೆ ವತಿಯಿಂದ ಆಯೋಜಿಸಿದ್ದ 9ನೇ ವರ್ಷದ 'ಅಥರ್ವೋತ್ಸವ 2024' ನೃತ್ಯ ಮಹೋತ್ಸವವನ್ನು ಮುಂಬೈನ ರಂಗ ಮಂದಿರ ಮೈಸೂರ್ ಅಸೋಸಿಯೇಷನ್ ಮಾತುಂಗದಲ್ಲಿ ಆಚರಿಸಲಾಯಿತು.

ಈ ಎರಡು ದಿನಗಳ ನೃತ್ಯ ಮಹೋತ್ಸವದಲ್ಲಿ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದ 29 ಸುಪ್ರಸಿದ್ಧ ನರ್ತಕರು ಭಾರತೀಯ ಶಾಸ್ತ್ರೀಯ ನೃತ್ಯಗಳಾದ ಭರತನಾಟ್ಯ, ಕಥಕ್, ಓಡಿಸ್ಸಿ ಮುಂತಾದ ಪ್ರಕಾರಗಳಲ್ಲಿ ಪ್ರದರ್ಶನವನ್ನಿತ್ತು ಅಪಾರ ಮೆಚ್ಚುಗೆಗೆ ಪಾತ್ರರಾದರು.

ಇದೇ ವೇಳೆ ಈ ನೃತ್ಯ ಕ್ಷೇತ್ರದಲ್ಲಿ ಗಣನೀಯವಾಗಿ ಸೇವೆ ಸಲ್ಲಿಸಿದ ಹಲವು ನೃತ್ಯ ಗುರುಗಳಿಗೆ ರಾಷ್ಟ್ರಪ್ರಶಸ್ತಿಯನ್ನು ಇತ್ತು ಗೌರವಿಸಿತು. ಅದರಲ್ಲಿ ನಮ್ಮ ನಾಡಿನ ಹೆಸರಾಂತ ನೃತ್ಯ ಗುರು, ಕರ್ನಾಟಕ ಕಲಾ ಡಾ.ಕೆ.ಕುಮಾರ ಅವರಿಗೆ 'ನೃತ್ಯ ಸಂವರ್ಧಕ್' ರಾಷ್ಟ್ರಪ್ರಶಸ್ತಿಯನ್ನು ತಂಜಾವೂರಿನ ಮಹಾರಾಷ್ಟ್ರದ ದೊರೆಗಳ ವಂಶಸ್ಥರಾದ ಪ್ರಿನ್ಸ್ ಪ್ರತಾಪ್ ಸಿನ್ಹ್ ನೀಡಿ ಗೌರವಿಸಿದರು.

ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತ ಡಾ.ಶ್ರೀಮತಿ ಶೈಲೇಶ್ ಶ್ರೀವಾಸ್ತವ್, ವಿನಾಯಕ್ ಬಿ.ಅಪರಾಜ್, ಸಂಸ್ಥೆಯ ಸ್ಥಾಪಕರು, ನಿರ್ದೇಶಕರಾದ ವಿಶಾಲ್, ಶ್ರೀಮತಿ ಶಮಲ್ ಪವಾರ್ ಮತ್ತಿತರರಿದ್ದರು.



ವರನಟ ಡಾ.ರಾಜಕುಮಾರ್ ಅವರ 95ನೇ ಜನ್ಮದಿನದ ಅಂಗವಾಗಿ ಮೈಸೂರು ದಸರಾ ವಸ್ತುಪ್ರದರ್ಶನ ಆವರಣದಲ್ಲಿರುವ ರಾಜಕುಮಾರ್ ಪ್ರತಿಮೆಗೆ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಮಾಲಾರ್ಪಣೆ ಮಾಡಿದರು. ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಜೇಶ್ ಜಿ.ಗೌಡ, ಕೆಪಿಸಿಸಿ ಸದಸ್ಯ ನಜರಬಾದ್ ನಟರಾಜ್, ನಾಗೇಶ್, ಮಹದೇವ್, ಕೃಷ್ಣಪ್ಪ, ಲೋಕೇಶ್, ಪುನೀತ್ ರಾಜಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ರಾಜು, ಶಿವು ಕೆ.ಜಿ. ಕೊಪ್ಪಲು, ಸೋಮಣ್ಣ, ಗಿರೀಶ್, ರಾಮು ಧನಂಜಯ್ ಶಿವರಾಜ್ ಇನ್ನಿತರರಿದ್ದರು.

ಜೆಎಸ್‌ಎಸ್ ಆಸ್ಪತ್ರೆಯಲ್ಲಿ ವಿಶೇಷ ಗ್ರಂಥಾಲಯ ಉದ್ಘಾಟನೆ



ಮೈಸೂರು,ಏ.25–ಮೈಸೂರು ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಮೈಂಡ್ಸ್ ಯುನೈಟೆಡ್ ಟ್ರಸ್ಟ್ ಮತ್ತು ಇನ್ಫೋಸಿಸ್ ಪ್ರತಿಷ್ಠಾನದ ಸಹಕಾರದೊಂದಿಗೆ ಸ್ಥಾಪಿಸಿರುವ 'ವಿಶೇಷ ಗ್ರಂಥಾಲಯ'ವನ್ನು ಪದ್ಮಶ್ರೀ ಪುರಸ್ಕೃತ, ಬೆಂಗಳೂರು ನಿಮ್ಹಾನ್ಸ್ ಆಸ್ಪತ್ರೆ ನಿವೃತ್ತ ಪ್ರಾಧ್ಯಾಪಕ ಡಾ.ಸಿ.ಆರ್.ಚಂದ್ರಶೇಖರ್ ಉದ್ಘಾಟಿಸಿ, ವಿಶ್ವ ಆರೋಗ್ಯ ದಿನದ ಪ್ರಯುಕ್ತ 'ನನ್ನ ಆರೋಗ್ಯ ನನ್ನ ಹಕ್ಕು' ಕುರಿತು ಮಾತನಾಡಿದರು.

ಆರೋಗ್ಯ ಸೌಲಭ್ಯಗಳಲ್ಲಿ ರೋಗಿಗಳ ಸೇವೆಯು ಪ್ರಮುಖವಾದುದು. ನಿತ್ಯವೂ ಸಾವಿರಾರು ರೋಗಿಗಳು ಮತ್ತು ಅವರ ಕುಟುಂಬದ ಸದಸ್ಯರು ಚಿಕಿತ್ಸೆಯನ್ನು ಪಡೆಯಲು ಆಸ್ಪತ್ರೆಗೆ ಭೇಟಿ ನೀಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಹೆಚ್ಚಿನ ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಾಗುತ್ತಾರೆ. ಹೀಗೆ ಜನರು ಸಾಕಷ್ಟು ಸಮಯವನ್ನು ಆಸ್ಪತ್ರೆಗಳಲ್ಲಿ ಕಳೆಯುತ್ತಾರೆ. ಮನುಷ್ಯನಿಗೆ ಸಮಯವು ಅತ್ಯಂತ ಉಪಯುಕ್ತವಾದುದು. ಅದನ್ನು ಸಾಧ್ಯವಾದಷ್ಟೂ ಜ್ಞಾನಾರ್ಜನೆ ಮಾಡುತ್ತಾ ಸದುಪಯೋಗಪಡಿಸಿಕೊಳ್ಳಬೇಕು. ಜೆಎಸ್‌ಎಸ್ ಆಸ್ಪತ್ರೆಗೆ ಚಿಕಿತ್ಸೆಗೆ ಭೇಟಿ ನೀಡುವ ರೋಗಿಗಳು ಮತ್ತು ಅವರ ಕುಟುಂಬದ ಸದಸ್ಯರು ಜ್ಞಾನಾರ್ಜನೆ ಮತ್ತು ಸಮಯದ ಸದುಪಯೋಗಪಡಿಸಿಕೊಳ್ಳಲು ಹೆಚ್ಚಿನ ಅನುಕೂಲವಾಗುವಂತೆ ಈ ವಿಶೇಷ ಪ್ರಾಮಾಣಿಕ ಗ್ರಂಥಾಲಯವನ್ನು ಸ್ಥಾಪಿಸಲಾಗಿದೆ. ಈ ಗ್ರಂಥಾಲಯದಲ್ಲಿ ಕನ್ನಡ ಮತ್ತು ಇಂಗ್ಲೀಷ್ ಭಾಷೆಯ ಸಾಹಿತ್ಯಕ, ಆಧ್ಯಾತ್ಮಿಕ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಮಾಹಿತಿಗಳುಳ್ಳ ಪುಸ್ತಕಗಳು ಲಭ್ಯವಿವೆ. ಇದು ಸೋಮವಾರದಿಂದ ಶನಿವಾರದವರೆಗೆ ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಕಾರ್ಯನಿರ್ವಹಿಸುತ್ತದೆ. ಹೊರರೋಗಿ ಮತ್ತು ಒಳರೋಗಿಗಳು, ಅವರ ಕುಟುಂಬದ ಸದಸ್ಯರು ಯಾವುದೇ ಪುಸ್ತಕವನ್ನು ಕನಿಷ್ಠ ವೆಚ್ಚದಲ್ಲಿ ಖರೀದಿಸಬಹುದು ಅಥವಾ ಎರವಲು ಪಡೆದು ಓದಿ ಮರಳಿಸಬಹುದು ಎಂದರು.

ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ.ಹೆಚ್.ಬಸವನಗೌಡಪ್ಪ, ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಸಿ.ಪಿ.ಮಧು, ಮನೋವೈದ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಎಂ. ಕಿಶೋರ್ ಹಾಗೂ ವಿಭಾಗದ ಸಿಬ್ಬಂದಿ ಉಪಸ್ಥಿತರಿದ್ದರು.

ಏ.29ರಿಂದ ಮೇ 1ರವರೆಗೆ ಯರಗನಹಳ್ಳಿಯಲ್ಲಿ ಸಾಮೂಹಿಕ ಕಲ್ಯಾಣೋತ್ಸವ, ರಾಮೋತ್ಸವ

ಮೈಸೂರು: ಚಾಮರಾಜನಗರ ತಾಲೂಕಿನ ಯರಗನಹಳ್ಳಿ ಗ್ರಾಮದಲ್ಲಿ ಶ್ರೀ ಸೀತಾರಾಮ ಸೇವಾ ಟ್ರಸ್ಟ್ ವತಿಯಿಂದ ಏಪ್ರಿಲ್ 29ರಿಂದ ಮೇ 1ರವರೆಗೆ ಶ್ರೀ ಸೀತಾರಾಮರ ಸಾಮೂಹಿಕ ಕಲ್ಯಾಣೋತ್ಸವ ಹಾಗೂ ರಾಮೋತ್ಸವದ ಅಂಗವಾಗಿ ವಿವಿಧ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಏಪ್ರಿಲ್ 29ರಂದು ಬೆಳಗ್ಗೆ 6ರಿಂದ ಸುಪ್ರಭಾತ, ಗಂಗಾ ಪೂಜೆ, ಮಹಾ ತಿರುಮಂಜನಂ, ಅಲಂಕಾರಾಸನ, ಮಂತ್ರ ಪುಷ್ಪ, ಮಧ್ಯಾಹ್ನ 12ರಿಂದ ಮಹಾ ಮಂಗಳಾರತಿ, ಶಾತ್ತುಮುರೈ ಹಾಗೂ ತೀರ್ಥಪ್ರಸಾದ ವಿನಿಯೋಗವಿರುತ್ತದೆ. ಮಧ್ಯಾಹ್ನ 3.30ಕ್ಕೆ ಕಾಶೀಯಾತ್ರೆ ಮತ್ತು ಕಲ್ಯಾಣೋತ್ಸವ, ಶಾತ್ತುಮುರೈ ಮತ್ತು ತೀರ್ಥ ಪ್ರಸಾದ ವಿನಿಯೋಗವಿರುತ್ತದೆ.

ಏ.30ರಂದು ಬೆಳಗ್ಗೆ 6ರಿಂದ ಸುಪ್ರಭಾತ, ಸ್ವಸ್ತಿವಾಚನ, ವಿಶ್ವಕ್ಸೇನಾರಾಧನ, ಭಗವದ್ ವಾಸುದೇವ ಪುಣ್ಯಾಹವಾಚನ, ಮಹಾ ಸಂಕಲ್ಪ, ನವಕುಂಭಾರಾಧನೆ, ರಾಮ ತಾರಕ ಹೋಮ, ಪಂಚಸೂಕ್ತ ಹೋಮ, ಪರಿವಾರ ಹೋಮ, ಮಹಾ ಪೂರ್ಣಾಹುತಿ, ಉತ್ಸವಮೂರ್ತಿಗೆ ಸ್ನಪನ ತಿರುಮಂಜನಂ, ವಿಷ್ಣು ಸಹಸ್ರನಾಮ ಪಾರಾಯಣ, ವೇದ ಪಾರಾಯಣ, ದಿವ್ಯ ಪ್ರಬಂಧ ಪಾರಾಯಣ, ಶ್ರೀರಾಮ ಪಟ್ಟಾಭಿಷೇಕ ಮಹಾಮಂಗಳಾರತಿ ಹಾಗೂ ತೀರ್ಥಪ್ರಸಾದ ವಿನಿಯೋಗ ಕಾರ್ಯಕ್ರಮವಿರುತ್ತದೆ. ರಾತ್ರಿ 9 ಗಂಟೆಗೆ ಹಾವೇರಿ ಪ್ರಕಾಶ್‌ರವರ ಪುತ್ರಿ ಶ್ರೀಮತಿ ರಾಧಿಕಾ ಮತ್ತು ಸಂಗಡಿಗರಿಂದ ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಮೇ 1ರಂದು ಬೆಳಗ್ಗೆ 6.30ರಿಂದ ಸುಪ್ರಭಾತ, ವಿಶ್ವಕ್ಸೇನ ಪೂಜಾ, ಭಗವದ್ ವಾಸುದೇವ ಪುಣ್ಯಾಹವಾಚನಂ, ವಸಂತ ಮಾಧವಿ ಪೂಜೆ, ವಸಂತೋತ್ಸವ, ಮಹಾಮಂಗಳಾರತಿ, ಶಾತ್ತುಮುರೈ, ರಾಷ್ಟ್ರಾಶೀರ್ವಾದ ಹಾಗೂ ತೀರ್ಥ ಪ್ರಸಾದ ವಿನಿಯೋಗವಿದೆ.

ಅಂದು ರಾತ್ರಿ 7.30ಕ್ಕೆ ಶಯನೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಶ್ರೀ ಸೀತಾರಾಮ ಸೇವಾ ಟ್ರಸ್ಟ್ ಸಮಿತಿಯ ಪ್ರಕಟಣೆ ತಿಳಿಸಿದೆ.



ಮೈಸೂರಿನ ನಮನ ಕಲಾ ಮಂಟಪದಲ್ಲಿ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ರಾಜಕುಮಾರ್ ಜನ್ಮದಿನದ ಅಂಗವಾಗಿ ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಅವರನ್ನು ಗೌರವಿಸಲಾಯಿತು. ರಘುರಾಂ ವಾಜಪೇಯಿ, ಬಸವರಾಜೇಂದ್ರಸ್ವಾಮಿ, ಬನ್ನೂರು ಕೆ.ರಾಜು, ಲತಾ ಸುದರ್ಶನ್, ಟಿ.ಸುರೇಶ್ ಇದ್ದಾರೆ

ರೈಲಿಗೆ ಸಿಲುಕಿ ಮೂವರು ಯುವಕರ ಧಾರುಣ ಸಾವು

ಬೆಂಗಳೂರು, ಏ.25– ರೈಲಿಗೆ ಸಿಲುಕಿ 25 ವರ್ಷದ ಮೂವರು ಯುವಕರು ಸಾವನ್ನಪ್ಪಿರುವ ಘಟನೆ ಬೆಂಗಳೂರಿನಲ್ಲಿ ಇಂದು ಮಧ್ಯಾಹ್ನ ನಡೆದಿದೆ.

ಬೆಂಗಳೂರಿನ ಬೈಯಪ್ಪನಹಳ್ಳಿ ಬಳಿ ಮೂವರು ಯುವಕರು ರೈಲಿಗೆ ಸಿಲುಕಿ ಸಾವನ್ನಪ್ಪಿದ್ದು, ಇವರನ್ನು ಆಂಧ್ರಪ್ರದೇಶದ ಮೂಲದ ಚಿತ್ತೂರಿನ ಮೂಲದವರು ಎಂದು ಶಂಕಿಸಲಾಗಿದೆ. ಶಶಿಕುಮಾರ್ (23), ಲೋಕೇಶ್ (25) ಮೃತ ದುರ್ದೈವಿಗಳು.

ಮತ್ತೋರ್ವನ ಗುರುತು ಪತ್ತೆಯಾಗಿಲ್ಲ. ಆತ್ಮಹತ್ಯೆಗೆ ನಿಖರ ಕಾರಣವೇನು ಎಂಬುದು ತಿಳಿದುಬಂದಿಲ್ಲ. ಇನ್ನು ಘಟನಾ ಸ್ಥಳಕ್ಕೆ ಆಗಮಿಸಿದ ಬೈಯಪ್ಪನಹಳ್ಳಿ ಪೊಲೀಸರು ಪರಿಶೀಲನೆ ನಡೆಸಿದ್ದಾರೆ, ಹೆಚ್ಚಿನ ಮಾಹಿತಿಗಾಗಿ ನಿರೀಕ್ಷಿಸಲಾಗುತ್ತಿದೆ.

ರಾಜಧರ್ಮ ಪರಿಪಾಲನೆ ಮಾಡುವವರನ್ನು ಚುನಾವಣೆಯಲ್ಲಿ ಆಯ್ಕೆ ಮಾಡುವಂತೆ ಮನವಿ



ಮೈಸೂರು, ಏ. 25– ಮೈಸೂರಿನ ರಾಮಕೃಷ್ಣನಗರ ವೃತ್ತದ ಪರಮಹಂಸ ಮಂಟಪದಲ್ಲಿ ತಿಂಗಳ ತಿಳಿವು ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ವೇಳೆ ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಪ್ರಸ್ತುತ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ರಾಜಧರ್ಮ ಪಾಲನೆ ಅವಶ್ಯಕತೆ ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿ, ಭಾರತದ ಉಗಮದ ಕಾಲದಿಂದಲೂ ಆಡಳಿತ ನಡೆಸಿದ ರಾಜರು, ಪಾಳೆಯಗಾರರು ರಾಜಧರ್ಮದ ನೀತಿಗನುಸಾರವಾಗಿ ಆಡಳಿತ ನಡೆಸಿ ದೇಶಕ್ಕೆ ಭದ್ರವಾದ ಮೌಲ್ಯಾಧಾರಿತ ಸಮಾಜವನ್ನು ಕಟ್ಟಿದ್ದಾರೆಂದು ತಿಳಿಸಿದರಲ್ಲದೆ, ಸ್ವಾತಂತ್ರ್ಯದ ನಂತರ ಬಂದ ಸಂವಿಧಾನಾತ್ಮಕ ರಾಜಕೀಯ ವ್ಯವಸ್ಥೆಯಲ್ಲಿ ರಾಜಧರ್ಮದ ನೀತಿಗಳು ದುರ್ಬಲವಾಗುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದರು.

ಪ್ರಸ್ತುತ ರಾಜಕೀಯ ವ್ಯವಸ್ಥೆಯಲ್ಲಿ ಅಧರ್ಮ ಕ್ಯಾನ್ಸರ್‌ನಂತೆ ಬೆಳೆಯುತ್ತಿದ್ದು ಇಂದಿನ ಸಾಮಾಜಿಕ ಅಶಾಂತಿಗೆ ಕಾರಣವಾಗಿದೆ ಎಂದರು. ಈ ದೇಶವನ್ನಾಳಿದ ಪ್ರಥಮ ರಾಜ ಚಂದ್ರಗುಪ್ತ ಮೌರ್ಯ ಪಾಲಿಸಿದ ರಾಜಧರ್ಮ, ಅನಂತರ ಬಂದ ಅಶೋಕ ಚಕ್ರವರ್ತಿ ಪಾಲಿಸಿದ ಸಾಮಾಜಿಕ ಪರ ಆಡಳಿತ, ಅನಂತರದಲ್ಲಿ ಬಂದ ರಾಜಮಹಾರಾಜರುಗಳ ನಿಸ್ವಾರ್ಥ ತ್ಯಾಗಮಯಿ ಜನಪರ ಸೇವೆಗಳನ್ನು ಸ್ಮರಿಸಿ, ಇಂದಿನ ರಾಜಕಾರಣಿಗಳಿಗೆ ಇವು ಅನುಕರಣೀಯ ಎಂದರು.

ಈ ದೇಶದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಅನುಕರಣೆಯಲ್ಲಿದ್ದ ಸ್ವಾರ್ಥ ರಹಿತ ತ್ಯಾಗದ ರಾಜಧರ್ಮ ಇಂದು ಸ್ವಾರ್ಥ ಮತ್ತು ಅಧಿಕಾರ ಮತ್ತು ಸಂಪತ್ತು ಗಳಿಕೆ ಅಧರ್ಮದ ರಾಜಕೀಯವಾಗಿ ಪರಿವರ್ತನೆಯಾಗುತ್ತಿದೆ ಎಂದು ತಿಳಿಸಿ, ಪ್ರಸ್ತುತ ಸಂದರ್ಭದಲ್ಲಿ ರಾಜಧರ್ಮ ಪರಿಪಾಲನೆ ಮಾಡುವವರನ್ನೇ ಆಯ್ಕೆ ಮಾಡಬೇಕೆಂದು ಕರೆಯಿತ್ತರು.

ಬೆಂಗಳೂರಲ್ಲಿ ಯುವತಿ ಅಪಹರಿಸಿ ಸಾಮೂಹಿಕ ಅತ್ಯಾಚಾರ; ಐವರು ಕಾಮುಕರ ಬಂಧನ

ಬೆಂಗಳೂರು, ಏ.25– ರಾಜಧಾನಿ ಬೆಂಗಳೂರಿನಲ್ಲಿ ಪೈಶಾಚಿಕ ಕೃತ್ಯವೊಂದು ನಡೆದಿದ್ದು, 23 ವರ್ಷದ ಯುವತಿಯನ್ನು ಅಪಹರಿಸಿ ಸಾಮೂಹಿಕ ಅತ್ಯಾಚಾರ ಎಸಗಲಾಗಿದೆ. ಐವರು ಕಾಮುಕರು ಯುವತಿಯನ್ನು ಅಪಹರಿಸಿ ನಿರ್ಜನ ಪ್ರದೇಶದಲ್ಲಿ ಅತ್ಯಾಚಾರವೆಸಗಿದ್ದಾರೆ. ಸದ್ಯ ಸಂತ್ರಸ್ತೆ ಕುಟುಂಬಸ್ಥರು ನೀಡಿದ ದೂರಿನ ಮೇರೆಗೆ ಹೈಗ್ರೌಂಡ್ಸ್ ಪೊಲೀಸರು ಐದು ಜನ ಆರೋಪಿಗಳನ್ನು ಬಂಧಿಸಿದ್ದಾರೆ ಈ ಸಂಬಂಧ ತನಿಖೆ ನಡೆಸಲಾಗುತ್ತಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂಬ ಪ್ರತಿಪಕ್ಷ ಬಿಜೆಪಿಯ ಆರೋಪದ ಬೆನ್ನಲ್ಲೇ ಅಪರಾಧ ಕೃತ್ಯಗಳು ಹೆಚ್ಚಾಗಿವೆ ಹುಬ್ಬಳ್ಳಿಯಲ್ಲಿ ನಡೆದ ನೇಹಾ ಕೊಲೆ ಪ್ರಕರಣದ ಕಾವು ಆರುವ ಮುನ್ನವೇ ಬೆಂಗಳೂರಲ್ಲಿ ಅತ್ಯಾಚಾರ ಪ್ರಕರಣ ವರದಿಯಾಗಿದೆ.

ಮಂಡ್ಯ ಲೋಕಸಭಾ ಕ್ಷೇತ್ರ

ಇಂದು ಮತದಾನ

ಬೆಳಿಗ್ಗೆ 7 ಗಂಟೆಯಿಂದ ಸಂಜೆ 6 ರವರೆಗೆ

ಮಂಡ್ಯ,ಏ.25– ಕರ್ನಾಟಕದಲ್ಲೇ ತೀವ್ರ ಜಿದ್ದಾಜಿದ್ದಿನ ಕಣವಾಗಿರುವ ಲೋಕಸಭಾ ಕ್ಷೇತ್ರವಾದ ಮಂಡ್ಯದಲ್ಲಿ ನಾಳೆ (ಶುಕ್ರವಾರ) ಮತದಾನಕ್ಕೆ ಸಕಲ ರೀತಿಯಲ್ಲೂ ಸಿದ್ಧತೆ ನಡೆದಿದ್ದು, ಬೆಳಿಗ್ಗೆ 7 ಗಂಟೆಯಿಂದ ಆರಂಭವಾಗುವ ಮತದಾನ ಪ್ರಕ್ರಿಯೆಗೆ ಎಲ್ಲಾ ರೀತಿಯಲ್ಲಿ ಜಿಲ್ಲಾಡಳಿತ ಅಂತಿಮಗೊಳಿಸಿದೆ. ಸಂಜೆ 6ಗಂಟೆಯವರೆಗೆ ಮತದಾನ ನಡೆಯಲಿದೆ.

ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಮಂಡ್ಯ, ಮದ್ದೂರು, ಮಳವಳ್ಳಿ, ಕೆ.ಆರ್. ಪೇಟೆ, ನಾಗಮಂಗಲ, ಶ್ರೀರಂಗಪಟ್ಟಣ, ಮೇಲುಕೋಟೆ ಹಾಗೂ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರಗಳು ಒಳಪಡಲಿದ್ದು, ಈ ಎಂಟು ವಿಧಾನಸಭಾ ಕ್ಷೇತ್ರಗಳಿಂದ ಅಂತಿಮವಾಗಿ 17,79,243 ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ಈ ಪೈಕಿ 8,76,112 ಮಂದಿ ಪುರುಷ ಮತದಾರರು, 9,02,963 ಮಹಿಳಾ ಮತದಾರರು ಹಾಗೂ 168 ಮಂದಿ ಇತರೆ ಮತದಾರರು ಮತದಾನದ ಹಕ್ಕು ಹೊಂದಿದ್ದಾರೆ.

ಮತದಾನಕ್ಕಾಗಿ 2076 ಮತಗಟ್ಟೆಗಳನ್ನು ಸಿದ್ಧಪಡಿಸಲಾಗಿದ್ದು, ಎಲ್ಲಾ ರೀತಿಯ ಮೂಲಭೂತ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ. ಮಳವಳ್ಳಿಯ 272, ಮದ್ದೂರಿನ 254, ಮೇಲುಕೋಟೆಯ 264, ಮಂಡ್ಯದ 264, ಶ್ರೀರಂಗಪಟ್ಟಣದ 249, ನಾಗಮಂಗಲದ 260, ಕೃಷ್ಣರಾಜಪೇಟೆಯ 261 ಹಾಗೂ ಕೆ.ಆರ್.ನಗರದ 252 ಮತಗಟ್ಟೆಗಳಿದ್ದು, ಈ ಪೈಕಿ 693 ಅತಿಸೂಕ್ಷ್ಮ ಮತಕೇಂದ್ರಗಳೆಂದು ಗುರುತಿಸಲಾಗಿದ್ದು, ಈ ಭಾಗದಲ್ಲಿ ಅತಿ ಹೆಚ್ಚಿನ ಕಟ್ಟೆಚ್ಚರ ವಹಿಸಲಾಗಿದೆ. ಜೊತೆಗೆ 1120 ಮತಗಟ್ಟೆಗಳನ್ನು ವೆಬ್ ಕ್ಯಾಸ್ಟಿಂಗ್ ಎಂದು ಗುರುತಿಸಲಾಗಿದ್ದು, ಈ ಮತಗಟ್ಟೆಗಳಲ್ಲಿ ಸಿಸಿ ಕ್ಯಾಮೆರಾಗಳ ಅಳವಡಿಕೆ ಕಡ್ಡಾಯವಾಗಿದೆ. ಇಲ್ಲಿ ನಡೆಯುವ ಸಂಪೂರ್ಣ ಚುನಾವಣಾ ಪ್ರಕ್ರಿಯೆಯನ್ನು ಬೆಂಗಳೂರಿನಲ್ಲಿ ಚುನಾವಣಾ ಆಯೋಗದ ಅಧಿಕಾರಿಗಳು ಹಾಗೂ ಮಂಡ್ಯದಲ್ಲಿ ಜಿಲ್ಲಾ ಚುನಾವಣಾ ಆಯೋಗದ ಅಧಿಕಾರಿಗಳು ಸ್ಥಳದಲ್ಲೇ ಕುಳಿತು ವೀಕ್ಷಿಸಲಿದ್ದಾರೆ.

ಸಂಪೂರ್ಣ ಮೊಬೈಲ್ ನಿಷೇಧ: ಮತಗಟ್ಟೆಯ 100 ಮೀಟರ್ ಅಂತರದೊಳಗೆ ಮೊಬೈಲ್ ಬಳಕೆ ನಿಷೇಧವಿದ್ದು, ಎಲ್ಲಾ ರೀತಿಯ ಪ್ರಚಾರ ನಿರ್ಬಂಧಿಸಲಾಗಿದೆ. ಮತಗಟ್ಟೆಯಿಂದ 200 ಮೀ. ವ್ಯಾಪ್ತಿಯಲ್ಲಿ ಯಾವುದೇ ರಾಜಕೀಯ ಪಕ್ಷಗಳ ಟೆಂಟ್‌ಗಳನ್ನು ತೆರೆಯುವಂತಿಲ್ಲ ಹಾಗೂ ಮತಗಟ್ಟೆಯ 200 ಮೀ. ನಿಂದ ಹೊರಗೆ ತಾತ್ಕಾಲಿಕ ಬೂತ್ ತೆರೆಯಲು ಬಯಸಿದ್ದಲ್ಲಿ ಸ್ಥಳೀಯ ಪ್ರಾಧಿಕಾರದಿಂದ ಹಾಗೂ ಸಂಬಂಧಪಟ್ಟ ಸಹಾಯಕ ಚುನಾವಣಾ ಅಧಿಕಾರಿಗಳಿಂದ ಅನುಮತಿ ಇದ್ದರೆ ಮಾತ್ರ ಅವಕಾಶ ಇರಲಿದ್ದು, ಟೆಂಟ್‌ನಲ್ಲಿ ಕೇವಲ ಇಬ್ಬರು ಕಾರ್ಯಕರ್ತರಿಗೆ ಸಾಕಾಗುವಷ್ಟು ಟಾರ್ಪಲಿನ್ ಅಥವಾ ಛತ್ರಿ ಮೇಲ್ಛಾವಣಿ ಹೊಂದಬಹುದಾಗಿದ್ದು, 2 ಕುರ್ಚಿ ಮತ್ತು ಮೇಜು ಹೊಂದಲು ಅವಕಾಶವಿರುತ್ತದೆ


ಇದಲ್ಲದೇ ಮತಗಟ್ಟೆಯ ಪ್ರಮುಖ ಅಧಿಕಾರಿಗೊಬ್ಬರಿಗೆ ಮೊಬೈಲ್ ಬಳಸಲು ಅವಕಾಶವಿದ್ದು, ಮೊಬೈಲ್‌ನ್ನು ಸೈಲೆಂಟ್ ಮೋಡ್‌ನಲ್ಲಿಟ್ಟಿರಬೇಕು. ಅದನ್ನು ಬಿಟ್ಟು ಉಳಿದವರಿಗೆ ಮೊಬೈಲ್ ಬಳಕೆಗೆ ಅವಕಾಶ ಇರುವುದಿಲ್ಲ. ಜಿಲ್ಲಾ ಚುನಾವಣಾ ಆಯೋಗಕ್ಕೆ ಗಂಟೆಗೊಮ್ಮೆ ಮತದಾನದ ಅಂಕಿ–ಅಂಶದ ಮಾಹಿತಿ ನೀಡಲಷ್ಟೇ ಫೋನ್ ಬಳಕೆಗೆ ಅವಕಾಶ ಕೊಡಲಾಗಿದೆ. ಇದಲ್ಲದೇ ಸ್ವತಃ ಚುನಾವಣಾಧಿಕಾರಿಗಳಾದ ಜಿಲ್ಲಾಧಿಕಾರಿ ಸಹ ಮತಗಟ್ಟೆ ಒಳಗೆ ಫೋನ್ ಬಳಸಲು ನಿಷೇಧವಿದೆ.

ಪ್ರತಿ ಮತಗಟ್ಟೆಗೆ ಒಬ್ಬ ಪೋಲಿಂಗ್ ಏಜೆಂಟ್ ಅನ್ನು ಹಾಗೂ ಇಬ್ಬರು ರಿಲೀಫ್ ಏಜೆಂಟ್ ಅನ್ನು ನೇಮಕ ಮಾಡಲು ಅವಕಾಶವಿದ್ದು, ಇವರುಗಳು ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ಆಸೀನರಾಗತಕ್ಕದ್ದು. ಮತಗಟ್ಟೆಯಲ್ಲಿ ಜನಪ್ರತಿನಿಧಿ ಕಾಯ್ದೆ ಕಲಂ 128 ರಲ್ಲಿ ನಿರ್ದಿಷ್ಟಪಡಿಸಿದಂತೆ ಮತದಾನದ ಗೌಪ್ಯತೆಯನ್ನು ಕಾಪಾಡಲು ಸೂಚನೆ ಕೊಡಲಾಗಿದೆ.

ಅಭ್ಯರ್ಥಿಗಳ ಸಂಚಾರಕ್ಕೆ ಮೂರು ವಾಹನಗಳಿಗೆ ಮಾತ್ರ ಅವಕಾಶ: ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳು ಕ್ಷೇತ್ರದ ಯಾವುದೇ ಮತಗಟ್ಟೆಗಳಿಗೆ ಭೇಟಿ ಕೊಡಲು ಅವಕಾಶವಿದ್ದು, ಮತಕೇಂದ್ರಗಳ ಬಳಿ ಮೊಬೈಲ್ ಬಳಸದೇ ಅಭ್ಯರ್ಥಿಯು ಮತದಾನದ ಪ್ರಕ್ರಿಯೆ ಬಗ್ಗೆ ವೀಕ್ಷಿಸಬಹುದಾಗಿದೆ. ಆದರೆ ಮತಕೇಂದ್ರದ ಒಳಗೆ ಅವರಿಗೊಬ್ಬರಿಗೆ ಮಾತ್ರ ಅವಕಾಶವಿದ್ದು, ಅದನ್ನು ಬಿಟ್ಟರೆ ಸಂಚರಿಸಲು ಮೂರು ವಾಹನದೊಂದಿಗೆ 15 ಮಂದಿ ಮೀರದಂತೆ ಕ್ಷೇತ್ರವಾರು ಸಂಚರಿಸಬಹುದಾಗಿದೆ.

ವಿಶೇಷ ವ್ಯವಸ್ಥೆ:ವಿಕಲಚೇತನ ಹಾಗೂ ಹಿರಿಯ ನಾಗರೀಕ ಮತದಾರರಿಗೆ ಸುಗಮವಾಗಿ ಮತದಾನ ಮಾಡಲು ಪ್ರತಿ ಮತಗಟ್ಟೆಗೆ ಇಳಿಜಾರು ವ್ಯವಸ್ಥೆ, ವೀಲ್‌ಚೇರ್ ವ್ಯವಸ್ಥೆ ಮಾಡಲಾಗಿರುತ್ತದೆ. ದೃಷ್ಟಿ ದೋಷವುಳ್ಳ ವಿಕಲಚೇತನರಿಗೆ ಮತದಾನ ಮಾಡಲು ಅವಶ್ಯಕವಾಗುವಂತೆ ಬ್ರೈಲ್ ಲಿಪಿಯುಳ್ಳ ವಿದ್ಯುನ್ಮಾನ ಮತಯಂತ್ರ ವ್ಯವಸ್ಥೆ ಹಾಗೂ ಡಮ್ಮಿ ಬ್ರೈನ್ ಬ್ಯಾಲೆಟ್ ಪೇಪರ್ ವ್ಯವಸ್ಥೆ, ಶ್ರವಣದೋಷವುಳ್ಳ ವಿಕಲಚೇತನರಿಗೆ ಮತದಾನ ಮಾಡಲು ಅವಶ್ಯಕವಿದ್ದಲ್ಲಿ ಸಂಜ್ಞಾ ಭಾಷೆ ತಜ್ಞರಿಂದ ಸಂಜ್ಞಾ ಭಾಷೆ ಮೂಲಕ ಅವಕಾಶ ಕಲ್ಪಿಸಲಾಗಿದೆ. ಮಂದದೃಷ್ಟಿಯುಳ್ಳ ವಿಕಲಚೇತನರಿಗೆ ಮತದಾನ ಮಾಡಲು ಮತಗಟ್ಟೆ ಕೇಂದ್ರಗಳಲ್ಲಿ ಬೂತಕನ್ನಡಿ ವ್ಯವಸ್ಥೆ ಹಾಗೂ ವಿಕಲಚೇತನರು, ಅಶಕ್ತರಿಗೆ ಮತ್ತು ಹಿರಿಯ ನಾಗರಿಕರಿಗೆ ಮತದಾನ ಮಾಡಲು ಸರತಿ ಸಾಲಿನಲ್ಲಿ ನಿಲ್ಲದೆ ನೇರವಾಗಿ ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗಿದೆ.

ಮತದಾನದ ಹಬ್ಬಕ್ಕೆ ಸಜ್ಜಾದ ವಿವಿಧ ಮತಗಟ್ಟೆಗಳು


ಮಂಡ್ಯ: ಮತದಾನದ ದಿನದಂದ ಮತದಾರರಿಗೆ ಹಬ್ಬದ ವಾತಾವರಣ ರೀತಿ ಸ್ವಾಗತಿಸಲು ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಯುವ, ಸಖಿ, ವಿಶೇಷಚೇತನ, ಸಾಂಪ್ರದಾಯಿಕ ಹಾಗೂ ವಿಷಯಾದಾರಿತ ಮತಗಟ್ಟೆಗಳು ವಿವಿಧ ರೀತಿಯಲ್ಲಿ ಮತದಾರರ ಕೈ ಬೀಸಿ ಕರೆಯಲಿವೆ. ಮದ್ದೂರು ತಾಲೂಕಿನ ಬನ್ನಹಳ್ಳಿ ಮತಗಟ್ಟೆಯಲ್ಲಿ ಕೊಕ್ಕರೆ ಬೆಳ್ಳೂರು ಅಭಯಾರಣ್ಯ ವಿಷಯಧಾರಿತ ಮತಗಟ್ಟೆಯಲ್ಲಿ ಗೋಡೆ ಬರಹಗಳ ಮೂಲಕ ಆಕರ್ಷಣೀಯವಾಗಿ ಚಿತ್ರದ ಮೂಲಕ ಮೂಡಿಸಿ ಮತದಾರರ ಮನಸೂರೆಗೊಳ್ಳುವಂತೆ ನಿರ್ಮಿಸಲಾಗಿದೆ.

ಶ್ರೀರಂಗಪಟ್ಟಣದ ಬೆಳಗೊಳ ಮತಗಟ್ಟೆಯಲ್ಲಿ ಯುವ ಮತದಾರರೇ ಕಾರ್ಯನಿರ್ವಹಿಸುವ ಮತಗಟ್ಟೆಯನ್ನು ಅನಾವರಣಗೊಳಿಸಲಾಗಿದ್ದು, ಮಂಡ್ಯ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು ಪಿಂಕ್ ಪೋಲಿಂಗ್ ಸ್ಟೇಷನ್–40, ವಿಕಲಚೇತನರ ಪೋಲಿಂಗ್ ಸ್ಟೇಷನ್–8, ಸಾಂಪ್ರದಾಯಿಕ/ ವಿಷಯಾಧಾರಿತ ಪೋಲಿಂಗ್ ಸ್ಟೇಷನ್–16, ಯುವ ನೌಕರರ ಮತಗಟ್ಟೆಗಳು–16 ಮತದಾರರನ್ನು ಆಕರ್ಷಿಸಲು ಸಜ್ಜಾಗಿವೆ.

ಇನ್ನು ಜಿಲ್ಲೆಯ ಪ್ರಮುಖ ಹಾಗೂ ಸೂಕ್ಷ್ಮ ಮತಕೇಂದ್ರಗಳಿಗೆ ಜಿಲ್ಲಾಧಿಕಾರಿ ಡಾ.ಕುಮಾರ ಸೇರಿದಂತೆ ಪ್ರಮುಖ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಇದಲ್ಲದೇ ಮಂಡ್ಯ ವಿಶ್ವವಿದ್ಯಾಲಯದಲ್ಲಿ ನಡೆದ ಮಸ್ಟರಿಂಗ್ ಕೆಲಸವನ್ನು ಪರಿಶೀಲಿಸಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಯ ಶೇಖ್ ತನ್ವೀರ್ ಆಸಿಫ್ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕುಮಾರಸ್ವಾಮಿ, ಸ್ಟಾರ್ ಚಂದ್ರು ಭವಿಷ್ಯ ನಿರ್ಧಾರ


ಕುಮಾರಸ್ವಾಮಿ


ಸ್ಟಾರ್ ಚಂದ್ರು

ಮಂಡ್ಯ: ಚುನಾವಣೆಯಲ್ಲಿ ಅಬ್ಬರದ ಪ್ರಚಾರ, ಬೆಂಕಿಯಂತಹ ಭಾಷಣಗಳು ಮುಗಿದಿದ್ದು, ಮತದಾರ ಅಭ್ಯರ್ಥಿಗಳ ಭವಿಷ್ಯ ಬರೆಯಲು ಕ್ಷಣಗಣನೆ ಆರಂಭವಾಗಿದೆ. ಈ ನಿಟ್ಟಿನಲ್ಲಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್‌ಚಂದ್ರು ಭವಿಷ್ಯ ಇಂದು ಮತಪೆಟ್ಟಿಗೆ ಸೇರಲಿದೆ.

ಇಷ್ಟು ದಿನ ಅಬ್ಬರದ ಪ್ರಚಾರದಲ್ಲಿ ತೊಡಗಿದ್ದ ಅಭ್ಯರ್ಥಿಗಳಿಗೆ ಇಂದು ಮನೆ ಮನೆ ಪ್ರಚಾರ ಮಾಡಲು ಅವಕಾಶವಿತ್ತು. ಆದರೆ ಯಾವ ಅಭ್ಯರ್ಥಿ ಸಹ ಮನೆ ಮನೆ ಪ್ರಚಾರಕ್ಕೆ ಆಸಕ್ತಿ ತೋರಲಿಲ್ಲ. ಕೇವಲ ಕೆಲ ಕಾರ್ಯಕರ್ತರು ವಿವಿಧೆಡೆ ಮನೆ ಮನೆ ಪ್ರಚಾರ ನಡೆಸಿದರೆ, ಅಭ್ಯರ್ಥಿಗಳು ಮಾತ್ರ ರೋಡಿಗಿಳಿಯಲಿಲ್ಲ.

ಕಡೆ ಕ್ಷಣದ ಕಸರತ್ತು ಎಂಬಂತೆ ಅಜ್ಞಾತ ಸ್ಥಳದಲ್ಲಿ ಕುಳಿತು ಚುನಾವಣೆ ಗೆಲ್ಲಲು ರಣತಂತ್ರಗಳನ್ನು ರೂಪಿಸುತ್ತಿದ್ದಾರೆ ಎಂಬ ಮಾಹಿತಿ ಬೆಳಕಿಗೆ ಬಂತು. ಇನ್ನು ಅಭ್ಯರ್ಥಿಗಳು ಹಾಗೂ ಆಯಾ ಕ್ಷೇತ್ರಗಳ ಪ್ರಮುಖ ಮುಖಂಡರುಗಳನ್ನು ಬಿಟ್ಟು ಉಳಿದವರು ಹಾಗೂ ಪ್ರಚಾರಕ್ಕೆ ಆಗಮಿಸಿದ್ದ ನಾಯಕರುಗಳು ನಿನ್ನೆಯೇ ಕ್ಷೇತ್ರವನ್ನು ತೊರೆದಿದ್ದರು.





ಮಂಡ್ಯ ಜಿಲ್ಲೆಯಲ್ಲಿ ಶುಕ್ರವಾರ ನಡೆಯುವ ಲೋಕಸಭಾ ಚುನಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ತೆರಳುತ್ತಿರುವ ಮತಗಟ್ಟೆ ಅಧಿಕಾರಿಗಳನ್ನು ಕರೆದೊಯ್ಯಲು ಸಿದ್ಧಗೊಂಡಿರುವ ಕೆಎಸ್‌ಆರ್‌ಟಿಸಿ ಬಸ್ಸುಗಳು. ಚುನಾವಣಾ ಸಿಬ್ಬಂದಿ ಚಿತ್ರದಲ್ಲಿ ಇದ್ದಾರೆ.

ಯಾವ್ಯಾವ ಗಣ್ಯರು ಎಲ್ಲೆಲ್ಲಿ ಮತ ಚಲಾಯಿಸಲಿದ್ದಾರೆ..?

ಮಂಡ್ಯ: ಏ.26ರಂದು ನಡೆಯಲಿರುವ ಮಂಡ್ಯ ಲೋಕಸಭಾ ಕ್ಷೇತ್ರದ ಚುನಾವಣೆಗೆ ಸಂಬಂಧಿಸಿದಂತೆ ಕ್ಷೇತ್ರದ ಹಲವು ಗಣ್ಯರು ವಿವಿಧೆಡೆ ಮತ ಚಲಾಯಿಸಲಿದ್ದಾರೆ. ಅದರ ವಿವರ ಇಲ್ಲಿದೆ.

ಜೆಡಿಎಸ್ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ–ಬಿಡದಿ ಸಮೀಪದ ಕೇತಗಾನಹಳ್ಳಿ, ರಾಮನಗರ. ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು–ಮಹಾಲಕ್ಷ್ಮಿ ಲೇಔಟ್, ಬೆಂಗಳೂರು. ಸಂಸದೆ ಸುಮಲತಾ ಅಂಬರೀಷ್– ದೊಡ್ಡರಸಿನಕೆರೆ, ಮದ್ದೂರು. ಸಚಿವ ಎನ್.ಚಲುವರಾಯಸ್ವಾಮಿ– ಬ್ರಹ್ಮದೇವರಹಳ್ಳಿ, ನಾಗಮಂಗಲ. ಆದಿಚುಂಚನಗಿರಿ ಮಠಾಧೀಶ ಶ್ರೀ ನಿರ್ಮಲಾನಂದಸ್ವಾಮೀಜಿ, ಚುಂಚನಹಳ್ಳಿ, ಆದಿಚುಂಚನಗಿರಿ. ಮಾಜಿ ಸಂಸದೆ ರಮ್ಯಾ– ವಿದ್ಯಾನಗರ, ಮಂಡ್ಯ. ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು– ಚಿನಕುರಳಿ, ಪಾಂಡವಪುರ. ಡಿ.ಸಿ.ತಮ್ಮಣ್ಣ– ದೊಡ್ಡರಸಿನಕೆರೆ, ಮದ್ದೂರು. ಸಾ.ರಾ.ಮಹೇಶ್– ಸಾಲಿಗ್ರಾಮ, ಕೆ.ಆರ್.ನಗರ. ಕೆ.ಸಿ.ನಾರಾಯಣಗೌಡ– ಕೆ.ಆರ್.ಪೇಟೆ ಟೌನ್. ಶಾಸಕರಾದ ಗಣಿಗ ರವಿಕುಮಾರ್– ಗಣಿಗ, ಮಂಡ್ಯ. ಕೆ.ಎಂ.ಉದಯ್– ಕದಲೂರು, ಮದ್ದೂರು. ದರ್ಶನ್ ಪುಟ್ಟಣ್ಣಯ್ಯ– ಕ್ಯಾತನಹಳ್ಳಿ, ಪಾಂಡವಪುರ. ರಮೇಶ್‌ಬಂಡಿಸಿದ್ದೇಗೌಡ– ಅರಕೆರೆ, ಶ್ರೀರಂಗಪಟ್ಟಣ. ಪಿ.ಎಂ.ನರೇಂದ್ರಸ್ವಾಮಿ–ಪೂರಿಗಾಲಿ, ಮಳವಳ್ಳಿ. ಹೆಚ್.ಟಿ. ಮಂಜು–ಹರಳಹಳ್ಳಿ, ಕೆ.ಆರ್.ಪೇಟೆ.

ವಿಧಾನಪರಿಷತ್ ಸದಸ್ಯರಾದ ದಿನೇಶ್‌ಗೂಳಿಗೌಡ– ಮದ್ದೂರು ಟೌನ್. ಮಧು ಜಿ.ಮಾದೇಗೌಡ– ಗುರುದೇವರಹಳ್ಳಿ, ಮದ್ದೂರು. ಮಾಜಿ ಶಾಸಕರಾದ ಎಂ.ಶ್ರೀನಿವಾಸ್– ಹನಕೆರೆ, ಮಂಡ್ಯ. ರವೀಂದ್ರ ಶ್ರೀಕಂಠಯ್ಯ–ಅರಕೆರೆ, ಶ್ರೀರಂಗಪಟ್ಟಣ. ಕೆ.ಸುರೇಶ್ ಗೌಡ–ನಾಗಮಂಗಲ ಟೌನ್. ಡಾ.ಕೆ.ಅನ್ನದಾನಿ–ಹುಸ್ಕೂರು, ಮಳವಳ್ಳಿ. ಎಲ್.ಆರ್.ಶಿವರಾಮೇಗೌಡ– ನಾಗಮಂಗಲ ಟೌನ್. ಇವರಲ್ಲದೇ ಇನ್ನಿತರೆ ಪ್ರಮುಖ ಗಣ್ಯರು ಹಲವೆಡೆ ಮತದಾನ ಮಾಡಲಿದ್ದಾರೆ.

ಮುಖಂಡರ ಮನೆಗಳಿಗೆ ಜೆಡಿಎಸ್ ಅಭ್ಯರ್ಥಿ ಭೇಟಿ

ಮಂಡ್ಯ: ಮಂಡ್ಯ ಲೋಕಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಅವರು ಮನೆ ಮನೆ ಪ್ರಚಾರದ ಹಿನ್ನೆಲೆಯಲ್ಲಿ ಗುರುವಾರ ಹಲವು ಮುಖಂಡರುಗಳ ಮನೆಗಳಿಗೆ ಭೇಟಿ ನೀಡಿ ಮಾತುಕತೆ ನಡೆಸಿದರು. ಮಂಡ್ಯ ತಾಲೂಕಿನ ಯತ್ತಗದಹಳ್ಳಿ ಗ್ರಾಮದ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ.ಸಿದ್ದರಾಮಯ್ಯ ಅವರ ಮನೆಗೆ ಭೇಟಿ ನೀಡಿ, ಅವರ ಬೆಂಬಲಿಗರು ಹಾಗೂ ಹಲವು ಮುಖಂಡರೊಂದಿಗೆ ಮಾತುಕತೆ ನಡೆಸಿದರು.

ಬಳಿಕ ಬಿಜೆಪಿ ನಗರ ಘಟಕದ ಅಧ್ಯಕ್ಷ ವಸಂತ್‌ಕುಮಾರ್ ಅವರ ಮನೆಗೆ ಭೇಟಿ ನೀಡಿದ್ದರು. ಮುಖಂಡರಾದ ಚಂದದ ಶಿವಣ್ಣ, ನಾಗೇಶ್, ಕೇಶವ್, ಪ್ರಸನ್ನ, ಚಾಮರಾಜು ಸೇರಿದಂತೆ ಹಲವು ಮಂದಿ ಜೊತೆಗೆ ಮಾತುಕತೆ ಮಾಡಿದರು.



ಮಂಡ್ಯ ನಗರದ ಕಾವೇರಿ ನಗರದಲ್ಲಿರುವ ಸಂಸದೆ ಸುಮಲತಾ ಅಂಬರೀಶ್ ಬೆಂಬಲಿಗ ಹಾಲಹಳ್ಳಿ ಅರವಿಂದ್ ಅವರ ಮನೆಗೆ ಕುಮಾರಸ್ವಾಮಿ ಭೇಟಿ ನೀಡಿ ಬೆಂಬಲ ನೀಡುವಂತೆ ಕೋರಿದರು. ಇದೇ ಸಂದರ್ಭದಲ್ಲಿ ರಾಮಚಂದ್ರ ಅಮರಾವತಿ ಚಂದ್ರಶೇಖರ್, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್ ಇದ್ದರು.

ಒಂದನೇ ಪುಟದಿಂದ

ಮೈಸೂರು–ಕೊಡಗು, ಮಂಡ್ಯ, ಚಾ.ನಗರ, ಹಾಸನ ಲೋಕಸಭಾ ಕ್ಷೇತ್ರದಲ್ಲಿ ಮತದಾನಕ್ಕೆ ಸಂಪೂರ್ಣ ಸಿದ್ಧತೆ

ಮಹಿಳೆಯರು, 184 ಇತರರು ಸೇರಿದಂತೆ 20,92,222 ಮತದಾರರು ಮತದಾನದ ಹಕ್ಕು ಚಲಾಯಿಸಲಿದ್ದಾರೆ. ಮತದಾನ ಪ್ರಕ್ರಿಯೆಗೆ 2,434 ಪಿಆರ್‌ಓ, 2,482 ಎಪಿಆರ್‌ಓ, 4,893 ಪಿಓ ಸೇರಿದಂತೆ 9,809 ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

ಮಸ್ಟರಿಂಗ್: ಶುಕ್ರವಾರ ನಡೆಯುವ ಮತದಾನಕ್ಕೆ ಇಂದು ಆಯಾ ವಿಧಾನ ಸಭಾ ಕ್ಷೇತ್ರದಲ್ಲಿ ಮಸ್ಟರಿಂಗ್ ಕಾರ್ಯ ನಡೆಸಲಾಯಿತು. ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಹಾರಾಣಿ ಕಾಲೇಜಿನಲ್ಲಿ ಚಾಮುಂಡೇಶ್ವರಿ ಕ್ಷೇತ್ರ, ಹಳೆ ಜಿಲ್ಲಾಧಿಕಾರಿ ಕಚೇರಿ ಹಿಂಭಾಗದ ಬೇಡನ್ ಪೋವಲ್ ಸ್ಕೂಲ್‌ನಲ್ಲಿ ಚಾಮರಾಜ ಕ್ಷೇತ್ರ, ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಕೃಷ್ಣರಾಜಕ್ಷೇತ್ರ, ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಾಲೇಜಿನಲ್ಲಿ ನರಸಿಂಹರಾಜ ಕ್ಷೇತ ಹಾಗೂ ಉಳಿದ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಸ್ಟರಿಂಗ್ ನಡೆಯಿತು. ಆಯಾ ವಿಧಾನಸಭಾ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿಗಳು ಮಸ್ಟರಿಂಗ್ ಕಾರ್ಯದ ನೇತೃತ್ವ ವಹಿಸಿದ್ದರು.

ಪ್ರತಿ ಮತಗಟ್ಟೆಗೆ ನಾಲ್ವರ ನಿಯೋಜನೆ: ಪ್ರತಿಯೊಂದು ಮತಗಟ್ಟೆಗೂ ಮತಗಟ್ಟೆ ಅಧಿಕಾರಿ, ಪೊಲೀಸ್ ಸಿಬ್ಬಂದಿ ಸೇರಿದಂತೆ ತಲಾ ನಾಲ್ವರನ್ನು ನಿಯೋಜಿಸಿದ್ದು, ಅವರಿಗೆ ಮಸ್ಟರಿಂಗ್ ಸೆಂಟರ್‌ನಲ್ಲಿ ಇವಿಎಂ, ವಿವಿಪ್ಯಾಟ್, ಅಳಿಸಲಾಗದ ಶಾಯಿ, ಪೆನ್ನು, ಪೆನ್ಸಿಲ್ ಸೇರಿದಂತೆ ಇತರೆ ಮತದಾನ ಪರಿಕರಗಳ ಕಿಟ್‌ಗಳನ್ನು ವಿತರಿಸಲಾಯಿತು. ಮತಗಟ್ಟೆ ಅಧಿಕಾರಿ ಸೇರಿದಂತೆ ಯಾವುದೇ ಸಿಬ್ಬಂದಿಗೆ ಅನಾರೋಗ್ಯ ಸೇರಿದಂತೆ ಇತರೆ ತೊಂದರೆಯಾದರೆ ಅವರ ಸ್ಥಾನಕ್ಕೆ ಮತ್ತೊಬ್ಬರನ್ನು ನಿಯೋಜಿಸಲು ಪರ್ಯಾಯ ಸಿಬ್ಬಂದಿಗಳನ್ನು ಸನ್ನದ್ಧಗೊಳಿಸಲಾಗಿದೆ. ಇಂದು ಬೆಳಿಗ್ಗೆ 8 ಗಂಟೆಗೆ ಆರಂಭವಾದ ಮಸ್ಟರಿಂಗ್ ಕಾರ್ಯ ಸಂಜೆ ತನಕ ನಿರಂತರವಾಗಿ ನಡೆಯಿತು. ಮತಗಟ್ಟೆ ಸಿಬ್ಬಂದಿಗಳನ್ನು ಕೆಎಸ್‌ಆರ್‌ಟಿಸಿ ಬಸ್‌ಗಳ ಮೂಲಕ ಪೊಲೀಸ್ ಬಂದೋಬಸ್ತ್‌ನೊಂದಿಗೆ ಆಯಾ ಮತಗಟ್ಟೆಗಳಿಗೆ ಕಳುಹಿಸಲಾಯಿತು.

ಸೂಕ್ಷ್ಮ ಮತಗಟ್ಟೆಗಳಲ್ಲಿ ಮೈಕ್ರೊ ಅಬ್ಸರ್ವರ್ ನೇಮಕ ಮಾಡಲಾಗಿದೆ. ಜೊತೆಗೆ ಹೆಚ್ಚಿನ ಪೊಲೀಸ್ ಸಿಬ್ಬಂದಿಯನ್ನೂ ನಿಯೋಜಿಸಲಾಗಿದೆ. ಮತದಾನಕ್ಕೆ ಯಾವುದೇ ರೀತಿಯಲ್ಲೂ ಅಡ್ಡಿಯಾಗದಂತೆ ಕಟ್ಟುನಿಟ್ಟಿನ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ.

ಸಿಸಿ ಕ್ಯಾಮರಾ ಅಳವಡಿಕೆ: ಪ್ರತಿಯೊಂದು ಮತಗಟ್ಟೆಗೂ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಜಿಲ್ಲಾಧಿಕಾರಿ ಕಚೇರಿಯಲ್ಲಿರುವ ಕಂಟ್ರೋಲ್ ರೂಂನಲ್ಲಿ ಪ್ರತಿಯೊಂದು ಮತಗಟ್ಟೆಯ ಚಲನವಲನಗಳನ್ನು ಗಮನಿಸಲಾಗುತ್ತದೆ. ಸೂಕ್ಷ್ಮ ಮತಗಟ್ಟೆಗಳಲ್ಲಿ ಶಸ್ತ್ರಸಜ್ಜಿತ ಅರೆಸೇನಾ ಪಡೆಯ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಮತಗಟ್ಟೆ ಒಳಗೆ ಮೊಬೈಲ್ ಹಾಗೂ ಕ್ಯಾಮರಾ ನಿಷೇಧಿಸಲಾಗಿದೆ. ಈ ನಿಟ್ಟಿನಲ್ಲಿ ಮತಗಟ್ಟೆಗಳಲ್ಲಿರುವ ಪೊಲೀಸ್ ಹಾಗೂ ಅರೆಸೇನಾ ಪಡೆಯ ಸಿಬ್ಬಂದಿ ಇದನ್ನು ಸೂಕ್ಷ್ಮವಾಗಿ ಗಮನಿಸುತ್ತಿರುತ್ತಾರೆ.

ಮಂಡ್ಯ: ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು), ಜೆಡಿಎಸ್ ಅಭ್ಯರ್ಥಿ, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಸೇರಿ 14 ಮಂದಿ ಕಣದಲ್ಲಿದ್ದು, 8,76,112 ಪುರುಷರು, 9,02,963 ಮಹಿಳೆಯರು, 168 ಇತರರು ಸೇರಿ ಒಟ್ಟು 17,79,243 ಮಂದಿ ಮತದಾನದ ಹಕ್ಕು ಹೊಂದಿದ್ದಾರೆ.

ಈ ಕ್ಷೇತ್ರಕ್ಕೆ ಮಂಡ್ಯ, ಮಳವಳ್ಳಿ, ಮದ್ದೂರು, ಮೇಲುಕೋಟೆ, ಶ್ರೀರಂಗಪಟ್ಟಣ, ನಾಗಮಂಗಲ, ಕೆ.ಆರ್.ಪೇಟೆ ಮತ್ತು ಕೆ.ಆರ್.ನಗರ ವಿಧಾನಸಭಾ ಕ್ಷೇತ್ರಗಳು ಒಳಪಟ್ಟಿದ್ದು, ಒಟ್ಟು 2,076 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಅವುಗಳ ಪೈಕಿ 693 ಅತಿ ಸೂಕ್ಷ್ಮ ಮತಗಟ್ಟೆಗಳೆಂದು ಗುರುತಿಸಲಾಗಿದೆ.

ಚಾಮರಾಜನಗರ: ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್, ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಸೇರಿದಂತೆ ಒಟ್ಟು 14 ಮಂದಿ ಕಣದಲ್ಲಿದ್ದಾರೆ. ಈ ಕ್ಷೇತ್ರದಲ್ಲಿ 8,78,702 ಪುರುಷರು, 8,99,501 ಮಹಿಳೆಯರು, 107 ಇತರರು ಸೇರಿ ಒಟ್ಟು 17,78,310 ಮಂದಿ ಮತದಾನದ ಹಕ್ಕು ಹೊಂದಿದ್ದಾರೆ. 2 ಸಾವಿರ ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, ಈ ಕ್ಷೇತ್ರಕ್ಕೆ ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ, ಹನೂರು, ವರುಣ, ತಿ.ನರಸೀಪುರ, ನಂಜನಗೂಡು ಮತ್ತು ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರಗಳು ಒಳಪಟ್ಟಿವೆ.

ಹಾಸನ: ಹಾಸನ ಲೋಕಸಭಾ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸಂಸದ ಪ್ರಜ್ವಲ್ ರೇವಣ್ಣ, ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ಸೇರಿದಂತೆ 15 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಈ ಕ್ಷೇತ್ರದಲ್ಲಿ 8,63,727 ಪುರುಷರು, 8,72,480 ಮಹಿಳೆಯರು, 430 ಇತರರು ಸೇರಿ ಒಟ್ಟು 17,36,600 ಮಂದಿ ಮತದಾನದ ಹಕ್ಕು ಹೊಂದಿದ್ದಾರೆ. ಈ ಕ್ಷೇತ್ರಕ್ಕೆ ಹಾಸನ, ಸಕಲೇಶಪುರ, ಅರಕಲಗೂಡು, ಹೊಳೆನರಸೀಪುರ, ಬೇಲೂರು, ಶ್ರವಣಬೆಳಗೊಳ, ಅರಸೀಕೆರೆ ಮತ್ತು ಕಡೂರು ವಿಧಾನಸಭಾ ಕ್ಷೇತ್ರಗಳು ಒಳಪಟ್ಟಿದ್ದು, ಒಟ್ಟು 2,221 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.



ಮೈಸೂರಿನ ಜೆಎಲ್‌ಬಿ ರಸ್ತೆಯ ಮಹಾರಾಣಿ ಕಾಲೇಜಿನ ಮಸ್ಟರಿಂಗ್ ಸೆಂಟರ್‌ಗೆ ಗುರುವಾರ ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಚುನಾವಣಾಧಿಕಾರಿ ಡಾ.ರಾಜೇಂದ್ರ ಗುರುವಾರ ಭೇಟಿ ನೀಡಿ ಮತಗಟ್ಟೆ ಸಿಬ್ಬಂದಿಗೆ ಸಲಹೆ, ಮಾರ್ಗದರ್ಶನ ನೀಡಿದರು.

ಬೆಳಗ್ಗೆ 5.30 ಗಂಟೆಗೆ ಅಣಕು ಮತದಾನ

ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಮೈಸೂರು ನಗರದ ನಾಲ್ಕು ಮಸ್ಟರಿಂಗ್ ಸೆಂಟರ್‌ಗಳಿಗೆ ಇಂದು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಮತಗಟ್ಟೆ ಸಿಬ್ಬಂದಿಗಳನ್ನುದ್ದೇಶಿಸಿ ಮಾತನಾಡಿದ ಡಾ.ರಾಜೇಂದ್ರ, ಮೊದಲ ಬಾರಿಗೆ ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡವರು ಯಾವುದೇ ಕಾರಣಕ್ಕೂ ಗಾಬರಿಯಾಗಬೇಡಿ. ಏನೇ ಅನುಮಾನಗಳಿದ್ದರೂ ಹಿರಿಯ ಅಧಿಕಾರಿಗಳಿಂದ ಬಗಹರಿಸಿಕೊಳ್ಳಿ. ಸಣ್ಣ ಲೋಪವೂ ಆಗದಂತೆ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಿ ಎಂದು ಸಲಹೆ ನೀಡಿದರು. ಶುಕ್ರವಾರ ಬೆಳಿಗ್ಗೆ 5.30 ಗಂಟೆಗೆ ನೀವು ಮಾಡಬೇಕಾದ ಮೊದಲ ಕರ್ತವ್ಯವೆಂದರೆ ಅಣಕು ಮತದಾನ. ಇದನ್ನು ಯಾರೂ ಕೂಡ ತಪ್ಪಿಸಬಾರದು. ಅಣಕು ಮತದಾನದಲ್ಲಿ ಇವಿಎಂ ಮೂಲಕ ಮತ ಚಲಾಯಿಸಿ, ವಿವಿಪ್ಯಾಟ್ ನಲ್ಲಿ ಅದನ್ನು ಖಚಿತಪಡಿಸಿಕೊಳ್ಳಿ. ಈ ಸಂಬಂಧ ಚುನಾವಣಾ ಆಯೋಗ ನೀಡಿರುವ ಎಲೆಕ್ಟ್ ಆ್ಯಪ್‌ನಲ್ಲಿ ನೀಡಿರುವ 26 ಪ್ರಶ್ನೆಗಳಿಗೆ ಉತ್ತರ ನೀಡಿ. ಈ ಪ್ರಕ್ರಿಯೆ ಪೂರ್ಣಗೊಳಿಸಿ ಯಾವುದೇ ಲೋಪವಿಲ್ಲ ಎಂಬುದನ್ನು ಮತ್ತೊಮ್ಮೆ ಖಚಿತಪಡಿಸಿಕೊಂಡ ನಂತರ ಬೆಳಿಗ್ಗೆ 7 ಗಂಟೆಗೆ ಮತದಾನ ಪ್ರಕ್ರಿಯೆ ಆರಂಭಿಸಿ ಎಂದು ಮಾರ್ಗದರ್ಶನ ನೀಡಿದರು. ಬೇಸಿಗೆ ಇರುವ ಕಾರಣ ತೊಂದರೆ ಆಗದಂತೆ ಕೂರಲು ಶಾಮಿಯಾನ, ಕುಡಿಯುವ ನೀರು ವ್ಯವಸ್ಥೆ ಮಾಡಲಾಗಿದೆ. ಆಯಾ ಮತಗಟ್ಟೆಗಳಿಗೆ ಊಟ ತಿಂಡಿ ತಲುಪಿಸಲಾಗುವುದು. ಮತಗಟ್ಟೆ ಸಿಬ್ಬಂದಿಗೆ ಏನಾದರೂ ಅನಾರೋಗ್ಯ ಉಂಟಾದರೆ ವೈದ್ಯಕೀಯ ಸಿಬ್ಬಂದಿ ಸನ್ನದ್ಧಗೊಳಿಸಲಾಗಿದೆ. ಆಸ್ಪತ್ರೆಗೆ ತಕ್ಷಣ ಕರೆದೊಯ್ಯಲು ಆಂಬುಲೆನ್ಸ್ ಸೌಲಭ್ಯ ಕಲ್ಪಿಸಲಾಗಿದೆ. ಪ್ರತಿಯೊಂದು ಮತಗಟ್ಟೆಯ ಸನಿಹದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಔಷಧ ಹಾಗೂ ಚಿಕಿತ್ಸೆ ನೀಡುವ ವ್ಯವಸ್ಥೆ ಮಾಡಲಾಗಿದೆ ಎಂದು ಡಾ.ರಾಜೇಂದ್ರ ತಿಳಿಸಿದರು. ದೇಶ ಕಾಯುವ ಯೋಧರಷ್ಟೆ ಮಹತ್ವದ ಜವಾಬ್ದಾರಿ ನಿಮ್ಮದಾಗಿದೆ. ಯಾರೂ ಬೇಜವಾಬ್ದಾರಿ ತೋರಬೇಡಿ. ಈಗಾಗಲೇ ತರಬೇತಿ ಸಮಯದಲ್ಲಿ ನೀಡಿರುವ ಸಲಹೆಗಳನ್ನು ಪಾಲಿಸಿ ಎಂದು ಹೇಳಿದರು. ಪ್ರತಿ ಎರಡು ಗಂಟೆಗೊಮ್ಮೆ ಶೇಕಡವಾರು ಮತದಾನ, ಮಹಿಳಾ ಮತದಾರರ ಸಂಖ್ಯೆ, ಪುರುಷ ಮತದಾರರ ಸಂಖ್ಯೆ ಸೇರಿದಂತೆ ಹಲವು ಮಾಹಿತಿಗಳನ್ನು ನೀಡಬೇಕು ಎಂದು ಡಾ.ರಾಜೇಂದ್ರ ತಾಕೀತು ಮಾಡಿದರು.

ಗೊಂದಲ ನಿವಾರಣೆಗೆ ಮತದಾರರ ಸಹಾಯಕ ಕೇಂದ್ರ

ಮೂರು ಬೂತ್‌ಗಳಿರುವ ಕ್ಲಸ್ಟರ್ ಮತಗಟ್ಟೆಯ ಸ್ಥಳಗಳಲ್ಲಿ ಮತದಾರರ ಸಹಾಯಕ ಕೇಂದ್ರ ತೆರೆಯಲಾಗಿದೆ. ನಗರ ಹಾಗೂ ಗ್ರಾಮೀಣ ಪ್ರದೇಶದ ಕೆಲವು ಮತಗಟ್ಟೆಗಳಲ್ಲಿ 3 ಬೂತ್‌ಗಳಿರುತ್ತದೆ. ಮತದಾನ ಮಾಡಲು ಬರುವ ವ್ಯಕ್ತಿ ಯಾವ ಮತಗಟ್ಟೆಯಲ್ಲಿ ತಾನು ಮತದಾನ ಮಾಡಬೇಕೆಂಬ ಗೊಂದಲವಾಗುತ್ತದೆ. ಈ ಹಿನ್ನೆಲೆ ಮತದಾರರಿಗೆ ಮಾರ್ಗದರ್ಶನ ಹಾಗೂ ಸಲಹೆ ನೀಡಲು ಮತದಾರರ ಸಹಾಯಕ ಕೇಂದ್ರವನ್ನು ಚುನಾವಣಾ ಆಯೋಗ ತೆರೆದಿದೆ.


ಮತದಾರರ ಸಹಾಯಕ ಕೇಂದ್ರದಲ್ಲಿ ಸ್ವಯಂ ಸೇವಕರನ್ನು ನಿಯೋಜಿಸಲಾಗಿದ್ದು, ಗೊಂದಲಕ್ಕೀಡಾಗುವ ಮತದಾರರಿಗೆ ಇವರು ಯಾವ ಬೂತ್‌ನಲ್ಲಿ ಮತದಾನ ಮಾಡಬೇಕೆಂದು ಸಲಹೆ ಹಾಗೂ ಮಾರ್ಗದರ್ಶನ ಮಾಡಲಿದ್ದಾರೆ. ಒಟ್ಟಾರೆ ಮತದಾನ ಮಾಡಲು ಬರುವ ವ್ಯಕ್ತಿ ಗೊಂದಲ ಸೇರಿದಂತೆ ಬೇರೆ ಕಾರಣದಿಂದ ಮತದಾನ ಮಾಡದೆ ವಾಪಸು ಹೋಗದಿರಲು ಇಂತಹ ವ್ಯವಸ್ಥೆಗಳನ್ನು ಮಾಡಲಾಗಿದೆ. ಇದಲ್ಲದೆ ಮಹಿಳಾ ಮತದಾರರು ಹೆಚ್ಚು ಇರುವ ಸ್ಥಳಗಳಲ್ಲಿ ಸಖಿ ಮತಗಟ್ಟೆ, ವಿಷಯಾಧಾರಿತ ಮತಗಟ್ಟೆ, ಯುವ ಜನರ ಮತಗಟ್ಟೆ, ವಿಶೇಷಚೇತನರ ಮತಗಟ್ಟೆಗಳನ್ನು ಕೂಡ ತೆರೆಯಲಾಗಿದೆ.



ಮತದಾನಕ್ಕೆ ನಿಯೋಜನೆಗೊಂಡ ಸಿಬ್ಬಂದಿ ಇವಿಎಂಗಳನ್ನು ಪರೀಕ್ಷಿಸಿಕೊಳ್ಳುತ್ತಿರುವ ದೃಶ್ಯ.



ಮೈಸೂರಿನ ಜೆಎಲ್‌ಬಿ ರಸ್ತೆಯ ಮಹಾರಾಣಿ ಕಾಲೇಜಿನಿಂದ ಇವಿಎಂ ಸೇರಿದಂತೆ ಮತದಾನ ಪರಿಕರಗಳನ್ನು ಕೊಂಡೊಯ್ಯುತ್ತಿರುವ ಚುನಾವಣಾ ಸಿಬ್ಬಂದಿ



ಕಾಂಗ್ರೆಸ್ ಪ್ರಣಾಳಿಕೆ ಬಗ್ಗೆ ಚರ್ಚೆಗೆ ಬರುವಂತೆ ಪ್ರಧಾನಿಗೆ ಮಲ್ಲಿಕಾರ್ಜುನ ಖರ್ಗೆ ಪತ್ರ!

ನವದೆಹಲಿ,ಏ.25–ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಲು ಸಮಯ ಕೇಳಿದ್ದಾರೆ.

ಸುಮಾರು ಎರಡು ಪುಟಗಳ ಪತ್ರ ಬರೆದಿರುವ ಖರ್ಗೆ, ಕಾಂಗ್ರೆಸ್ ಪ್ರಣಾಳಿಕೆ ಬಗ್ಗೆ ಪ್ರಧಾನಿ ಮೋದಿ ನಿರಂತರ ವಾಗ್ದಾಳಿ ನಡೆಸುತ್ತಿದ್ದು, ಕಾಂಗ್ರೆಸ್ ಗ್ಯಾರಂಟಿಗಳನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ.

ಕಾಂಗ್ರೆಸ್ ಪ್ರಣಾಳಿಕೆ ಬಗ್ಗೆ ಅವರಿಗೆ ತಪ್ಪು ಮಾಹಿತಿಯನ್ನು ನೀಡಿದ್ದಾರೆ. ಕಾಂಗ್ರೆಸ್ ಗ್ಯಾರಂಟಿ ಎಲ್ಲಾ ವರ್ಗದ ಜನರಿಗೆ ನ್ಯಾಯ ಒದಗಿಸುವುದಾಗಿದೆ. ಹೀಗಾಗಿ ನಿಮ್ಮ ಭೇಟಿಗೆ ಅವಕಾಶ ಸಿಕ್ಕರೆ, ಕಾಂಗ್ರೆಸ್ ಪ್ರಣಾಳಿಕೆ ಬಗ್ಗೆ ತಿಳಿಸಿ ಹೇಳುತ್ತೇನೆ ಎಂದಿದ್ದಾರೆ.

ಯುವಕರು, ಮಹಿಳೆಯರು, ರೈತರು, ಕಾರ್ಮಿಕರು ಸೇರಿದಂತೆ ಜಾತಿ ಮತ್ತು ಸಮುದಾಯಗಳಲ್ಲಿ ಮೂಲೆ ಗುಂಪಾದವರಿಗೆ ನ್ಯಾಯ ಒದಗಿಸುವ ಗುರಿಯನ್ನು ಕಾಂಗ್ರೆಸ್ ಪ್ರಣಾಳಿಕೆ ಹೊಂದಿದೆ ಎಂದು ಹೇಳಿದ್ದಾರೆ.



ಕಾಂಗ್ರೆಸ್‌ನ 'ನ್ಯಾಯ ಪತ್ರ' ಯುವಕರು, ಮಹಿಳೆಯರು, ರೈತರು, ಕಾರ್ಮಿಕರು ಮತ್ತು ಎಲ್ಲಾ ಜಾತಿಗಳು ಮತ್ತು ಸಮುದಾಯಗಳ ಅಂಚಿನಲ್ಲಿರುವ ಜನರಿಗೆ ನ್ಯಾಯ ಒದಗಿಸುವ ಗುರಿಯನ್ನು ಹೊಂದಿದೆ. ಕೋಮು ವಿಭಜನೆಯನ್ನು ಸೃಷ್ಟಿಸುವುದು ನಿಮಗೆ ಅಭ್ಯಾಸವಾಗಿದೆ. ನೀವು ಈ ರೀತಿ ಮಾತನಾಡುವ ಮೂಲಕ ಕುರ್ಚಿಯ ಘನತೆಯನ್ನು ಕಡಿಮೆ ಮಾಡುತ್ತಿದ್ದೀರಿ ಎಂದು ಅವರು ಹೇಳಿದರು. ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದರೆ ಜನಗಣತಿ ನಡೆಸಿ ಸಂಪತ್ತನ್ನು ಮುಸ್ಲಿಮರಿಗೆ ಹಂಚುತ್ತಾರೆ. ಹಿಂದೂ ತಾಯಂದಿರು ಮತ್ತು ಸಹೋದರಿಯರ ಮಂಗಳ ಸೂತ್ರವನ್ನು ಸಹ ಬಿಡುವುದಿಲ್ಲ ಎಂಬ ಮೋದಿಯವರ ಹೇಳಿಕೆಯಿಂದ ಖರ್ಗೆ ಕೆರಳಿದ್ದಾರೆ.

ದೇಶದಲ್ಲಿ ಬಡವರು ಮತ್ತು ಹಿಂದುಳಿದ ಮಹಿಳೆಯರು ಎದುರಿಸುತ್ತಿರುವ ದೌರ್ಜನ್ಯಗಳಿಂದ ನೀವು ಮತ್ತು ನಿಮ್ಮ ಸರಕಾರ ಪದೇ ಪದೆ ವಿಮುಖರಾಗಿದ್ದೀರಿ. ಇಂದು ನೀವು ಅವರ ಮಂಗಳಸೂತ್ರದ ಬಗ್ಗೆ ಮಾತನಾಡುತ್ತೀರಿ. ನಿಮ್ಮ ಸರಕಾರ ಇದಕ್ಕೆ ಹೊಣೆಯಲ್ಲವೇ. ಮಣಿಪುರದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳು, ದಲಿತ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯಗಳು, ಅತ್ಯಾಚಾರಿಗಳಿಗೆ ಮಾಲೆ ಹಾಕುವುದು ನಿಮ್ಮ ಸರ್ಕಾರದ ಅಡಿಯಲ್ಲಿ ನಡೆದಿದೆ. ನೀವು ಅವರ ಹೆಂಡತಿಯರನ್ನು ಮತ್ತು ಮಕ್ಕಳನ್ನು ಹೇಗೆ ರಕ್ಷಿಸುತ್ತಿರುವಿರಿ ಎಂದು ಮಲ್ಲಿಕಾರ್ಜುನ ಖರ್ಗೆ ಪ್ರಶ್ನಿಸಿದ್ದಾರೆ.

ಎಸ್‌ಸಿ, ಎಸ್‌ಟಿ, ಒಬಿಸಿ ಸಮುದಾಯಗಳ ಹಕ್ಕು ಕಸಿಯಲು ಕಾಂಗ್ರೆಸ್ ಯತ್ನ

ಆಗ್ರಾ (ಉತ್ತರ ಪ್ರದೇಶ), ಏ.25– ಕಾಂಗ್ರೆಸ್ ಪಕ್ಷವು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರ ಹಿಂದುಳಿದ ವರ್ಗಗಳ ಹಕ್ಕುಗಳನ್ನು ಕಿತ್ತುಕೊಳ್ಳಲು ರಹಸ್ಯವಾಗಿ ಷಡ್ಯಂತ್ರ ರೂಪಿಸುತ್ತಿದೆ ಎಂದು ಪ್ರಧಾನಿ ಮೋದಿ ಆರೋಪಿಸಿದ್ದಾರೆ.



ಉತ್ತರ ಪ್ರದೇಶದ ಆಗ್ರಾ ನಗರದಲ್ಲಿ ಚುನಾವಣಾ ಸಮಾವೇಶ ಉದ್ದೇಶಿಸಿ ಮಾತನಾಡಿದ ಅವರು, ಕರ್ನಾಟಕ ಕಾಂಗ್ರೆಸ್ ಸರ್ಕಾರವು ಈಗಾಗಲೇ ಎಸ್‌ಸಿ, ಎಸ್‌ಟಿ ಹಾಗೂ ಒಬಿಸಿ ಸಮುದಾಯದ ಹಕ್ಕುಗಳನ್ನು ರಹಸ್ಯವಾಗಿ ಕಸಿದಿದೆ. ಇದೇ ತಂತ್ರವನ್ನು ದೇಶಾದ್ಯಂತ ಅಧಿಕಾರ ಸಿಕ್ಕ ಕಡೆಯಲ್ಲೆಲ್ಲಾ ಕಾಂಗ್ರೆಸ್ ಪಕ್ಷ ಅನುಸರಿಸಲಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ಕರ್ನಾಟಕ ಕಾಂಗ್ರೆಸ್ ಸರ್ಕಾರವು ಅಲ್ಲಿ ಇರುವ ಮುಸ್ಲಿಂ ಸಮುದಾಯದ ಎಲ್ಲ ಜಾತಿಗಳ ಜನರನ್ನು ರಾತ್ರೋರಾತ್ರಿ ಒಬಿಸಿ ಪ್ರವರ್ಗಕ್ಕೆ ಸೇರ್ಪಡೆ ಮಾಡಿದೆ. ಈ ಕುರಿತಾದ ದಾಖಲೆ ಸಿದ್ದಪಡಿಸಿದೆ. ಹೀಗಾಗಿ, ಒಬಿಸಿ ಸಮುದಾಯಕ್ಕೆ ಮೀಸಲಾಗಿದ್ದ ಶೇ. 27 ರಷ್ಟು ಮೀಸಲಾತಿ ಲೂಟಿಯಾಗಿದ್ದು, ಇದೀಗ ಮುಸ್ಲಿಮರಿಗೂ ಕೊಡಬೇಕಿದೆ ಎಂದು ಪ್ರಧಾನಿ ಮೋದಿ ಹೇಳಿದರು.


ಕರ್ನಾಟಕದಲ್ಲಿ ಒಬಿಸಿ ಸಮುದಾಯದ ಹಕ್ಕುಗಳನ್ನು ಕಸಿದುಕೊಂಡ ರೀತಿಯಲ್ಲೇ ಉತ್ತರ ಪ್ರದೇಶದಲ್ಲೂ ಇದೇ ಆಟ ಆಡುತ್ತಾರೆ ಎಂದು ಎಚ್ಚರಿಕೆ ನೀಡಿದ ಪ್ರಧಾನಿ ಮೋದಿ, ರಾಷ್ಟ್ರ ಮಟ್ಟದಲ್ಲೂ ಅವಕಾಶ ಸಿಕ್ಕರೆ ಕಾಂಗ್ರೆಸ್ ಪಕ್ಷವು ಎಸ್‌ಸಿ, ಎಸ್‌ಟಿ ಹಾಗೂ ಒಬಿಸಿ ಸಮುದಾಯದ ಹಕ್ಕುಗಳನ್ನು ರಹಸ್ಯವಾಗಿ ಕಸಿದುಕೊಳ್ಳಲು ಹಿಂಬಾಗಿಲ ಪ್ರಯತ್ನ ನಡೆಸಲಿದೆ ಎಂದು ಎಚ್ಚರಿಕೆ ನೀಡಿದರು. ಇನ್ನು ಉತ್ತರ ಪ್ರದೇಶದ ಸಮಾಜವಾದಿ ಪಕ್ಷವೂ ಕಾಂಗ್ರೆಸ್‌ಗೆ ಈ ವಿಚಾರದಲ್ಲಿ ಸಂಪೂರ್ಣ ಬೆಂಬಲ ನೀಡಲಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಕಾಂಗ್ರೆಸ್ ಧರ್ಮಾಧಾರಿತ ಮೀಸಲಾತಿ ನೀಡಲು ಬಯಸುತ್ತಿದೆ. ಆದರೆ, ನ್ಯಾಯಾಲಯಗಳು ಹಲವು ಬಾರಿ ನಿರ್ಬಂಧ ವಿಧಿಸಿದರೂ ಕಾಂಗ್ರೆಸ್ ಪ್ರಯತ್ನಿಸುತ್ತಲೇ ಇದೆ ಎಂದು ಪ್ರಧಾನಿ ಮೋದಿ ಆರೋಪಿಸಿದ್ದಾರೆ. ಕರ್ನಾಟಕ ರಾಜ್ಯವಿರಲಿ, ಆಂಧ್ರ ಪ್ರದೇಶವೇ ಇರಲಿ, ಕಾಂಗ್ರೆಸ್ ಪಕ್ಷ ಎಲ್ಲೆಡೆ ಧರ್ಮಾಧಾರಿತ ಮೀಸಲಾತಿಗೆ ತನ್ನ ಪ್ರಣಾಳಿಕೆಗಳಲ್ಲಿ ಆದ್ಯತೆ ನೀಡುತ್ತಿದೆ. ಆದರೆ, ಈ ದೇಶದ ಸಂವಿಧಾನ ಹಾಗೂ ನ್ಯಾಯಾಲಯಗಳು ಕಾಂಗ್ರೆಸ್ ಪಕ್ಷ ಈ ರೀತಿ ಮಾಡದಂತೆ ಪದೇ ಪದೆ ತಡೆಯುತ್ತಿವೆ. ಇಷ್ಟಾದರೂ ಕೂಡಾ ಕಾಂಗ್ರೆಸ್ ಪಕ್ಷ ಹೊಸ ಮಾರ್ಗ ಹುಡುಕಿದೆ. ಒಬಿಸಿ ಸಮುದಾಯಕ್ಕೆ ಸಿಗುತ್ತಿರುವ ಶೇ.27ರಷ್ಟು ಮೀಸಲಾತಿಯನ್ನು ಅವರಿಂದ ಕಿತ್ತುಕೊಂಡು ಧರ್ಮಾಧಾರಿತ ಮೀಸಲಾತಿ ನೀಡಲು ಕಾಂಗ್ರೆಸ್ ಮುಂದಾಗಿದೆ ಎಂದು ಪ್ರಧಾನಿ ಮೋದಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಲೋಕಸಭಾ ಚುನಾವಣೆ ಪ್ರಯುಕ್ತ ಶೂ ವರ್ಲ್ಡ್‌ನಲ್ಲಿ ಭಾರೀ ಕೊಡುಗೆ

ವೋಟ್ ಮಾಡಿ ರೂ. 500 ರಿಯಾಯಿತಿ ಪಡೆಯಿರಿ

ಮೈಸೂರು, ಏ. 25– ಮೈಸೂರಿನ ಶೂ ವರ್ಲ್ಡ್ ಸಂಸ್ಥೆಯು ಸಾರ್ವಜನಿಕರಲ್ಲಿ ಮತದಾನ ಜಾಗೃತಿ ಮೂಡಿಸುವ ಸಲುವಾಗಿ ಏಪ್ರಿಲ್ 26ರಿಂದ 28ರವರೆಗೆ ಮತದಾನ ಮಾಡಿದ ಗ್ರಾಹಕರಿಗೆ ಭಾರಿ ಕೊಡುಗೆಯನ್ನು ನೀಡುತ್ತಿದೆ. ಶೂ ವರ್ಲ್ಡ್‌ನಲ್ಲಿ ಸ್ತ್ರೀ ಮತ್ತು ಪುರುಷರ ಗುಣಮಟ್ಟದ ಉತ್ತಮ ದರ್ಜೆಯ ಚಪ್ಪಲಿ, ಶೂ ಮತ್ತು ಇನ್‌ಹೌಸ್ ಬ್ರಾಂಡ್‌ನ ಪಾದರಕ್ಷೆಗಳ ರೂ. 1500/–ಗಳ ಮೇಲ್ಪಟ್ಟ ಖರೀದಿಯ ಮೇಲೆ ಮತದಾನ ಮಾಡಿದವರು ಮತದಾನ ಮಾಡಿದ ಗುರುತನ್ನು ತೋರಿಸಿ ರೂ. 500 ಕ್ಯಾಷ್‌ಬ್ಯಾಕ್ ರಿಯಾಯಿತಿಯನ್ನು ಪಡೆಯಬಹುದು. ಈ ಬಾರಿ 2024ರ ಲೋಕಸಭಾ ಚುನಾವಣೆ ಪ್ರಯುಕ್ತ ಸಂಸ್ಥೆಯು ಸಾರ್ವಜನಿಕರಲ್ಲಿ 'ನಮ್ಮ ಮತ ನಮ್ಮ ಹಕ್ಕು' ಮತದಾನ ಜಾಗೃತಿ ಮೂಡಿಸುವ ಸಲುವಾಗಿ ಒಂದು ಉತ್ತಮ ಹೆಜ್ಜೆಯನ್ನಿರಿಸಿದ್ದು 'ವೋಟ್ ಮಾಡಿ' ಅಭಿಯಾನವನ್ನು ನಡೆಸುತ್ತಿದೆ.



ಅಲಯನ್ಸ್ ಕ್ಲಬ್ ಇಂಟರ್ ನ್ಯಾಷನಲ್ ವತಿಯಿಂದ ಮತದಾನ ಜಾಗೃತಿ



ಮೈಸೂರು, ಏ.25– ಮೈಸೂರಿನ ವಿಜಯನಗರದ ಒಂದನೇ ಹಂತದಲ್ಲಿರುವ ವಿಶ್ವಕವಿ ಕುವೆಂಪು ಪ್ರಥಮ ದರ್ಜೆ ಕಾಲೇಜು ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಇಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಮತದಾನದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ 'ಮತದಾನ ಜಾಗೃತಿ' ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಮಾತನಾಡಿದ ಡಾ.ನಾಗರಾಜ್ ವಿ.ಭೈರಿ, ಮತದಾನ ನಮ್ಮೆಲ್ಲರ ಹಕ್ಕು ಎಲ್ಲರೂ ಮತದಾನ ಮಾಡುವುದರ ಮೂಲಕ ದೇಶದ ಅಭಿವೃದ್ಧಿಗೆ ಮತದಾನ ಅತೀ ಅವಶ್ಯಕ ಎಂದು ಕಾಲೇಜು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ದೇಶದಲ್ಲಿ ಯುವಶಕ್ತಿಯ ಮತದಾರರೇ ಶೇಕಡ 65ರಷ್ಟು ಇದ್ದು ಎಲ್ಲರೂ ಮತದಾನ ಮಾಡುವುದರ ಮೂಲಕ ತಮ್ಮ ಮತದಾನದ ಹಕ್ಕನ್ನು ಚಲಾಯಿಸಿ ನಂತರ ಹಿರಿಯರನ್ನು ಅವರ ಮಾರ್ಗದರ್ಶನದೊಂದಿಗೆ ಮತಗಟ್ಟೆಗೆ ಕರೆದುಕೊಂಡು ಹೋಗಿ ಮತದಾನ ಮಾಡಿಸುವ ಮೂಲಕ ಮತದಾನದಲ್ಲಿ ಭಾಗಿಯಾಗಬೇಕೆಂದು ಈ ಮೂಲಕ ಕರೆ ನೀಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ವಿಶ್ರಾಂತ ಕುಲಪತಿಗಳು ಹಾಗೂ ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಅಧ್ಯಕ್ಷ ಡಾ.ಜೆ.ಶಶಿಧರ್‌ಪ್ರಸಾದ್, ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಕಾರ್ಯದರ್ಶಿ ಶಿವಸುಂದರ್ ಸತ್ಯೇಂದ್ರ, ವಿಶ್ವಕವಿ ಕುವೆಂಪು ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಮಾನಸ, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್‌ನ ಪ್ರಾಂಶುಪಾಲರಾದ ವೆಂಕಟೇಶ್, ಅಲಯನ್ಸ್ ಕ್ಲಬ್ ಇಂಟರ್ ನ್ಯಾಷನಲ್ ಜಿಲ್ಲಾ ರಾಜ್ಯಪಾಲರಾದ ಬಾಲಕೃಷ್ಣರಾಜು, ಒಂದನೇ ರಾಜ್ಯಪಾಲರಾದ ವೆಂಕಟೇಶ್, ಎರಡನೇ ರಾಜ್ಯಪಾಲರಾದ ಮಹಾಬಲ ಬೈರಿ ಮೂರನೇ ರಾಜ್ಯಪಾಲರಾದ ಎಂ.ಎಸ್.ಸಂತೋಷ್.ಕುಮಾರ್, ಜಿಲ್ಲಾ ಕಾರ್ಯದರ್ಶಿ ಎನ್.ಗಂಗಾಧರಪ್ಪ, ಜಿಲ್ಲಾ ಕೋಶಾಧ್ಯಕ್ಷ ಕೃಷ್ಣಜಿ ರಾವ್, ಜಿಲ್ಲಾ ಪಿಆರ್‌ಓ ಎನ್.ಬೆಟ್ಟೇಗೌಡ ಕಾರ್ಯಕ್ರಮದಲ್ಲಿ ಮತ್ತಿತರರು ಭಾಗವಹಿಸಲಿದ್ದಾರೆ.

ಏ.30ರಂದು ಮೃಗಾಲಯದ ವೀಕ್ಷಣೆಗೆ ಅವಕಾಶ

ಮೈಸೂರು: ಲೋಕಸಭಾ ಸಾರ್ವತ್ರಿಕ ಚುನಾವಣೆ ಸಂಬಂಧ ಏ.26ರಂದು ಸಾರ್ವತ್ರಿಕ ರಜೆ ಘೋಷಣೆಯ ಹಿನ್ನೆಲೆಯಲ್ಲಿ ಶ್ರೀ ಚಾಮರಾಜೇಂದ್ರ ಮೃಗಾಲಯ ಹಾಗೂ ಕಾರಂಜಿಕೆರೆ ಪ್ರಕೃತಿ ಉದ್ಯಾನವನಕ್ಕೆ ಸಾರ್ವಜನಿಕ ವೀಕ್ಷಣೆಗೆ ಅವಕಾಶವಿರುವುದಿಲ್ಲ. ಏ.30ರಂದು ಬೇಸಿಗೆ ರಜಾ ಪ್ರಯುಕ್ತ ಶಾಲಾ ಕಾಲೇಜುಗಳಿಗೆ ರಜೆಯಿರುವುದರಿಂದ ಜನಸಾಮಾನ್ಯರು ಹಾಗೂ ಸ್ಥಳೀಯರಿಗೆ ಮೃಗಾಲಯವನ್ನು ವೀಕ್ಷಿಸಲು ಅನುವಾಗುವಂತೆ, ಶ್ರೀ ಚಾಮರಾಜೇಂದ್ರ ಮೃಗಾಲಯ ಹಾಗೂ ಕಾರಂಜಿಕೆರೆ ಪ್ರಕೃತಿ ಉದ್ಯಾನವನವನ್ನು ಸಾರ್ವಜನಿಕರ ವೀಕ್ಷಣೆಗೆ ತೆರೆದಿರಲಾಗುವುದು ಎಂದು ಶ್ರೀ ಚಾಮರಾಜೇಂದ್ರ ಮೃಗಾಲಯದ ಕಾರ್ಯ ನಿರ್ವಾಹಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗುಲಾಬಿ ನೀಡಿ ಮತದಾನ ಜಾಗೃತಿ

ಮತ ಮಾರಾಟ ಅಪಾಯ: ಸಿ.ಎಸ್.ಚಂದ್ರಶೇಖರ್



ಮೈಸೂರು, ಏ. 25–ಮೈಸೂರು ಸಿಟಿ ಬಸ್ ಸ್ಟ್ಯಾಂಡ್ ಆವರಣದಲ್ಲಿ ಪ್ರಯಾಣಿಕರಿಗೆ ಗುಲಾಬಿ ಹೂ ನೀಡಿ, ಶುಕ್ರವಾರ ನಡೆಯುತ್ತಿರುವ ಲೋಕಸಭಾ ಚುನಾವಣೆಯಲ್ಲಿ ಕಡ್ಡಾಯವಾಗಿ ಮತದಾನ ಮಾಡಬೇಕೆಂದು ಮನವಿ ಮಾಡಲಾಯಿತು.

ಬಳಿಕ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ಸಿ.ಎಸ್.ಚಂದ್ರಶೇಖರ್ ಮಾತನಾಡಿ, ಆಮಿಷಕ್ಕೆ ಮತ ಮಾರಿಕೊಳ್ಳುವುದರಿಂದ ಪ್ರಜಾಪ್ರಭುತ್ವ ಅಪಾಯಕ್ಕೆ ಸಿಲುಕುತ್ತದೆ. ಹಾಗಾಗಿ ಮತದಾರರು ಜಾಗೃತರಾಗುವ ಮೂಲಕ ಅರ್ಹ ಅಭ್ಯರ್ಥಿಗೆ ಮತ ನೀಡಬೇಕು ಎಂದು ತಿಳಿಸಿದರು.

18 ವರ್ಷ ತುಂಬಿದ ಪ್ರತಿಯೊಬ್ಬರೂ ಮತ ಚಲಾಯಿಸಬೇಕು. ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಮೂಲಕ ಪ್ರಜಾಪ್ರಭುತ್ವದ ಹಬ್ಬದಲ್ಲಿ ಭಾಗಿಯಾಗಬೇಕು. ಪ್ರಜಾಪ್ರಭುತ್ವವನ್ನು ರಕ್ಷಿಸಲು ಮತದಾನದಿಂದ ಮಾತ್ರ ಸಾಧ್ಯ. ಪಾರದರ್ಶಕತೆ ಮತ್ತು ಮುಕ್ತತೆಯಿಂದ ಮತದಾನದಲ್ಲಿ ಭಾಗಿಯಾಗಬೇಕು ಎಂದರು.

ನಂತರ ಮಾತನಾಡಿದ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಸಂಘಟನಾ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್ ಇತ್ತೀಚಿನ ದಿನಗಳಲ್ಲಿ ನಗರ ಪ್ರದೇಶದಲ್ಲಿ ಮತದಾನದ ಪ್ರಮಾಣ ಕಡಿಮೆಯಾಗುತ್ತಿದೆ. ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಜಾಗೃತಿ ಜಾಥಾ ನಡೆಸಲಾಗಿದೆ ಎಂದರು. ಎಸ್.ಎನ್.ರಾಜೇಶ್, ಚಿನ್ನ ಬೆಳ್ಳಿ ಅಭಿವೃದ್ಧಿ ಸಂಘದ ಜಿಲ್ಲಾ ಅಧ್ಯಕ್ಷ ಸುರೇಶ್ ಗೋಲ್ಡ್, ಚಂದನ್, ಸುರೇಶ್, ಶ್ರೀಕಾಂತ್ ಕಶ್ಯಪ್, ಅನಿಲ್ ಕುಮಾರ್, ಭೈರತಿ ಲಿಂಗರಾಜು ಇದ್ದರು.



ಮೈಸೂರಿನ ರಾಮಕೃಷ್ಣನಗರದ 58ನೇ ವಾರ್ಡಿನಲ್ಲಿ ಕಾಂಗ್ರೆಸ್ ಮುಖಂಡ ಕೃಷ್ಣಕುಮಾರ್ ಸಾಗರ್ ಮೈಸೂರು–ಕೊಡಗು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಪರ ಮನೆ ಮನೆಗೆ ತೆರಳಿ ಮತಯಾಚಿಸಿದರು. ಈ ವೇಳೆ ಮುಖಂಡರಾದ ರಾಜೇಂದ್ರಪ್ರಸಾದ್, ಶಂಕರ್, ನಾಗಮ್ಮ, ಹಾಜರಿದ್ದರು.

ಬಿಜೆಪಿ, ಜೆಡಿಎಸ್‌ನಿಂದ ಕುರುಬ ಸಮುದಾಯಕ್ಕೆ ಅನ್ಯಾಯ

ಕೆ.ಆರ್. ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ ಆರೋಪ

ಮೈಸೂರು, ಏ. 25– ರಾಜ್ಯದ ಜನಸಂಖ್ಯೆಯಲ್ಲಿ 3ನೇ ಸ್ಥಾನದಲ್ಲಿರುವ ಕುರುಬ ಸಮಾಜ 65–70 ಲಕ್ಷ ಜನಸಂಖ್ಯೆಯನ್ನು ಹೊಂದಿದೆ. ಸಾಮಾಜಿಕ ನ್ಯಾಯದಂತೆ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಸಮುದಾಯದವರಿಗೆ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಕನಿಷ್ಠ ಎರಡು ಕ್ಷೇತ್ರಗಳಲ್ಲಿ ಟಿಕೆಟ್ ನೀಡಬೇಕಿತ್ತು. ಆದರೆ, ಈ ಪಕ್ಷಗಳಿಂದ ಒಬ್ಬರಿಗೂ ಟಿಕೆಟ್ ನೀಡಿಲ್ಲ ಎಂದು ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ ದೂರಿದ್ದಾರೆ. ಟಿಕೆಟ್ ಹಂಚಿಕೆಯಲ್ಲಿ ಸಮುದಾಯಕ್ಕೆ ಅನ್ಯಾಯವೆಸಗಿರುವ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳಿಗೆ ರಾಜ್ಯದ ಸಮಸ್ತ ಕುರುಬ ಸಮುದಾಯದ ಮತದಾರರು ಬುದ್ಧಿ ಕಲಿಸಬೇಕಿದೆ ಪತ್ರಿಕೆ ಪ್ರಕಟಣೆಯ ಮೂಲಕ ಸಲಹೆ ನೀಡಿದರು.

ಮನೆ ಮನೆಗೆ ತೆರಳಿ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಮತಯಾಚನೆ

ಮೈಸೂರು, ಏ.25(ಜಿಎ)–ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಪ್ರಚಾರದ ಅಂತಿಮ ದಿನವಾದ ಗುರುವಾರ ಮೈಸೂರು ನಗರದ ವಿವಿಧೆಡೆ ಸಂಚರಿಸಿ, ಮನೆ ಮನೆಗೆ ತೆರಳಿ ಪ್ರಚಾರ ಮಾಡಿದರು.

ನಗರದ ಬನ್ನಿಮಂಟಪದಲ್ಲಿರುವ ಲಾರಿ ಮಾಲೀಕರ ಸಂಘ, ನರಸಿಂಹರಾಜ ಕ್ಷೇತ್ರ ಮತ್ತು ವಿನಾಯಕನಗರ(ಪಡುವಾರಹಳ್ಳಿ)ದ ವಿವಿಧ ಮನೆಗಳಿಗೆ ಶಾಸಕ ತನ್ವೀರ್ ಸೇಠ್ ಮತ್ತು ವಿವಿಧ ಮುಖಂಡರು ಕಾಲ್ನಡಿಗೆ ಮೂಲಕ ಭೇಟಿ ನೀಡಿ ಮತಯಾಚಿಸಿ, ತಮ್ಮನ್ನು ಬೆಂಬಲಿಸುವಂತೆ ಮನವಿ ಮಾಡಿದರು.

ಈ ವೇಳೆ ಮಾತನಾಡಿದ ಲಕ್ಷ್ಮಣ್, ಗ್ಯಾರಂಟಿ ಯೋಜನೆಗಳಿಂದ ಸಾಕಷ್ಟು ಅನುಕೂಲವಾಗಿದೆ. ಅದನ್ನು ಮರೆಯಬೇಡಿ. ಈ ಚುನಾವಣೆಯನ್ನು ನಿರ್ಲಕ್ಷ್ಯ ಮಾಡಿ ಮತದಾನ ಮಾಡದೆ ಸುಮ್ಮನೆ ಇರಬೇಡಿ. ನಿಮ್ಮ ಹಕ್ಕನ್ನು ನೀವು ಚಲಾಯಿಸಿ. ದೇಶದ ಸಂವಿಧಾನ ಉಳಿಸಿ. ಇದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದರು.

5 ವರ್ಷಗಳ ಬಳಿಕ ನೀವು ನಿಮ್ಮ ಜನಪ್ರತಿನಿಧಿ ಆಯ್ಕೆ ಮಾಡುವ ಸಮಯ ಬಂದಿದೆ. ಕಾಂಗ್ರೆಸ್ ಪಕ್ಷ ನೀಡಿರುವ ಯೋಜನೆಗಳಿಂದ ರಾಜ್ಯದ ಜನರು ನೆಮ್ಮದಿಯಿಂದ ಜೀವನ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಅನೇಕರು ಬಂದು ನಿಮ್ಮ ಮತ ಕಿತ್ತುಕೊಳ್ಳಲು ಯೋಚಿಸುತ್ತಾರೆ. ಅದಕ್ಕೆ ಮನಸ್ಸು ಕೊಡದೆ ನೀವು ನಿಮ್ಮ ಆಲೋಚನೆಯಂತೆ ಮತದಾನ ಮಾಡಿ. ಈ ಚುನಾವಣೆಯಲ್ಲಿ ನಿಮ್ಮ ಒಂದು ಮತ ದೇಶಕ್ಕೆ ಹಿತವಾಗುತ್ತದೆ ಎಂದು ತಿಳಿಸಿದರು.

ನಾನು ಸಾಮಾನ್ಯ ವ್ಯಕ್ತಿ. ಅದಕ್ಕೆ ನಿಮ್ಮ ಮನೆ ಮುಂದೆ ಬಂದು ಕೂಲಿ ಕೇಳುತ್ತಿದ್ದೇನೆ. ನೀವೆಲ್ಲ ಮತದಾನ ಮಾಡುವ ಮೂಲಕ ಕೂಲಿ ನೀಡಿ. ಸ್ವಾರ್ಥಕ್ಕಾಗಿ ಚುನಾವಣೆಗೆ ನಾನು ಬಂದಿಲ್ಲ. ಸಾಮಾನ್ಯ ವ್ಯಕ್ತಿಗಳ ಸಮಸ್ಯೆ ಅರಿತು ಬಗೆಹರಿಸಿ ಅವರ ಪರವಾಗಿ ನಿಲ್ಲುವ ದೃಷ್ಟಿಯಿಂದ ಬಂದಿರುವವನು ಎಂದರು.

ನೀವೆಲ್ಲರೂ ನನಗೆ ಆಶೀರ್ವಾದ ಮಾಡಿ ತಪ್ಪದೇ ಕ್ರಮ ಸಂಖ್ಯೆ 2 ಹಸ್ತದ ಗುರುತಿಗೆ ತಮ್ಮ ಅಮೂಲ್ಯವಾದ ಮತ ನೀಡಿ ನನ್ನನ್ನು ಜಯಶೀಲನನ್ನಾಗಿ ಮಾಡಿ ಎಂದು ಮನವಿ ಮಾಡಿದರು.



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಪ್ರಚಾರದ ಅಂತಿಮ ದಿನವಾದ ಮೈಸೂರು ನಗರದ ವಿವಿಧೆಡೆ ಸಂಚರಿಸಿ, ಮನೆ ಮನೆಗೆ ತೆರಳಿ ಪ್ರಚಾರ ಮಾಡಿದರು.

ಮತದಾನ ಕಡ್ಡಾಯ ಮಾಡಬಹುದೇ...!

ಮತದಾನ ಕಡ್ಡಾಯ ಮಾಡಬೇಕೆಂಬ ವಿಷಯ ಆಗಾಗ ಚರ್ಚೆಯಾಗುತ್ತಿರುತ್ತದೆ. ಇದೊಂದು ಆರೋಗ್ಯಕರ ಚರ್ಚೆ.

ಇದು ಸಾಧ್ಯವೇ? ಮತದಾನ ಮಾಡುವುದನ್ನು ಕಡ್ಡಾಯಗೊಳಿಸುವುದು ಹೇಗೆ? ಪ್ರಾಪ್ತ ವಯಸ್ಕರಾದ ಎಲ್ಲರನ್ನೂ ಮತದಾರರ ಪಟ್ಟಿಯಲ್ಲಿ ಸೇರಿಸುವುದು ಹೇಗೆ? ಪ್ರತಿಯೊಬ್ಬ ಪ್ರಜೆಯೂ ಮತ ಚಲಾವಣೆ ಮಾಡಿದ್ದಾನೆಯೋ ಇಲ್ಲವೇ ಎಂಬುದನ್ನು ಪತ್ತೆಹಚ್ಚುವುದು ಹೇಗೆ? ಮತ ಚಲಾಯಿಸದ ವ್ಯಕ್ತಿಗೆ ಏನು ಶಿಕ್ಷೆ?

ಯಾವ ಕಾನೂನಿನನ್ವಯ ಶಿಕ್ಷೆ ವಿಧಿಸುವುದು?

ಮತದಾನ ಕಡ್ಡಾಯಗೊಳಿಸಬೇಕು ಎಂದು ಹೇಳುವವರ ಮಾತಿನಲ್ಲಿ ಒಂದು ಉತ್ತಮ ಕಾಳಜಿ ಇದೆ. ಆದರೆ ಈ ಕಾಳಜಿಯನ್ನು ಕಾರ್ಯ ರೂಪಕ್ಕೆ ತರುವುದು ಹೇಗೆ? ಮತದಾನ ಮಾಡದಿರುವ ಪ್ರಜೆಗಳನ್ನು ಪತ್ತೆಹಚ್ಚಿ ಕ್ರಮಕೈಗೊಳ್ಳುವುದು ಯಾರಿಂದ ಸಾಧ್ಯ?

ಎಷ್ಟು ಮಂದಿಗೆ ಸ್ವಂತ ಮನೆ ಇದೆ? ಸ್ವಂತ ವಿಳಾಸವಿದೆ? ಬಹುತೇಕ ಪ್ರಜೆಗಳಿಗೆ ಆಕಾಶವೇ ಸೂರು, ಬಸ್ ನಿಲ್ದಾಣ, ರೈಲು ನಿಲ್ದಾಣಗಳೇ ವಸತಿ ಸ್ಥಾನ. ಹೀಗಿರುವಾಗ ಇವರನ್ನೆಲ್ಲಾ ಮತದಾರರ ಪಟ್ಟಿಗೆ ಸೇರಿಸುವುದಾದರೂ ಹೇಗೆ? ಇವರು ಮತ ಚಲಾವಣೆ ಮಾಡಿದ್ದಾರೆಯೋ ಇಲ್ಲವೋ ಎಂಬುದನ್ನು ಕಂಡು ಹಿಡಿಯುವುದಾದರೂ ಹೇಗೆ?

ಮತ ಚಲಾಯಿಸುವುದನ್ನು ಕಡ್ಡಾಯ ಮಾಡಬೇಕೆಂದು ವಾದಿಸುವ ಬದಲಾಗಿ... ಮತದಾರರನ್ನು ಮತ ಚಲಾವಣೆ ಮಾಡಲು ಪ್ರೇರೇಪಿಸುವುದು ಹೇಗೆ ಎಂಬುದನ್ನು ಯೋಚಿಸಬೇಕಾಗಿದೆ. ಆದಷ್ಟೂ ಹೆಚ್ಚು ಪ್ರಜೆಗಳು ಮತದಾನ ಮಾಡುವಂತೆ ಮಾಡುವುದು ಹೇಗೆ ಎಂಬುದರ ಬಗ್ಗೆ ಚಿಂತಿಸಬೇಕಾಗಿದೆ.ಇದು ಸಾಧ್ಯವೇ? ಖಂಡಿತ ಸಾಧ್ಯ.

ಮತದಾರರ ಪಟ್ಟಿಯಲ್ಲಿ ಇರುವ ಎಲ್ಲಾ ಪ್ರಜೆಗಳನ್ನೂ ಮತದಾರರು ಎಂದು ಭಾವಿಸಲಾಗದು.ಮತದಾರರ ಪಟ್ಟಿಯಲ್ಲಿ ಹೆಸರಿರುವವರೆಲ್ಲಾ ಮತ ಚಲಾಯಿಸುವುದಿಲ್ಲ.ಬಹುತೇಕ ಮಂದಿ ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ನೋಂದಾಯಿಸುವುದು ಏಕೆಂದರೆ ಮತದಾರರ ಗುರುತಿನ ಚೀಟಿಗಾಗಿ! ಆ ಗುರುತಿನ ಚೀಟಿಯನ್ನು ಬಳಸುವುದು ಕೇವಲ ಸಿಮ್ ಕಾರ್ಡ್ ಪಡೆಯುವುದಕ್ಕಾಗಿ! ವಾಸಸ್ಥಳದ ದೃಢೀಕರಣಕ್ಕಾಗಿ! ಲಕ್ಷಾಂತರ ರೂಪಾಯಿ ವೇತನ ಪಡೆಯುವ ಸರಕಾರಿ ಅಧಿಕಾರಿಗಳು, ಐಷಾರಾಮಿ ಕಾರುಗಳಲ್ಲಿ ಸಂಚರಿಸುವ ಸಾಹುಕಾರರು, ಬಂಗಲೆಗಳಲ್ಲಿ ವಾಸಿಸುವ ಘಟಾನುಘಟಿಗಳು, ಇವರ್‍ಯಾರೂ ಮತ ಚಲಾಯಿಸುವುದಿಲ್ಲ.ಆದರೆ ಸರಕಾರಿ ಸವಲತ್ತುಗಳನ್ನು ತಿಂದು ತೇಗುವುದರಲ್ಲಿ ಇವರೇ ಮುಂದು!

ಕೋವಿಡ್ 19 ಮಹಾಮಾರಿ ಭಾರತಕ್ಕೆ ವಕ್ಕರಿಸಿದ ಸಮಯದಲ್ಲಿ ಇಡೀ ದೇಶದ ಜನತೆಗೆ ಕೋವಿಡ್ ಲಸಿಕೆ ನೀಡಲಾಯಿತು. ತದನಂತರ ಹಲವಾರು ರಾಜ್ಯಗಳನ್ನು ಪ್ರವೇಶಿಸುವವರಿಗೆ ಕೋವಿಡ್ ಲಸಿಕೆ ಪಡೆದಿರುವುದನ್ನು ಕಡ್ಡಾಯಗೊಳಿಸಲಾಯಿತು. ಕೋವಿಡ್ ಲಸಿಕೆ ಪಡೆಯದವರಿಗೆ ಪ್ರವೇಶ ನಿರಾಕರಿಸಲಾಯಿತು. ತಿರುಪತಿ ತಿಮ್ಮಪ್ಪನ ದರ್ಶನಕ್ಕೂ ಸಹ ಆಧಾರ್ ಕಾರ್ಡ್ ಜೊತೆಗೆ ಕೋವಿಡ್ ಲಸಿಕೆ ಪಡೆದ ಸರ್ಟಿಫಿಕೇಟ್ ಕಡ್ಡಾಯವಾಗಿತ್ತು.



ಭಾರತ ಸರಕಾರವೇ ಕೋವಿಡ್ ಲಸಿಕೆ ಪಡೆ ದಿರುವ ಪ್ರತಿಯೊಬ್ಬ ವ್ಯಕ್ತಿಯೂ ಆರೋಗ್ಯ ಸೇತು ಮತ್ತು WhatsApp ಅಪ್ಲಿಕೇಷನ್ ಮೂಲಕ ಕೋವಿಡ್ ಲಸಿಕೆ ಪಡೆದ ಸರ್ಟಿಫಿಕೇಟ್ ಡೌನ್ ಲೋಡ್ ಮಾಡಿಕೊಳ್ಳುವಂತೆ ಅದ್ಭುತ ವ್ಯವಸ್ಥೆಯನ್ನು ಕಲ್ಪಿಸಿತ್ತು.

ಈ ಸರ್ಟಿಫಿಕೇಟಿನಲ್ಲಿ ಲಸಿಕೆ ಪಡೆದ ವ್ಯಕ್ತಿಯ ಹೆಸರು, ವಿಳಾಸ, ಸಮಯ, ದಿನಾಂಕ, ಲಸಿಕೆ ಪಡದ ಕೇಂದ್ರ, ಲಸಿಕೆ ನೀಡಿದ ಸಿಬ್ಬಂದಿಯ ಹೆಸರು ಇತ್ಯಾದಿ ವಿವರವನ್ನು ನಮೂದಿಸಲಾಗಿತ್ತು. ಕೋವಿಡ್ ಲಸಿಕೆ ಪಡೆದ ಗುರುತಿಗಾಗಿ ನೀಡುವ ಈ ಸರ್ಟಿಫಿಕೇಟಿಗಾಗಿ ಎಲ್ಲಾ ನಾಗರಿಕರು ಕೋವಿಡ್ ಲಸಿಕೆ ಪಡೆಯಲು ಮನಸು ಮಾಡಿದರು. ಇದೇ ಮಾದರಿಯಲ್ಲಿ ಮತದಾನ ಮಾಡಿದವರು ತಾವು ಮತದಾನ ಮಾಡಿದ ಗುರುತಿಗಾಗಿ ಸರ್ಟಿಫಿಕೇಟ್ ಡೌನ್‌ಲೋಡ್ ಮಾಡಿಕೊಳ್ಳುವಂತೆ ಸರಕಾರವೇ ಅಪ್ಲಿಕೇಶನ್ ಡೆವಲಪ್ ಮಾಡಬಹುದಲ್ಲವೇ?

ಕೋವಿಡ್ ಲಸಿಕೆ ಪಡೆದ ಸರ್ಟಿಫಿಕೇಟ್ ಮಾದರಿಯಲ್ಲಿಯೇ ಮತದಾನ ಮಾಡಿದ ಸರ್ಟಿಫಿಕೇಟ್ ಒದಗಿಸಲು ಕಷ್ಟವಾಗಲಾರದು.

ಮತದಾರರು ಮತ ಚಲಾವಣೆ ಮಾಡುವ ಸಂದರ್ಭದಲ್ಲಿ ಮತದಾರರ ಬೆರಳಿಗೆ ಶಾಯಿಯಿಂದ ಗುರುತು ಮಾಡಲಾಗುತ್ತದೆ. ಇದರ ಜತೆಗೆ ಮತ ಚಲಾಯಿಸಿದ ಮತದಾರನಿಗೆ ಮತಚಲಾಯಿಸಿದ ಗುರುತಿಗಾಗಿ 'ಸರ್ಟಿಫಿಕೇಟ್' ನೀಡಲೇಬೇಕು. ಈ ಸರ್ಟಿಫಿಕೇಟಿನಲ್ಲಿ ಆ ಮತದಾರನ ಹೆಸರು, ವಯಸ್ಸು ವಿಳಾಸ, ಭಾವಚಿತ್ರ, ಮತಗಟ್ಟೆ ಸಂಖ್ಯೆ ಇತ್ಯಾದಿ ವಿವರ ಮತ್ತು ಮತಗಟ್ಟೆ ಅಧಿಕಾರಿಯ ಡಿಜಿಟಲ್ ರುಜು ಇರಬೇಕು. ಹೇಗಿದ್ದರೂ ಮತಗಟ್ಟೆ ಅಧಿಕಾರಿಯ ಬಳಿಯಲ್ಲಿ ಮತದಾರರ ಪಟ್ಟಿ ಇದ್ದೇ ಇರುತ್ತದೆ. ಈ ಮತದಾರರ ಪಟ್ಟಿಯಲ್ಲಿ ಆ ಮತದಾರನಿಗೆ ಸಂಬಂಧಪಟ್ಟ ಎಲ್ಲ ವಿವರಗಳೂ ಇರುತ್ತವೆ. ಇದೇ ವಿವರದ ಜತೆಗೆ ಮತ ಚಲಾವಣೆಯ ದಿನಾಂಕದೊಂದಿಗೆ ಒಂದು ಸರ್ಟಿಫಿಕೇಟ್ ನೀಡುವುದು ಕಷ್ಟವೆನಿಸಲಾರದು. ಇಂತಹ ಸರ್ಟಿಫಿಕೇಟ್ ತಯಾರಿಸುವುದು ಸರಕಾರಕ್ಕೆ ಹೆಚ್ಚಿನ ಹೊರೆಯಾಗಲಾರದು.

ಚುನಾವಣೆಯ ಸಮಯದಲ್ಲಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಜಾಹೀರಾತು ನೀಡಿ ಸಾರ್ವಜನಿಕರ ಹಣವನ್ನು ಹಣ ಪೋಲು ಮಾಡುವ ಸರಕಾರಕ್ಕೆ ಮತಚಲಾಯಿಸಿದ ಮತದಾರನಿಗೊಂದು ಸರ್ಟಿಫಿಕೇಟ್ ನೀಡುವುದು ಕಷ್ಟವೆನಿಸಲಾರದು. ಮತ ಚಲಾಯಿಸಿದ ಮತದಾರನಿಗೆ ನೀಡುವ ಈ ಸರ್ಟಿಫಿಕೇಟ್ ಮಹತ್ವದ ದಾಖಲೆಯಾಗಬೇಕು. ಮತದಾರರ ಗುರುತಿನ ಚೀಟಿಗಿಂತ ಮತದಾನ ಮಾಡಿದ ಈ ಸರ್ಟಿಫಿಕೇಟಿಗೆ ಹೆಚ್ಚು ಬೆಲೆ ಸಿಗಬೇಕು.

ಯಾವುದೇ ಉದ್ಯೋಗ, ಇಂಟರ್ ವ್ಯೂ , ಪೊಲೀಸ್ ಸ್ಟೇಷನ್, ರೇಷನ್ ಕಾರ್ಡ್, ವಾಹನ ಚಲಾವಣೆಯ ಪರವಾನಗಿ, ಕಾಲೇಜು ಹಾಗೂ ವಾಸಸ್ಥಳದ ದೃಢೀಕೃತ ದಾಖಲೆಯಾಗಿ ಈ ಸರ್ಟಿಫಿಕೇಟ್ ಬಳಕೆಯಾಗಬೇಕು.ಮತ ಚಲಾಯಿಸಿದ ಈ ಸರ್ಟಿಫಿಕೇಟ್ ನಿಜವಾದ ವಾಸಸ್ಥಳವನ್ನು ದೃಢೀಕರಿಸುವ ದಾಖಲೆಯಾಗಬೇಕು.

ಈ ರೀತಿಯ ಸರ್ಟಿಫಿಕೇಟ್ ಹೊಂದಿದವರಿಗೆ ಎಲ್ಲ ಕಡೆಯಲ್ಲೂ ಗೌರವ ಹಾಗೂ ನಾಗರಿಕ ಸೌಲಭ್ಯ ಸಿಗುವಂತಾಗಬೇಕು.ಡಿ.ಎಲ್ ಪಡೆಯಲು, ನವೀಕರಿಸಲು ಈ ಸರ್ಟಿಫಿಕೇಟ್ ಕಡ್ಡಾಯವಾಗಿರಬೇಕು. ಯಾವುದೇ ವಾಹನ ಖರೀದಿಸಲು ಈ ಸರ್ಟಿಫಿಕೇಟ್ ವಾಸದ ದೃಢೀಕರಣದ ದಾಖಲೆಯಾಗಬೇಕು. ನ್ಯಾಯಾಲಯದಲ್ಲಿ ಜಾಮೀನು ನೀಡುವವರಿಗೂ ಸಹ ಈ ಸರ್ಟಿಫಿಕೇಟ್ ಕಡ್ಡಾಯವಾಗಬೇಕು.

ಈ ಸರ್ಟಿಫಿಕೇಟ್ ಹೊಂದದವರು ಮತ ಚಲಾವಣೆ ಮಾಡದೇ ಇದ್ದ ಕಾರಣದಿಂದ ಅವರಿಗೆ ಯಾವುದೇ ನಾಗರಿಕ ಸೌಲಭ್ಯ ಸಿಗದಂತಾಗಬೇಕು. ಈ ರೀತಿ ಕ್ರಮ ಕೈಗೊಂಡರೆ ಈ ಸರ್ಟಿಫಿಕೇಟಿಗಾಗಿಯಾದರೂ ಮತದಾರ ಮತಗಟ್ಟೆಯತ್ತ ಮುಖ ಮಾಡಬಹುದು.

ಸರಕಾರಿ ನೌಕರರು, ಅಧಿಕಾರಿಗಳು ಮತದಾನ ಮಾಡಿದ ಸರ್ಟಿಫಿಕೇಟ್ ಹೊಂದಿರದೇ ಇದ್ದರೆ ಅವರ ವೇತನ, ಭತ್ಯೆ ಕಡಿತಗೊಳಿಸಲು ಕ್ರಮ ಕೈಗೊಳ್ಳಬಹುದು ಅಥವಾ ಹಿಂಬಡ್ತಿ ನೀಡಬಹುದು. ರಾಜಕಾರಣಿಗಳು ಮತದಾನ ಮಾಡಲು ವಿಫಲರಾಗಿದ್ದರೆ ಅವರು ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಇರಬಾರದು.

ಈ ಕ್ರಮ ಕೈಗೊಂಡರೆ ಚುನಾವಣೆಯಲ್ಲಿ ಹೆಚ್ಚಿನ ಮತದಾರರು ಸ್ವಯಂ ಪ್ರೇರಣೆಯಿಂದ ಮತ ಚಲಾಯಿಸಲು ಸ್ಫೂರ್ತಿಯಾಗುತ್ತದೆ. ಈ ಎಲ್ಲ ಕ್ರಮ ಕೈಗೊಳ್ಳುವುದು ಕಷ್ಟವೇನಲ್ಲ. ಆದರೆ ಅದಕ್ಕಿಂತಲೂ ಒಳ್ಳೆಯ ಉಪಾಯವೊಂದಿದೆ. ಅದೇನು ಗೊತ್ತೇ? ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳಿಗೆ 'ಶಿಷ್ಟಾಚಾರ' ಕಡ್ಡಾಯಗೊಳಿಸಬೇಕು.ಆಗ ಮತದಾರರು ತಾವಾಗಿಯೇ ಮತಗಟ್ಟೆಗಳ ಬಳಿ ಬಂದು ಮತ ಚಲಾವಣೆ ಮಾಡಬಹುದು.

● ಪಿ.ಜೆ.ರಾಘವೇಂದ್ರ, ನ್ಯಾಯವಾದಿ ಮೈಸೂರು

ಕೊಡಗು ಜಿಲ್ಲೆಯಲ್ಲಿ 546 ಮತಗಟ್ಟೆ ಸ್ಥಾಪನೆ

ಮತಗಟ್ಟೆಗಳಿಗೆ ಸುರಕ್ಷಿತವಾಗಿ ಸಾಗಿದ ಮತ ಯಂತ್ರಗಳು, ಸಿಬ್ಬಂದಿ




ಮಡಿಕೇರಿಯ ಸಂತ ಜೋಸೆಫರ ಶಾಲಾ ಆವರಣದ ಮಸ್ಟರಿಂಗ್ ಕೇಂದ್ರದಿಂದ ಚುನಾವಣಾ ಕಾರ್ಯಕ್ಕೆ ನಿಯೋಜನೆಗೊಂಡ ಅಧಿಕಾರಿಗಳು, ಸಿಬ್ಬಂದಿ ಮತಯಂತ್ರ ಹಾಗೂ ಇತರೆ ಸಲಕರಣೆಗಳೊಂದಿಗೆ ಮತಗಟ್ಟೆಗಳಿಗೆ ಸಾಗಿದರು.

ಮಡಿಕೇರಿ, ಏ.25–ಪ್ರಜಾಪ್ರಭುತ್ವ ಹಬ್ಬ ಎಂದೇ ಕರೆಯಲ್ಪಡುವ 18ನೇ ಲೋಕಸಭಾ ಚುನಾವಣೆಯ ಮೈಸೂರು–ಕೊಡಗು ಕ್ಷೇತ್ರದಲ್ಲಿ ಶುಕ್ರವಾರ ಮತದಾನ ನಡೆಯಲಿದ್ದು, ಗುರುವಾರ ಮತ ಯಂತ್ರಗಳನ್ನು ಮಸ್ಟರಿಂಗ್ ಕಾರ್ಯದ ಬಳಿಕ ಜಿಲ್ಲೆಯ ಎಲ್ಲಾ ಮತ ಕೇಂದ್ರಗಳಿಗೆ ಸುರಕ್ಷಿತವಾಗಿ ಸಾಗಿಸಲಾಯಿತು.

ಮಡಿಕೇರಿ ವಿಧಾನಸಭಾ ಕ್ಷೇತ್ರದಲ್ಲಿ 273 ಮತ್ತು ವಿರಾಜಪೇಟೆ ಕ್ಷೇತ್ರದಲ್ಲಿ ಒಟ್ಟು 273 ಮತಗಟ್ಟೆಗಳ ಸಹಿತ ಜಿಲ್ಲೆಯಲ್ಲಿ ಒಟ್ಟು 546 ಮತಗಟ್ಟೆಗಳನ್ನು ತೆರೆಯಲಾಗಿದೆ. ಮಡಿಕೇರಿಯ ಸಂತ ಜೋಸೆಫರ ಶಾಲೆ ಮತ್ತು ವಿರಾಜಪೇಟೆ ಸಂತ ಅನ್ನಮ್ಮ ಶಾಲೆಯ ಭದ್ರತಾ ಕೊಠಡಿಗಳಲ್ಲಿ ಇಡಲಾಗಿದ್ದ ಮತ ಯಂತ್ರಗಳನ್ನು ಜಿಲ್ಲಾ ಚುನಾವಣಾಧಿಕಾರಿ ಮತ್ತು ಮಾದರಿ ನೀತಿ ಸಂಹಿತೆ ನೋಡಲ್ ಅಧಿಕಾರಿಗಳ ಸಮ್ಮುಖದಲ್ಲಿ ಅಂತಿಮ ಹಂತದ ಪರಿಶೀಲಿಸಲಾಯಿತು. ನಂತರ ಆಯಾ ಮತ ಕೇಂದ್ರಗಳಿಗೆ ಚುನಾವಣಾ ಕರ್ತವ್ಯ ಸಿಬ್ಬಂದಿ ಸೂಕ್ತ ಭದ್ರತೆಯಲ್ಲಿ ತೆರಳಿದರು.

ಶುಕ್ರವಾರ(ಏ.26) ಬೆಳಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆವರೆಗೆ ಮತದಾನ ನಡೆಯಲಿದ್ದು, ಸಾರ್ವಜನಿಕರು ಪ್ರಜಾತಂತ್ರದ ಮತದಾನದ ಹಬ್ಬದಲ್ಲಿ ಪಾಲ್ಗೊಳ್ಳುವಂತೆ ಜಿಲ್ಲಾಡಳಿತ ಮನವಿ ಮಾಡಿದೆ.

ಮತದಾರರ ವಿವರ: ಮೈಸೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ವಿರಾಜಪೇಟೆ ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾನಕ್ಕಾಗಿ ಸಿದ್ಧತೆ ಮಾಡಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ ಒಟ್ಟು 546 ಮತಗಟ್ಟೆಗಳನ್ನು ತೆರೆಯಲಾಗಿದ್ದು, ಒಟ್ಟು 4,70,766 ಮತದಾರರಿದ್ದು, 2,30,568 ಪುರುಷರು ಮತ್ತು 2,40,182 ಮಹಿಳಾ ಮತದಾರರು ಹಾಗೂ 16 ಇತರ ಮತದಾರರು ತಮ್ಮ ಹಕ್ಕು ಚಲಾಯಿಸಲು ಅರ್ಹರಾಗಿದ್ದಾರೆ.

ಸಿಬ್ಬಂದಿ ನಿಯೋಜನೆ: ಮಡಿಕೇರಿ ವಿಧಾನಸಭಾ ಕ್ಷೇತ್ರದ ಮತಗಟ್ಟೆಗಳಿಗೆ 302 ಪಿಆರ್‌ಒ, 302 ಎಪಿಆರ್‌ಒ, 604 ಪಿಒ ಸೇರಿ ಒಟ್ಟು 1208 ಸಿಬ್ಬಂದಿ ಹಾಗೂ ವಿರಾಜಪೇಟೆ ಕ್ಷೇತ್ರದ ಮತಗಟ್ಟೆಗಳಿಗೆ 302 ಪಿಆರ್‌ಒ, 302 ಎಪಿಆರ್‌ಒ, 604 ಪಿಒ ಸೇರಿ ಒಟ್ಟು 1208 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು 108 ಮತಗಟ್ಟೆಗಳಲ್ಲಿ ಸಿಎಪಿಎಫ್, ಮೈಕ್ರೋ ವೀಕ್ಷಕರು, ವೆಬ್‌ಕ್ಯಾಸ್ಟಿಂಗ್ ಅಳವಡಿಸಲಾಗಿದೆ. ಚುನಾವಣಾ ಕರ್ತವ್ಯನಿರತ ಅಧಿಕಾರಿಗಳು ಮತ್ತು ಸಿಬ್ಬಂದಿಯ ಅನುಕೂಲಕ್ಕಾಗಿ 80 ಕೆಎಸ್‌ಆರ್‌ಟಿಸಿ ಬಸ್, 47 ಮಿನಿ ಬಸ್, 13 ಮ್ಯಾಕ್ಸಿ ಕ್ಯಾಬ್, ಗುಡ್ಡಗಾಡು ಪ್ರದೇಶಗಳಿಗೆ ಮೀಸಲಾಗಿ 74 ಜೀಪ್‌ಗಳನ್ನು ಜಿಲ್ಲಾ ಚುನಾವಣಾ ಆಯೋಗ ಬಳಸಿಕೊಂಡಿದೆ.

ವಿಶೇಷ ಮತಗಟ್ಟೆಗಳು

ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ವಿಶೇಷ ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, ಒಟ್ಟು 10 ಸಖಿ(ಪಿಂಕ್) ಬೂತ್‌ಗಳನ್ನು ನಿರ್ಮಿಸಲಾಗಿದೆ. 6 ಸಾಂಪ್ರದಾಯಿಕ, 2 ವಿಶೇಷಚೇತನ, 2 ಯುವ ಮತದಾರರ ಮತಗಟ್ಟೆ ಕೇಂದ್ರ ಮತ್ತು 3 ಕಾಫಿ ಬೆಳೆಯ ಥೀಮ್ ಆಧಾರಿತ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಈ ಮತಗಟ್ಟೆಗಳು ಸಾರ್ವಜನಿಕರ ಆಕರ್ಷಣೀಯ ಮತಗಟ್ಟೆಗಳಾಗಲಿದ್ದು, ಮತದಾನದ ಪ್ರಮಾಣ ಹೆಚ್ಚಿಸಲು ವಿಶೇಷ ಮತಗಟ್ಟೆಗಳ ಸ್ಥಾಪಿಸಿಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ವೆಂಕಟ್ ರಾಜಾ ತಿಳಿಸಿದ್ದಾರೆ.

ವಿರಾಜಪೇಟೆ ಕ್ಷೇತ್ರಕ್ಕೆ 1250 ಸಿಬ್ಬಂದಿ ನಿಯೋಜನೆ



ವಿರಾಜಪೇಟೆ ಸಂತ ಅನ್ನಮ್ಮ ಶಾಲಾ ಆವರಣದಲ್ಲಿ ಮತದಾನ ಕಾರ್ಯಕ್ಕೆ ನಿಯೋಜಿಸಿರುವ ವಾಹನಗಳು.

ವಿರಾಜಪೇಟೆ: ವಿರಾಜಪೇಟೆ ವಿಧಾನಸಭಾ ಕ್ಷೇತ್ರದ 273 ಮತಗಟ್ಟೆಗಳಿಗೆ 1250 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಪಟ್ಟಣದ ಸಂತ ಅನ್ನಮ್ಮ ಶಾಲಾ ಆವರಣದಲ್ಲಿ ಗುರುವಾರ ಮತ ಯಂತ್ರಗಳನ್ನು ಮಸ್ಟರಿಂಗ್, ಅಗತ್ಯ ಚುನಾವಣಾ ಪರಿಕರಗಳು ಹಾಗೂ ಮತಗಟ್ಟೆಗಳಿಗೆ ಸಿಬ್ಬಂದಿ ನಿಯೋಜನೆ ಕಾರ್ಯ ನಡೆಯಿತು. ಮೀಸಲು ಸಿಬ್ಬಂದಿ ಸೇರಿ 1250 ಸಿಬ್ಬಂದಿ ಪೈಕಿ 800 ಮಹಿಳಾ ಸಿಬ್ಬಂದಿಗಳಿದ್ದಾರೆ. ಮತಗಟ್ಟೆಗೆ ತೆರಳಲು 100 ಮಾರ್ಗಗಳನ್ನು ಗುರುತಿಸಲಾಗಿದ್ದು, ಮತಗಟ್ಟೆ ಕೇಂದ್ರಕ್ಕೆ ಸಿಬ್ಬಂದಿ ತೆರಳಲು 41 ಕೆಎಸ್‌ಆರ್‌ಟಿಸಿ ಬಸ್, 33 ಮಿನಿಬಸ್, 40 ಜೀಪ್‌ಗಳು ಸೇರಿದಂತೆ ಒಟ್ಟು 114 ವಾಹನಗಳನ್ನು ಬಳಸಿಕೊಳ್ಳಲಾಗಿದೆ.

ಮಹಿಳೆಯರಿಗಾಗಿ ಪಿಂಕ್ (ಸಖಿ) ಮತ್ತು ವಿಕಲಚೇತನರಿಗಾಗಿ ಸಂತ ಅನ್ನಮ್ಮ ಶಾಲೆಯಲ್ಲಿ ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, ರ್‍ಯಾಂಪ್ ಗಾಲಿ ಕುರ್ಚಿಗಳು ಸೇರಿದಂತೆ ಎಲ್ಲಾ ವ್ಯವಸ್ಥೆ ಮಾಡಲಾಗಿದೆ ಎಂದು ತಾಲೂಕು ಚುನಾವಣಾಧಿಕಾರಿಯಾದ ತಹಶೀಲ್ದಾರ್ ಹೆಚ್.ಎನ್.ರಾಮಚಂದ್ರ ತಿಳಿಸಿದರು.

ವಿರಾಜಪೇಟೆ ಕ್ಷೇತ್ರದಲ್ಲಿ ಚುನಾವಣಾ ಕರ್ತವ್ಯಕ್ಕಾಗಿ ಡಿವೈಎಸ್‌ಪಿ 3, ವೃತ್ತ ನಿರೀಕ್ಷಕರು 6, ಸಬ್‌ಇನ್ಸ್‌ಪೆಕ್ಟರ್ 24, ಎಎಸ್‌ಐ 18, ಪೊಲೀಸ್ ಸಿಬ್ಬಂದಿ 265, ಹೋಂಗಾರ್ಡ್ 131 ಸೇರಿ ಒಟ್ಟು 450 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಮತಗಟ್ಟೆಗಳನ್ನು ಗುರುತಿಸಲಾಗಿದೆ ಎಂದು ವಿರಾಜಪೇಟೆ ಡಿವೈಎಸ್‌ಪಿ ಮೋಹನ್ ಕುಮಾರ್ ಮಾಹಿತಿ ನೀಡಿದರು.

ಇದೇ ವೇಳೆ ಜಿಲ್ಲಾ ಚುನಾವಣಾಧಿಕಾರಿ ವೆಂಕಟ್‌ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್‌ರಾಜ್ ಪರಿಶೀಲನೆ ನಡೆಸಿದರು.

ವಿರಾಜಪೇಟೆ ಸಂತ ಅನ್ನಮ್ಮ ಶಾಲೆಯ ಮಸ್ಟರಿಂಗ್ ಕೇಂದ್ರಕ್ಕೆ ಜಿಲ್ಲಾ ಚುನಾವಣಾಧಿಕಾರಿ ವೆಂಕಟ್‌ರಾಜಾ ಅಧಿಕಾರಿಗಳೊಂದಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.



ಹೆದ್ದಾರಿಯಲ್ಲಿ ಆತಂಕ ಮೂಡಿಸಿದ ಒಂಟಿ ಸಲಗ




ಸುಂಟಿಕೊಪ್ಪ ಮೈಸೂರು–ಮಡಿಕೇರಿ ರಾಷ್ಟ್ರಿಯ ಹೆದ್ದಾರಿಯ ಕೊಡಗರಹಳ್ಳಿ ಮಾರುತಿ ನಗರದ ಬಳಿ ಗುರುವಾರ ಮುಂಜಾನೆ ಒಂಟಿ ಸಲಗ ರಾಜಾರೋಷವಾಗಿ ಸಂಚರಿಸುವ ಮೂಲಕ ವಾಹನ ಸವಾರರಲ್ಲಿ ಆತಂಕ ಮೂಡಿಸಿದೆ. ಹೆದ್ದಾರಿ ಬದಿಯಲ್ಲೇ ಒಂಟಿ ಸಲಗ ಘೀಳಿಡುತ್ತಾ ವಾಹನ ಸವಾರರಲ್ಲಿ ಕೆಲಕಾಲ ಭೀತಿ ಹುಟ್ಟಿಸಿತು. ನಂತರ ರಸ್ತೆಬದಿಯ ಕಾಫಿ ತೋಟದ ಗೇಟ್‌ನೊಳಗೆ ನುಸುಳಿದ ಒಂಟಿ ಸಲಗ ತೋಟದೊಳಗೆ ಮರೆಯಾಗಿದೆ. ಹೆದ್ದಾರಿಯಲ್ಲೇ ವಾಹನಗಳು ನಿಂತಿದ್ದರೂ ಅದೃಷ್ಟವಶಾತ್ ಯಾವುದೇ ಅಹಿತಕರ ಘಟನೆ ಸಂಭವಿಸಲಿಲ್ಲ.



ವಿರಾಜಪೇಟೆಯ ತೋರ ಗ್ರಾಮದಲ್ಲಿ ಹಾಕಿ ಮೈದಾನಕ್ಕೆ ಸುಮಾರು 5 ಎಕರೆ ಭೂಮಿ ಮಂಜೂರಾತಿಗೆ ಸಹಕರಿಸಿದ ಶಾಸಕ ಎ.ಎಸ್.ಪೊನ್ನಣ್ಣ ಅವರನ್ನು ಕೊಡವ ಹಾಕಿ ಅಕಾಡೆಮಿ ವತಿಯಿಂದ ಸನ್ಮಾನಿಸಲಾಯಿತು. ಅಕಾಡೆಮಿ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ, ಕಾರ್ಯಾಧ್ಯಕ್ಷ ಮೇಕೇರಿರ ರವಿ ಪೆಮ್ಮಯ್ಯ, ಉಪಾಧ್ಯಕ್ಷ ಕುಕ್ಕೇರ ಜಯ ಚಿಣ್ಣಪ್ಪ, ಜಂಟಿ ಕಾರ್ಯದರ್ಶಿ ಚೆಯ್ಯಂಡ ಸತ್ಯ, ನಿರ್ದೇಶಕರು ಇದ್ದರು.

ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಮನೋಜ್ ಕಾಂಗ್ರೆಸ್ ಸೇರ್ಪಡೆ



ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಡಾ.ಯಾಲದಾಳು ಮನೋಜ್ ಬೋಪಯ್ಯ ಶಾಸಕ ಎ.ಎಸ್.ಪೊನ್ನಣ್ಣ ಸಮ್ಮುಖದಲ್ಲಿ ಕಾಂಗ್ರೆಸ್ ಸೇರ್ಪಡೆಗೊಂಡರು.

ಮಡಿಕೇರಿ: ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಹಾಗೂ ವಕೀಲ ಡಾ.ಯಾಲದಾಳು ಮನೋಜ್ ಬೋಪಯ್ಯ ತಮ್ಮ ಬೆಂಬಲಿಗರೊಂದಿಗೆ ಶಾಸಕ ಎ.ಎಸ್.ಪೊನ್ನಣ್ಣ ಸಮ್ಮುಖದಲ್ಲಿ ಕಾಂಗ್ರೆಸ್ ಸೇರ್ಪಡೆಗೊಂಡರು.

ನಂತರ ಮಾತನಾಡಿದ ಡಾ.ಯಾಲದಾಳು ಮನೋಜ್ ಬೋಪಯ್ಯ, ಕಾಂಗ್ರೆಸ್‌ಗೆ ಅತ್ಯಧಿಕ ಮತಗಳು ಲಭಿಸಲಿವೆ. ಶಾಸಕ ಪೊನ್ನಣ್ಣ ಸಚಿವರಾಗಬೇಕು ಮತ್ತು ರಾಜಕೀಯವಾಗಿ ಮತ್ತಷ್ಟು ಬೆಳೆಯಬೇಕು ಎನ್ನುವ ಉದ್ದೇಶದಿಂದ ಅವರ ನಾಯಕತ್ವ ಮೆಚ್ಚಿ ಕಾಂಗ್ರೆಸ್‌ಗೆ ಸೇರ್ಪಡೆಗೊಂಡಿರುವುದಾಗಿ ತಿಳಿಸಿದರು.

ಇದೇ ವೇಳೆ ಮನೋಜ್ ಬೋಪಯ್ಯ ಅವರ ಪುತ್ರ ಅನೀಶ್, ಕೊಡಗು ರಕ್ಷಣಾ ವೇದಿಕೆ ಅಧ್ಯಕ್ಷ ಅಚ್ಚಂಡಿರ ಪವನ್ ಪೆಮ್ಮಯ್ಯ, ವಿರಾಜಪೇಟೆ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

ಕಾಡುಪ್ರಾಣಿಗಳ ಭೀತಿ: ಅರಣ್ಯ ಸಿಬ್ಬಂದಿ ನಿಯೋಜನೆ

ಸಿದ್ದಾಪುರ, ಏ.25–ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಮತದಾರರು ನಿರ್ಭೀತಿಯಿಂದ ಮತದಾನ ಮಾಡಲು ಅರಣ್ಯ ಇಲಾಖೆ ಅಗತ್ಯ ಮಂಜಾಗ್ರತಾ ಕ್ರಮ ಕೈಗೊಂಡಿದ್ದು, ಕಾಡುಪ್ರಾಣಿಗಳ ಹಾವಳಿ ಹೆಚ್ಚಿರುವ ಕೊಡಗು ಜಿಲ್ಲೆಯ ಮತಗಟ್ಟೆಗಳಿಗೆ ಅರಣ್ಯ ಸಿಬ್ಬಂದಿ ನಿಯೋಜಿಸಲಾಗಿದೆ ಎಂದು ವಿರಾಜಪೇಟೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್ ತಿಳಿಸಿದ್ದಾರೆ.

ಈಗಾಗಲೇ ವಿರಾಜಪೇಟೆ ಉಪ ವಿಭಾಗದ 5 ವಲಯಗಳಲ್ಲಿ ಕಾಡುಪ್ರಾಣಿ ಹಾವಳಿ ಹೆಚ್ಚಿರುವ ಅರಣ್ಯ ಪ್ರದೇಶದ ಮತಗಟ್ಟೆಗಳಿಗೆ ವಲಯಾಧಿಕಾರಿಗಳ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದ್ದು, ಅಗತ್ಯ ಸಿಬ್ಬಂದಿ ನೇಮಕ ಮಾಡುವ ಮೂಲಕ ಮುಂಜಾಗ್ರತ ಕ್ರಮ ಕೈಗೊಳ್ಳಲಾಗಿದೆ.

ಸಿದ್ದಾಪುರ ಸುತ್ತಮುತ್ತಲ 9 ಮತಗಟ್ಟೆಗಳಿಗೆ ಅರಣ್ಯ ಸಿಬ್ಬಂದಿ ನಿಯೋಜಿಸಲಾಗಿದ್ದು, ಅಗತ್ಯವಿದ್ದ ಕಡೆಗಳಲ್ಲಿ ವಾಹನ ವ್ಯವಸ್ಥೆ ಕಲ್ಪಿಸಲಾಗಿದೆ. ಸಮಸ್ಯೆಗಳಿದ್ದಲ್ಲಿ ತಕ್ಷಣ ಅರಣ್ಯಾಧಿಕಾರಿಗಳಿಗೆ ಮಾಹಿತಿ ನೀಡುವಂತೆ ತಿಳಿಸಿದ್ದಾರೆ. ಈ ಸಂದರ್ಭ ವಲಯ ಅರಣ್ಯಾಧಿಕಾರಿ ಕಳ್ಳಿರ ಎಂ.ದೇವಯ್ಯ, ಉಪ ವಲಯ ಅರಣ್ಯಾಧಿಕಾರಿ ಸಂಜಿತ್ ಸೋಮಯ್ಯ, ಆರ್‌ಆರ್‌ಟಿ ಸಿಬ್ಬಂದಿ ವಿನೋದ್, ಸಚ್ಚಿನ್ ಹರೀಶ್, ದರ್ಶನ್, ಮಹೇಶ್ ವಿಕಾಸ್, ಅನಿಲ್, ಚಾಲಕ ಅಶೋಕ್ ಹಾಜರಿದ್ದರು.



ಕಾಡುಪ್ರಾಣಿಗಳ ಹಾವಳಿ ಹೆಚ್ಚಿರುವ ಮತಗಟ್ಟೆಗಳಿಗೆ ನಿಯೋಜಿಸಿರುವ ಅರಣ್ಯ ಸಿಬ್ಬಂದಿ.

ಆಕರ್ಷಣೆಯ ವಿಶೇಷ ಮತಗಟ್ಟೆಗಳು

ಜಿಲ್ಲಾ ಚುನಾವಣಾಧಿಕಾರಿ ಶಿಲ್ಪನಾಗ್ ಮೆಚ್ಚುಗೆ

ಚಾಮರಾಜನಗರ, ಏ.25–ಮತದಾರರನ್ನು ಮತಗಟ್ಟೆಗಳ ಕಡೆಗೆ ಸೆಳೆಯಲು ಜಿಲ್ಲಾ ಸ್ವೀಪ್ ಸಮಿತಿ ಜಿಲ್ಲಾ ಚುನಾವಣಾಧಿಕಾರಿ ನೇತೃತ್ವದಲ್ಲಿ ಜಿಲ್ಲಾದ್ಯಂತ ಸ್ಥಾಪಿಸಿರುವ ವಿಶೇಷ ಮತಗಟ್ಟೆಗಳು ವೈವಿಧ್ಯಮಯ ಆಕರ್ಷಣೆಯನ್ನು ಹೆಚ್ಚಿಸಿದ್ದು, ಜಿಲ್ಲಾಧಿಕಾರಿ ಶಿಲ್ಪನಾಗ್ ವಿಶೇಷ ಮತಗಟ್ಟೆಗಳಿಗೆ ಭೇಟಿ ನೀಡಿ, ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ರಾಮಸಮುದ್ರ ಬಡಾವಣೆಯ ಬಾಲರಪಟ್ಟಣ ಶಾಲೆಯ ಎದುರಿನ ಸರ್ಕಾರಿ ಶಾಲೆಯಲ್ಲಿ ಸ್ಥಾಪಿಸಿರುವ ಸಾಂಪ್ರದಾಯಿಕ ಮತಗಟ್ಟೆಗೆ ಭೇಟಿ ನೀಡಿದ ಜಿಲ್ಲಾಧಿಕಾರಿ ಮತ್ತು ಅವರ ತಂಡಕ್ಕೆ ಅದ್ದೂರಿ ಸ್ವಾಗತ ನೀಡಲಾಯಿತು. ಮತಗಟ್ಟೆಯನ್ನು ತಳಿರು, ತೋರಣ ಹಾಗೂ ರಂಗೋಲಿ ಚಿತ್ತಾರದಿಂದ ಸಿಂಗರಿಸಲಾಗಿದೆ. ಜಾನಪದ ಕಲಾವಿದರು ಸಿದ್ದಪ್ಪಾಜಿ, ಮಂಟೇಸ್ವಾಮಿ ಪದಗಳನ್ನು ಹಾಡುವ ಮೂಲಕ ಸ್ವಾಗತಿಸಿದರು.

ಸಾಂಪ್ರದಾಯಿಕ ಮತಗಟ್ಟೆಯಲ್ಲಿ ಕಲಾವಿದರು ಬಳಸುವ ಡೊಳ್ಳು, ತಮಟೆ, ನಗಾರಿ ವಾಲಗ, ಹಾರ್ಮೋನಿಯಂ ಇತರೆ ವಾದ್ಯ ಪರಿಕರಗಳನ್ನು ಇಡಲಾಗಿತ್ತು. ಹಿಂದಿನ ಕಾಲದಲ್ಲಿ ಬಳಸಲಾಗುತ್ತಿದ್ದ ಶಾವಿಗೆ ಒತ್ತುವ ಮರದ ಯಂತ್ರ, ರಾಗಿ ಬೀಸುವ ಕಲ್ಲು, ಕುಟ್ಟಣಿಗೆ, ಬಿದಿರಿನ ಕುಕ್ಕೆ, ಮೊರ, ಒಳ್ಳುಕಲ್ಲು, ಧಾನ್ಯಗಳನ್ನು ಅಳತೆ ಮಾಡುವ ಸೇರು, ಪಾವು, ಚಟಾಕು, ಒಂದ್ರಿ, ಅಡುಗೆಯ ಮಡಕೆಗಳು, ಹಸೆಮಣೆ ಸೇರಿದಂತೆ ಇನ್ನಿತರೆ ಪರಿಕರಗಳನ್ನು ವೀಕ್ಷಿಸಿದ ಜಿಲ್ಲಾಧಿಕಾರಿ ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ವೇಳೆ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷರಾದ ಜಿಪಂ ಸಿಇಒ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಜಿಲ್ಲಾ ಸ್ವೀಪ್ ನೋಡಲ್ ಅಧಿಕಾರಿ ಪಿ.ಲಕ್ಷ್ಮೀ, ತಾಪಂ ಇಒ ಕೃಷ್ಣಪ್ಪ, ನಗರಸಭೆ ಪೌರಾಯುಕ್ತ ಎಸ್.ವಿ.ರಾಮದಾಸ್, ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ್, ಪರಿಸರ ಇಂಜಿನಿಯರ್ ಗಿರಿಜಮ್ಮ ಇತರರು ಇದ್ದರು.



ಚಾಮರಾಜನಗರದ ರಾಮಸಮುದ್ರ ಬಡಾವಣೆಯ ಬಾಲರಪಟ್ಟಣ ಶಾಲೆ ಎದುರಿನ ಸರ್ಕಾರಿ ಶಾಲೆಯ ವಿಶೇಷ ಮತಗಟ್ಟೆಗೆ ಭೇಟಿ ನೀಡಿದ ಜಿಲ್ಲಾಧಿಕಾರಿ ಶಿಲ್ಪನಾಗ್ ಜಾನಪದ ವಾದ್ಯ ಪರಿಕರಗಳನ್ನು ವೀಕ್ಷಿಸಿದರು.

ಮತದಾನಕ್ಕೆ 4784 ಸಿಬ್ಬಂದಿ ನಿಯೋಜನೆ

• ಚಾಮರಾಜನಗರದಲ್ಲಿ ಮಸ್ಟರಿಂಗ್ ಕಾರ್ಯ • ಮತಗಟ್ಟೆಗಳಿಗೆ ತೆರಳಿದ ಸಿಬ್ಬಂದಿ

ಚಾಮರಾಜನಗರ, ಏ.25–ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದ ಮತದಾನಕ್ಕೆ ಎಲ್ಲಾ ಸಿದ್ಧತೆ ಕೈಗೊಳ್ಳಲಾಗಿದ್ದು, ಗುರುವಾರ ಮಸ್ಟರಿಂಗ್ ಕಾರ್ಯ ನಡೆಸಲಾಯಿತು.

ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ 8 ವಿಧಾನಸಭಾ ಕ್ಷೇತ್ರಗಳ ಮಸ್ಟರಿಂಗ್ ಕೇಂದ್ರದಿಂದ ಮತ ಯಂತ್ರ ಹಾಗೂ ಅಗತ್ಯ ವಸ್ತುಗಳೊಂದಿಗೆ ಸಿಬ್ಬಂದಿ ವಾಹನಗಳ ಮೂಲಕ ಮತಗಟ್ಟೆ ಕೇಂದ್ರಗಳಿಗೆ ತೆರಳಿದರು. ಈಗಾಗಲೇ ಮತಗಟ್ಟೆಗಳನ್ನು ಸಿದ್ಧಗೊಳಿಸಲಾಗಿದ್ದು, ಈ ನಿಟ್ಟಿನಲ್ಲಿ ಬ್ಯಾಲೆಟ್ ಯೂನಿಟ್, ಕಂಟ್ರೋಲ್ ಯೂನಿಟ್ ಹಾಗೂ ವಿವಿ ಪ್ಯಾಟ್‌ಗಳನ್ನು ಅಂತಿಮವಾಗಿ ಪರಿಶೀಲಿಸಿ, ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಿಬ್ಬಂದಿಗೆ ಹಂಚಿಕೆ ಮಾಡಲಾಯಿತು.

ಪ್ರತಿ ಬಾರಿಯಂತೆ ಈ ಬಾರಿಯೂ ವಿದ್ಯುನ್ಮಾನ ಮತಯಂತ್ರಗಳನ್ನು ಬಳಸಲಾಗುತ್ತಿದ್ದು, 2 ಸಾವಿರ ಮತಗಟ್ಟೆಗಳಿಗೆ 2559 ಬ್ಯಾಲೆಟ್ ಯೂನಿಟ್ (ಬಿಯು), 2618 ಕಂಟ್ರೋಲ್ ಯೂನಿಟ್ (ಸಿಯು), 2792 ವಿವಿ ಪ್ಯಾಟ್ ಹಂಚಿಕೆ ಮಾಡಲಾಗಿದೆ. ಜಿಲ್ಲೆಯ ಒಟ್ಟು 983 ಮತಗಟ್ಟೆಗಳಿಗೆ 1196 ಪಿಆರ್‌ಒ, 1196 ಎಪಿಆರ್‌ಒ, 2392 ಪಿಒ ಸೇರಿದಂತೆ ಒಟ್ಟು 4784 ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಜಿಲ್ಲೆಯ 4 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 197 ಮತಗಟ್ಟೆಗಳನ್ನು ಸೂಕ್ಷ್ಮ (ಕ್ರಿಟಿಕಲ್) ಮತಗಟ್ಟೆಗಳು ಎಂದು ಗುರುತಿಸಲಾಗಿದ್ದು, ಚುನಾವಣೆಯನ್ನು ಶಾಂತಿಯುತ, ಪಾರದರ್ಶಕ ಹಾಗೂ ನ್ಯಾಯಸಮ್ಮತವಾಗಿ ನಡೆಸಲು ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಜಿಲ್ಲಾದ್ಯಂತ ಒಟ್ಟು 1667 ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಮಾದರಿ ಮತಗಟ್ಟೆಗಳು: ಮಹಿಳಾ ಮತದಾರರನ್ನು ಉತ್ತೇಜಿಸಲು ಸಖಿ ಸೌರಭ ಶೀರ್ಷಿಕೆಯಡಿ 16 ಪಿಂಕ್ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಗುಂಡ್ಲುಪೇಟೆ ತಾಲೂಕಿನಲ್ಲಿ 2 ಸಾಂಪ್ರದಾಯಿಕ ಬುಡಕಟ್ಟು ಮತಗಟ್ಟೆ ಸ್ಥಾಪಿಸಲಾಗಿದೆ. ಉಳಿದಂತೆ 4 ವಿಶೇಷಚೇತನರ ಮತಗಟ್ಟೆ, 8 ಯುವ ಸೌರಭ, ಹನೂರು ಹಾಗೂ ಚಾಮರಾಜನಗರ ಕ್ಷೇತ್ರಗಳಲ್ಲಿ ತಲಾ ಒಂದೊಂದು ಸಾಂಪ್ರದಾಯಿಕ, 8 ಅನ್ನದಾತ, 6 ಹಸಿರು ಮತಗಟ್ಟೆಗಳನ್ನು ತೆರೆಯಲಾಗಿದೆ.

ವೇತನ ಸಹಿತ ರಜೆ: ಲೋಕಸಭಾ ಸಾರ್ವತ್ರಿಕ ಚುನಾವಣೆಯ ಮತದಾನದ ಹಿನ್ನೆಲೆಯಲ್ಲಿ ಏ.26ರಂದು ಜಿಲ್ಲೆ ಎಲ್ಲಾ ಕಾರ್ಮಿಕರಿಗೆ ವೇತನ ಸಹಿತ ರಜೆ ನೀಡುವಂತೆ ಕಾರ್ಮಿಕ ಇಲಾಖೆ ಸೂಚಿಸಿದೆ.

ಕಾರ್ಖಾನೆಗಳು, ಅಂಗಡಿಗಳು, ವಾಣಿಜ್ಯ ಹಾಗೂ ಇತರೆ ಸಂಸ್ಥೆಗಳ ಕಾರ್ಮಿಕರಿಗೆ ಹಾಗೂ ಕೈಗಾರಿಕಾ ಸಂಸ್ಥೆಗಳ ಅರ್ಹ ಮತದಾರರಿಗೆ ವೇತನ ಸಹಿತ ರಜೆ ಘೋಷಿಸಿ, ಮತ ಚಲಾಯಿಸಲು ಎಲ್ಲಾ ಮಾಲೀಕರು, ನಿಯೋಜಕರು ಅನುವು ಮಾಡಿಕೊಡಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ಆದೇಶಿಸಿದ್ದಾರೆ.



ಚಾಮರಾಜನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಿಂದ ಬ್ಯಾಲೆಟ್, ಕಂಟ್ರೋಲ್ ಯೂನಿಟ್, ವಿವಿ ಪ್ಯಾಟ್‌ಗಳೊಂದಿಗೆ ಮತಗಟ್ಟೆ ಕೇಂದ್ರಗಳಿಗೆ ತೆರಳಿದ ಸಿಬ್ಬಂದಿ.

ಇಂದು ಸಂತೆ, ಜಾತ್ರೆ ನಿಷೇಧ

ಮತದಾನ ಹಿನ್ನೆಲೆಯಲ್ಲಿ ಮತಗಟ್ಟೆ ಕೇಂದ್ರಗಳಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಲು ಹಾಗೂ ಮತದಾರರ ಅನುಕೂಲಕ್ಕಾಗಿ ಶುಕ್ರವಾರ ಜಿಲ್ಲೆಯ ಎಲ್ಲಾ ಸಂತೆ ಮತ್ತು ಜಾತ್ರೆಗಳನ್ನು ನಿಷೇಧಿಸಿ ಜಿಲ್ಲಾ ಚುನಾವಣಾಧಿಕಾರಿ ಸಿ.ಟಿ. ಶಿಲ್ಪನಾಗ್ ಆದೇಶ ಹೊರಡಿಸಿದ್ದಾರೆ.

ಶಾಸಕ ಎಆರ್‌ಕೆ ಅಪಾಯದಿಂದ ಪಾರು



ನಾಡನಹಳ್ಳಿ ಬಳಿ ಶಾಸಕ ಕೃಷ್ಣಮೂರ್ತಿ ಕಾರು ರಸ್ತೆಬದಿಯ ಬಂಡೆಗೆ ಡಿಕ್ಕಿ ಹೊಡಿರುವುದು.

ಚಾಮರಾಜನಗರ, ಏ.25– ಕೊಳ್ಳೇಗಾಲ ಶಾಸಕ ಎ.ಆರ್. ಕೃಷ್ಣಮೂರ್ತಿ ಪ್ರಯಾಣಿಸುತ್ತಿದ್ದ ಕಾರಿನ ಟೈರ್ ಸಿಡಿದು ಅಪಘಾತಕ್ಕೀಡಾಗಿರುವ ಘಟನೆ ಬುಧವಾರ ತಡರಾತ್ರಿ ಮೈಸೂರಿನ ಸಮೀಪ ನಡೆದಿದ್ದು, ಅದೃಷ್ಟವಶಾತ್ ಕಾರಿನಲ್ಲಿದ್ದವರಿಗೆ ಯಾವುದೇ ಅಪಾಯವಾಗಿಲ್ಲ.

ಶಾಸಕ ಎ.ಆರ್.ಕೃಷ್ಣಮೂರ್ತಿ ಹಾಗೂ ಅವರ ಆಪ್ತ ಸಹಾಯಕ ಚೇತನ್, ಚಾಲಕ ಸತೀಶ್ ಬುಧವಾರ ರಾತ್ರಿ ಕೊಳ್ಳೇಗಾಲದಿಂದ ಮೈಸೂರಿಗೆ ತಿ.ನರಸೀಪುರ ಮಾರ್ಗ ತೆರಳುತ್ತಿದ್ದರು. ನಾಡನಹಳ್ಳಿ ಬಳಿ ಕಾರಿನ ಟೈರ್ ಸಿಡಿದಿದೆ. ಆಗ ಕಾರು ಅಡ್ಡಾದಿಡ್ಡಿ ಚಲಿಸಿ ರಸ್ತೆಬದಿಯ ಹಳ್ಳಕ್ಕೆ ನುಗ್ಗಿ ಬಂಡೆಗಳಿಗೆ ಡಿಕ್ಕಿ ಹೊಡಿದೆ. ಬಂಡೆಗಳು ಇದ್ದುದರಿಂದ ಕಾರು ಉರುಳಿ ಬೀಳದಂತೆ ರಕ್ಷಣೆಯಾಗಿದೆ.

ಕಾರಿನಲ್ಲಿದ್ದ ಶಾಸಕ ಎ.ಆರ್. ಕೃಷ್ಣಮೂರ್ತಿ ಮತ್ತಿತರರು ಸುರಕ್ಷಿತವಾಗಿದ್ದಾರೆ. ಕಾರು ಎಆರ್‌ಕೆ ಅವರ ಪುತ್ರನ ಗೆಳೆಯನದ್ದಾಗಿದ್ದು, ಹಿಂದೆ ಎಆರ್‌ಕೆ ಅವರ ಕಾರು ಬರುತ್ತಿತ್ತು. ಘಟನೆಯ ನಂತರ ಅವರ ತಮ್ಮ ಕಾರಿನಲ್ಲಿ ಮೈಸೂರಿನ ಮನೆಗೆ ತೆರಳಿದರು.

ಘಟನೆ ಕುರಿತು ಪ್ರತಿಕ್ರಿಯಿಸಿದ ಶಾಸಕರು, ದೇವರ ದಯೆಯಿಂದ ಅಪಾಯದಿಂದ ಪಾರಾಗಿದ್ದೇವೆ. ನಾವೆಲ್ಲರೂ ಸುರಕ್ಷಿತವಾಗಿದ್ದೇವೆ ಎಂದು ತಿಳಿಸಿದ್ದಾರೆ.

ಆಕಸ್ಮಿಕ ಬೆಂಕಿಗೆ ಕಬ್ಬಿನ ಬೆಳೆ ನಾಶ

ಕೊಳ್ಳೇಗಾಲ, ಏ.25–ತಾಲೂಕಿನ ಸುರಾಪುರ ಸಮೀಪ ಆಕಸ್ಮಿಕ ಬೆಂಕಿ ತಗುಲಿ ಕಬ್ಬಿನ ಬೆಳೆ ಗುರುವಾರ ಸಂಪೂರ್ಣವಾಗಿ ಸುಟ್ಟು ನಾಶವಾಗಿದೆ.

ಬನ್ನಿಸಾರಿಗೆ ಗ್ರಾಮದ ರಾಚೇಗೌಡ ಎಂಬುವರ ಕಬ್ಬಿನ ಗದ್ದೆಗೆ ಗುರುವಾರ ಆಕಸ್ಮಿಕ ಬೆಂಕಿ ತಗುಲಿ 1 ಎಕರೆಗೂ ಹೆಚ್ಚಿನ ಬೆಳೆ ಹಾನಿಯಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಬರುವಷ್ಟರಲ್ಲಿ ಬೆಳೆ ಸುಟುಹೋಗಿದೆ.

ಸರ್ಕಾರ ಬೆಳೆ ಸಮೀಕ್ಷೆ ನಡೆಸಿ, ರೈತ ರಾಚೇಗೌಡಗೆ ಸೂಕ್ತ ಪರಿಹಾರ ನೀಡಬೇಕು ಎಂದು ರೈತ ಸಂಘದ ಮುಖಂಡರು ಒತ್ತಾಯಿಸಿದ್ದಾರೆ.



ಕೊಳ್ಳೇಗಾಲ ತಾಲೂಕಿನ ಬನ್ನಿಸಾರಿಗೆ ಗ್ರಾಮದ ರಾಚೇಗೌಡ ಅವರ ಕಬ್ಬಿನ ಬೆಳೆ ಬೆಂಕಿಗೆ ತುತ್ತಾಗಿರುವುದು.

ಪತ್ನಿ ಕೊಲೆ ಮಾಡಿದ ಪತಿಗೆ ಜೀವಾವಧಿ ಶಿಕ್ಷೆ

ಕೊಳ್ಳೇಗಾಲ, ಏ.25–ಪತ್ನಿಯ ಶೀಲ ಶಂಕಿಸಿ ಕೊಲೆ ಮಾಡಿದ ಪತಿಗೆ ಕೊಳ್ಳೇಗಾಲದ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ ಹಾಗೂ 10 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ಹನೂರು ತಾಲೂಕಿನ ಮಹದೇಶ್ವರಬೆಟ್ಟದ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಾದೇಶ ಶಿಕ್ಷೆಗೆ ಗುರಿಯಾಗಿದ್ದು, ಈತ ತನ್ನ ಪತ್ನಿ ಸಿದ್ದಮ್ಮನ ಶೀಲ ಶಂಕಿಸಿ 2020ರ ಅಕ್ಟೋಬರ್ 23ರಂದು ಮಾರಣಾಂತಿಕ ಹಲ್ಲೆ ನಡೆಸಿ ಕೊಲೆ ಮಾಡಿದ್ದ.

ಈ ಸಂಬಂಧ ಪೊಲೀಸರು ನ್ಯಾಯಾಲಯಕ್ಕೆ ಮಾದೇಶನ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಕೊಲೆ ಮಾಡಿರುವುದು ಸಾಬೀತಾದ ಹಿನ್ನೆಲೆಯಲ್ಲಿ ನ್ಯಾಯಾಧೀಶರಾದ ಎನ್.ಆರ್. ಲೋಕಪ್ಪ, ಜೀವಾವಧಿ ಶಿಕ್ಷೆ ಹಾಗೂ 10 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದರು.

ಸರ್ಕಾರಿ ಅಭಿಯೋಜಕ ಮಂಜುನಾಥ್ ಸರ್ಕಾರದ ಪರ ವಾದ ಮಂಡಿಸಿದ್ದರು.

ಕೊಳ್ಳೇಗಾಲದಲ್ಲಿ 53 ಸೂಕ್ಷ್ಮ ಮತಗಟ್ಟೆ

ಕೊಳ್ಳೇಗಾಲ, ಏ.25–ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡ ಅಧಿಕಾರಿಗಳು ಹಾಗೂ ಪೊಲೀಸ್ ಸಿಬ್ಬಂದಿ ಪಟ್ಟಣದ ಮಹದೇಶ್ವರ ಕಾಲೇಜಿನ ಮಸ್ಟರಿಂಗ್ ಕೇಂದ್ರದಿಂದ ಗುರುವಾರ ಮತಗಟ್ಟೆಗಳಿಗೆ ತೆರಳಿದರು.

ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 241 ಮತಗಟ್ಟೆಗಳಿದ್ದು, ಈ ಪೈಕಿ 53 ಸೂಕ್ಷ್ಮ ಮತಗಟ್ಟೆ ಎಂದು ಗುರುತಿಸಲಾಗಿದೆ. 124 ಬೂತ್‌ಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಸೂಕ್ಷ್ಮ ಮತಗಟ್ಟೆಗಳಿಗೆ 53 ಮೈಕ್ರೋ ವೀಕ್ಷಕರನ್ನು ನೇಮಿಸಲಾಗಿದೆ. 5 ಪಿಂಕ್, 2 ಯೂತ್, 2 ಅನ್ನದಾತ, 2 ಹಸಿರು ಸೇರಿದಂತೆ ವಿಶೇಷ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

ಮತದಾನ ವೇಳೆ ಭದ್ರತೆಗಾಗಿ ಮೂವರು ವೃತ್ತ ನಿರೀಕ್ಷಕರು, ಹತ್ತು ಪಿಎಸ್‌ಐ, 14 ಎಎಸ್‌ಐ, ಹೆಚ್‌ಸಿ ಮತ್ತು ಪಿಸಿಗಳು 193, 159 ಹೋಂಗಾರ್ಡ್, ಡಿಎಆರ್ 22, ಕೆಎಸ್‌ಆರ್‌ಪಿ 23, ಎಸ್‌ಎಪಿಎಫ್ 40 ಸೇರಿದಂತೆ 465 ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ ಎಂದು ಡಿವೈಎಸ್ಪಿ ಧರ್ಮೇಂದ್ರ ತಿಳಿಸಿದರು.



ಕೊಳ್ಳೇಗಾಲ ಮಹದೇಶ್ವರ ಕಾಲೇಜಿನ ಮಸ್ಟರಿಂಗ್ ಕೇಂದ್ರದಿಂದ ನಿಯೋಜನೆಗೊಂಡ ಮತಗಟ್ಟೆಗಳಿಗೆ ತೆರಳಿದ ಪೊಲೀಸ್ ಸಿಬ್ಬಂದಿ.

ಏ.28, 29ಕ್ಕೆ ರಾಜ್ಯದಲ್ಲಿ ಪ್ರಧಾನಿ ಮೋದಿ ಪ್ರಚಾರ



ಬೆಂಗಳೂರು, ಏ.25(ಕೆಎಂಶಿ)– ಪ್ರಧಾನಿ ನರೇಂದ್ರ ಮೋದಿ ಅವರು ಏಪ್ರಿಲ್ 28 ಮತ್ತು 29ರಂದು ರಾಜ್ಯದಲ್ಲಿ ಪಕ್ಷದ ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರ ಕೈಗೊಳ್ಳಲಿದ್ದಾರೆ. ಮೊದಲ ಹಂತದ 14 ಕ್ಷೇತ್ರಗಳ ವ್ಯಾಪ್ತಿಯಲ್ಲಿ ಎರಡು ದಿನ ಚುನಾವಣಾ ಪ್ರಚಾರ ಕೈಗೊಂಡ ಮೋದಿ, ಎರಡನೇ ಹಂತದಲ್ಲಿ ಸತತವಾಗಿ ಆರು ಬೃಹತ್ ಸಮಾವೇಶಗಳನ್ನು ಉದ್ದೇಶಿಸಿ ಮತ ಯಾಚಿಸಲಿದ್ದಾರೆ. ಲೋಕಸಭಾ ಚುನಾವಣಾ ಅಧಿಸೂಚನೆ ಹೊರಬೀಳುವುದಕ್ಕೂ ಮುನ್ನವೇ ಪ್ರಧಾನಿ ಅವರು ಶಿವಮೊಗ್ಗದಲ್ಲಿ ಬೃಹತ್ ಸಮಾವೇಶ ಉದ್ದೇಶಿಸಿ ಮಾತನಾಡಿದ್ದರು. ಏಪ್ರಿಲ್ 28ರಂದು ಬೆಳಗ್ಗೆ 10 ಗಂಟೆಗೆ ಬೆಳಗಾವಿ, ಮಧ್ಯಾಹ್ನ 12 ಗಂಟೆಗೆ ಶಿರಸಿ, 2 ಗಂಟೆಗೆ ದಾವಣಗೆರೆ, ಸಂಜೆ 4 ಗಂಟೆಗೆ ಬಳ್ಳಾರಿಯಲ್ಲಿ, ಮರುದಿನ ಬೆಳಗ್ಗೆ 11 ಗಂಟೆಗೆ ಬಾಗಲಕೋಟೆಯಲ್ಲಿ ಚುನಾವಣಾ ಪ್ರಚಾರ ನಡೆಸಲಿದ್ದಾರೆ. ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಮಾಜಿ ಉಪ ಮುಖ್ಯಮಂತ್ರಿ ಶ್ರೀರಾಮುಲು, ಮಾಜಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಸಂಸದ ಪಿ.ಸಿ.ಗದ್ದಿಗೌಡರ್, ಸಂಸದ ಸಿದ್ದೇಶ್ವರ್ ಅವರ ಪತ್ನಿ ಗಾಯತ್ರಿ ಸಿದ್ದೇಶ್ವರ್ ಕಣಕ್ಕಿಳಿದಿರುವ ಕ್ಷೇತ್ರಗಳಲ್ಲಿ ಪ್ರಧಾನಿ ಮೋದಿ ಚುನಾವಣಾ ಪ್ರಚಾರ ಮಾಡಲಿದ್ದಾರೆ.

ರಾಹುಲ್ ಗಾಂಧಿ ಮೇ 2ಕ್ಕೆ ಅಮೇಠಿಯಿಂದ ನಾಮಪತ್ರ ಸಲ್ಲಿಕೆ



ನವದೆಹಲಿ, ಏ.25– ಎಐಸಿಸಿ ನಾಯಕ ರಾಹುಲ್ ಗಾಂಧಿ ಮೇ. 2ರಂದು ಅಮೇಠಿಯಿಂದ ನಾಮಪತ್ರ ಸಲ್ಲಿಸುವುದು ಬಹುತೇಕ ಖಚಿತವಾಗಿದೆ. ಅಮೇಠಿ ಜಿಲ್ಲಾ ಕಾಂಗ್ರೆಸ್ ನಾಯಕರಿಗೆ ರಾಹುಲ್ ಗಾಂಧಿ ಪರ ಪ್ರಚಾರ ಮಾಡುವಂತೆ ಸೂಚಿಸಿದೆ. ಜಿಲ್ಲಾ ನಾಯಕರು ಈಗಾಗಲೇ ಪ್ರಚಾರ ಕಾರ್ಯ ಆರಂಭಿಸಿದ್ದಾರೆ. ಈ ಕುರಿತು ಅಮೇಠಿ ಯೂಥ್ ಕಾಂಗ್ರೆಸ್ ಅಧ್ಯಕ್ಷ ಶುಭಮ್ ಸಿಂಗ್ ಪ್ರತಿಕ್ರಿಯೆ ನೀಡಿದ್ದು, ಮೇ 2ರಂದು ರಾಹುಲ್ ಗಾಂಧಿ ಅಮೇಠಿಯಿಂದ ನಾಮಪತ್ರ ಸಲ್ಲಿಸುತ್ತಿದ್ದಾರೆ. ಜಿಲ್ಲಾ ನಾಯಕರಿಗೆ ಪ್ರಚಾರಕ್ಕೆ ಸೂಚಿಸಲಾಗಿದೆ. ನಾವು ಎಲ್ಲಾ ತಯಾರಿ ಮಾಡಿಕೊಂಡಿದ್ದೇವೆ ಎಂದಿದ್ದಾರೆ.

ಅಮೇಠಿ ರಾಹುಲ್ ಗಾಂಧಿಯ ಮೊದಲ ಆಯ್ಕೆಯಾದರೆ ವಯನಾಡು ಎರಡನೇ ಆಯ್ಕೆಯಾಗಿದೆ. ಆದರೆ 2019ರ ಲೋಕಸಭಾ ಚುನಾವಣೆಯಲ್ಲಿ ರಾಹುಲ್ ಗಾಂಧಿ ಅಮೇಠಿಯಲ್ಲಿ ಸೋಲು ಕಂಡಿದ್ದರೆ, ವಯನಾಡಿನಲ್ಲಿ ಭರ್ಜರಿ ಗೆಲುವು ದಾಖಲಿಸಿ, ಲೋಕಸಭೆಗೆ ಆಯ್ಕೆಯಾಗಿದ್ದರು. ಇದೀಗ ರಾಹುಲ್ ಗಾಂಧಿ ವಯನಾಡು ಕ್ಷೇತ್ರವನ್ನು, ಅಲ್ಲಿನ ಮತದಾರರನ್ನು ನಿರ್ಲಕ್ಷಿಸುತ್ತಿದ್ದಾರೆ. ರಾಹುಲ್‌ಗಾಂಧಿ ಅಮೇಠಿಯಿಂದ ಗೆದ್ದರೆ ವಯನಾಡು ಕ್ಷೇತ್ರ ತೊರೆಯಲಿದ್ದಾರೆ ಎಂದು ಬಿಜೆಪಿ ಸಾಮಾಜಿಕ ಮಾಧ್ಯಮ ಮ್ಯಾನೇಜರ್, ನಾಯಕ ಅಮಿತ್ ಮಾಳವಿಯಾ ಆರೋಪಿಸಿದ್ದಾರೆ. ಕಳೆದ ಬಾರಿ ವಯನಾಡು ಕ್ಷೇತ್ರದಲ್ಲಿ ರಾಹುಲ್ ಗಾಂಧಿಗೆ ಯಾವುದೇ ಪ್ರತಿಸ್ಪರ್ಧಿಗಳಿರಲಿಲ್ಲ. ಆದರೆ ಈ ಬಾರಿ ಪ್ರಬಲ ಪ್ರತಿಸ್ಪರ್ಧಿಗಳನ್ನು ರಾಹುಲ್ ಗಾಂಧಿ ಎದುರಿಸಬೇಕಿದೆ. ಸಿಪಿಐ ಅಭ್ಯರ್ಥಿ ಅನ್ನಿ ರಾಜ ಕೇರಳದ ರಾಜಕೀಯದಲ್ಲಿ ಜನಪ್ರಿಯ ನಾಯಕರಾಗಿದ್ದಾರೆ. ಹೀಗಾಗಿ ರಾಹುಲ್ ಗಾಂಧಿಗೆ ಈ ಬಾರಿ ಸಿಪಿಐ ನಾಯಕ ಪ್ರಬಲ ಪ್ರತಿಸ್ಪರ್ಧೆ ಒಡ್ಡಲಿದ್ದಾರೆ. ಇದರ ಜೊತೆಗೆ ಬಿಜೆಪಿ ಕೇರಳ ರಾಜ್ಯಾಧ್ಯಕ್ಷ ಕೆ.ಸುರೇಂದ್ರನ್ ಕೂಡ ಕಣದಲ್ಲಿದ್ದಾರೆ. ಹೀಗಾಗಿ ತ್ರಿಕೋನ ಸ್ಪರ್ಧೆಯಲ್ಲಿ ರಾಹುಲ್ ಗಾಂಧಿಗೆ ಗೆಲುವು ಕಷ್ಟ ಎಂಬ ಮಾತುಗಳು ಕೇಳಿ ಬರುತ್ತಿದೆ.

ಒಂದನೇ ಪುಟದಿಂದ

ಇಂದು ಮತದಾನ

ಗ್ರಾಮಾಂತರದಲ್ಲಿ ಹೃದಯ ತಜ್ಞ ಡಾ. ಮಂಜುನಾಥ್ ಅವರನ್ನು ಕಣಕ್ಕಿಳಿಸಿದೆ.

ಈ ಎರಡೂ ಕ್ಷೇತ್ರಗಳು ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳಿಗೆ ಪ್ರತಿಷ್ಠೆಯಾಗಿವೆ. ಹಾಗಾಗಿಯೇ ಬಿಜೆಪಿಯೂ ಪ್ರತಿಷ್ಠೆಯಾಗಿ ಪರಿಣಮಿಸಿದೆ. ಹೀಗಾಗಿ ರಾಜಕೀಯ ಗಂಧ–ಗಾಳಿ ಅರಿಯದ ಸಮಾಜ ಸೇವೆಯಲ್ಲಿರುವ ಅವರನ್ನು ಕರೆತಂದು ಕಣಕ್ಕಿಳಿಸಿದೆ. ಬಿಜೆಪಿಯ ಈ ಹೊಸ ಪ್ರಯೋಗಕ್ಕೆ ನಾಳೆ ಮತದಾರರು ಯಾವ ರೀತಿ ಸ್ಪಂದಿಸುತ್ತಾರೋ ಕಾದು ನೋಡಬೇಕು. ರಾಜ್ಯ ರಾಜಕೀಯದಲ್ಲಿ ಇದ್ದ ಕುಮಾರಸ್ವಾಮಿ, ಕೇಂದ್ರ ರಾಜಕಾರಣಕ್ಕೆ ತೆರಳಲು ಮಂಡ್ಯ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿದಿದ್ದಾರೆ.

ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕ ಆರ್.ಕೋಟ ಶ್ರೀನಿವಾಸ ಪೂಜಾರಿ ಬಿಜೆಪಿಯಿಂದ ಉಡುಪಿ–ಚಿಕ್ಕಮಗಳೂರಿನಿಂದ ಕಣಕ್ಕಿಳಿದಿದ್ದು ಅವರ ವಿರುದ್ಧ ಕಾಂಗ್ರೆಸ್‌ನಿಂದ ಮಾಜಿ ಸಂಸದ ಜಯಪ್ರಕಾಶ್ ಹೆಗಡೆ ಮತ್ತೆ ಅದೃಷ್ಟ ಪರೀಕ್ಷೆ ಮಾಡುತ್ತಿದ್ದಾರೆ.

ಇನ್ನು ದಕ್ಷಿಣ ಕನ್ನಡ ಕ್ಷೇತ್ರದಲ್ಲಿ ಬಿಜೆಪಿ ಸೇನೆಯಲ್ಲಿ ಸೇವೆ ಸಲ್ಲಿಸಿರುವ ಬ್ರಿಜೇಶ್ ಚೌಟ ಅವರನ್ನು ಕಣಕ್ಕಿಳಿಸಿ ಹೊಸ ಪ್ರಯೋಗ ಮಾಡಿದ್ದರೆ, ಅವರ ಪ್ರತಿಸ್ಪರ್ಧಿಯಾಗಿ ಕಾಂಗ್ರೆಸ್‌ನಿಂದ ಪದ್ಮರಾಜ್ ಕಣದಲ್ಲಿದ್ದಾರೆ. ಶಿಕ್ಷಣ ಕ್ಷೇತ್ರ ಮತ್ತು ಬೃಹತ್ ಉದ್ಯಮಿ ಎಂ.ಆರ್.ಸೀತಾರಾಂ ಪುತ್ರ ರಕ್ಷಾರಾಮಯ್ಯ ಅವರನ್ನು ಕಾಂಗ್ರೆಸ್ ಚಿಕ್ಕಬಳ್ಳಾಪುರದಿಂದ ಕಣಕ್ಕಿಳಿಸಿದ್ದು, ಅವರ ಪ್ರತಿಸ್ಪರ್ಧಿಯಾಗಿ ಮಾಜಿ ಆರೋಗ್ಯ ಸಚಿವ ಡಾ. ಕೆ.ಸುಧಾಕರ್ ಬಿಜೆಪಿಯಿಂದ ಕಣಕ್ಕಿಳಿದಿದ್ದಾರೆ.

ಉಡುಪಿ–ಚಿಕ್ಕಮಗಳೂರು ಪ್ರತಿನಿಧಿಸುತ್ತಿದ್ದ ಶೋಭಾ ಕರಂದ್ಲಾಜೆ ಬೆಂಗಳೂರು ಉತ್ತರದಲ್ಲಿ ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದಾರೆ. ಇವರ ಎದುರು ಐಐಎಂನ ಪ್ರೊ.ರಾಜೀವ್‌ಗೌಡ ಕಾಂಗ್ರೆಸ್ ಅಭ್ಯರ್ಥಿ. ಮಾಜಿ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ವಿಜಯಪುರದಿಂದ ಬಂದು ಚಿತ್ರದುರ್ಗ ಮೀಸಲು ಕ್ಷೇತ್ರದಲ್ಲಿ ಕಣಕ್ಕಿಳಿದಿದ್ದಾರೆ.

ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ತಮ್ಮ ಪುತ್ರ ಸುನೀಲ್ ಬೋಸ್ ಅವರನ್ನು ಚಾಮರಾಜನಗರ ಮೀಸಲು ಕ್ಷೇತ್ರದಿಂದ ಅದೃಷ್ಟ ಪರೀಕ್ಷೆಗೆ ಇಳಿಸಿದ್ದಾರೆ. ವಿಶೇಷವೆಂದರೆ ಸಿದ್ದರಾಮಯ್ಯ ಪ್ರತಿನಿಧಿಸುವ ವರುಣಾ ಕ್ಷೇತ್ರವು ಮೈಸೂರು ಜಿಲ್ಲೆಯಲ್ಲಿದ್ದರೂ, ಚಾಮರಾಜನಗರ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಆದ್ದರಿಂದ ಮುಖ್ಯಮಂತ್ರಿ ಅವರಿಗೆ ಈ ಕ್ಷೇತ್ರವೂ ಪ್ರತಿಷ್ಠೆಯಾಗಿದೆ. ಬೆಂಗಳೂರು ಗ್ರಾಮಾಂತರದಲ್ಲಿ ಶಿವಕುಮಾರ್ ತಮ್ಮ ಸಹೋದರ ಸುರೇಶ್ ಅವರನ್ನು ನಾಲ್ಕನೇ ಬಾರಿಗೆ ಮರು ಆಯ್ಕೆ ಬಯಸಿ ಕಣಕ್ಕಿಳಿಸಿದ್ದಾರೆ. ಕಳೆದ ಚುನಾವಣೆಯಲ್ಲಿ ಈ ಕ್ಷೇತ್ರ ಹೊರತುಪಡಿಸಿ ಕಾಂಗ್ರೆಸ್ ಎಲ್ಲಿಯೂ ತೆರೆದಿರಲಿಲ್ಲ. ಆದ್ದರಿಂದ ಬಿಜೆಪಿ ಈ ಕ್ಷೇತ್ರವನ್ನು ವಶಪಡಿಸಿಕೊಳ್ಳಲು ಹೊಸ ಪ್ರಯೋಗ ನಡೆಸಿದೆ.

ಇದೇ ಮೊದಲ ಬಾರಿಗೆ ಬಿಜೆಪಿ ಮತ್ತು ಜೆಡಿಎಸ್ ಒಂದಾಗಿ ಆಡಳಿತಾರೂಢ ಕಾಂಗ್ರೆಸ್ ಅನ್ನು ನೇರ ಹಣಾಹಣಿಯಲ್ಲಿ ಎದುರಿಸುತ್ತಿವೆ. ಈ ಮೈತ್ರಿಗೆ ಮತದಾರರು ಯಾವ ರೀತಿ ಸ್ಪಂದಿಸುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.

ಹದಿನಾಲ್ಕು ಕ್ಷೇತ್ರಗಳಲ್ಲೂ ಮೇಲ್ನೋಟಕ್ಕೆ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳ ನಡುವೆಯೇ ನೇರ ಹಣಾಹಣಿ ನಡೆದಿದೆ, ಇವರಲ್ಲಿ ಮತದಾರರ ಒಲವು ಯಾರ ಕಡೆ ಇದೆ ಎಂಬುದು ನಾಳೆ ನಿರ್ಧಾರವಾಗಲಿದೆ. ಈ ಕ್ಷೇತ್ರಗಳಿಗೆ ಏಪ್ರಿಲ್ 26ರಂದು ಮತದಾನ ನಡೆದರೂ ಜೂನ್ 4ರವರೆಗೆ ಫಲಿತಾಂಶಕ್ಕೆ ಕಾಯಬೇಕಿದೆ.

ಸಾರ್ವತ್ರಿಕ ಲೋಕಸಭಾ ಚುನಾವಣೆ–2024

ಕ್ಷೇತ್ರಗಳು	ಬಿಜೆಪಿ/ಜೆಡಿಎಸ್	ಕಾಂಗ್ರೆಸ್
ಮೈಸೂರು	ಯದುವೀರ್ ಒಡೆಯರ್	ಎಂ.ಲಕ್ಷ್ಮಣ
ಚಾಮರಾಜನಗರ	ಎಸ್.ಬಾಲರಾಜ್	ಸುನೀಲ್ ಬೋಸ್
ಮಂಡ್ಯ	ಎಚ್.ಡಿ.ಕುಮಾರಸ್ವಾಮಿ (ಜೆಡಿಎಸ್)	ವೆಂಕಟರಮಣೇಗೌಡ
ಹಾಸನ	ಪ್ರಜ್ವಲ್ ರೇವಣ್ಣ(ಜೆಡಿಎಸ್)	ಶ್ರೇಯಸ್ ಪಟೇಲ್‌ಗೌಡ
ಉಡುಪಿ–ಚಿಕ್ಕಮಗಳೂರು	ಕೋಟಾ ಶ್ರೀನಿವಾಸ ಪೂಜಾರಿ	ಜಯಪ್ರಕಾಶ್ ಹೆಗ್ಡೆ
ದಕ್ಷಿಣ ಕನ್ನಡ	ಬ್ರಿಜೇಶ್ ಚೌಟ	ಪದ್ಮರಾಜ್
ಚಿತ್ರದುರ್ಗ	ಗೋವಿಂದ ಕಾರಜೋಳ	ಬಿ.ಎನ್.ಚಂದ್ರಪ್ಪ
ತುಮಕೂರು	ವಿ.ಸೋಮಣ್ಣ	ಎಸ್.ಪಿ.ಮುದ್ದಹನುಮೇಗೌಡ
ಬೆಂಗಳೂರು ಗ್ರಾ.	ಡಾ.ಸಿ.ಎನ್.ಮಂಜುನಾಥ್	ಡಿ.ಕೆ.ಸುರೇಶ್
ಬೆಂಗಳೂರು ಉತ್ತರ	ಶೋಭಾ ಕರಂದ್ಲಾಜೆ	ರಾಜೀವ್‌ಗೌಡ
ಬೆಂಗಳೂರು ಕೇಂದ್ರ	ಪಿ.ಸಿ.ಮೋಹನ್	ಮನ್ಸೂರ್ ಅಲಿಖಾನ್
ಬೆಂಗಳೂರು ದಕ್ಷಿಣ	ತೇಜಸ್ವಿ ಸೂರ್ಯ	ಸೌಮ್ಯ ರೆಡ್ಡಿ
ಚಿಕ್ಕಬಳ್ಳಾಪುರ	ಡಾ.ಕೆ.ಸುಧಾಕರ್	ರಕ್ಷಾರಾಮಯ್ಯ
ಕೋಲಾರ	ಎಂ.ಮಲ್ಲೇಶ್ ಬಾಬು	ಕೆ.ವಿ.ಗೌತಮ್

ಸದ್ಯದ ದುಸ್ಥಿತಿಗೆ ವಿಷಾದ ವ್ಯಕ್ತಪಡಿಸುವ ಜೊತೆಗೆ ಪರಿಹಾರ ಸೂಚಿಸುವ

ಸಾಹಿತಿ ದೇವನೂರ ಮಹಾದೇವ ಲೋಕ ಸಂವಾದಿ

●ಹಿರಿಯ ಸಾಹಿತಿ ಕೃಷ್ಣಮೂರ್ತಿ ಹನೂರು ಬಣ್ಣನೆ ●'ದೇವನೂರ ಮಹಾದೇವ ಜೊತೆ ಮಾತುಕತೆ' ಪುಸ್ತಕ ಬಿಡುಗಡೆ



ಮೈಸೂರಿನಲ್ಲಿ 'ದೇವನೂರ ಮಹಾದೇವ ಜೊತೆ ಮಾತುಕತೆ' ಪುಸ್ತಕವನ್ನು ಗುರುವಾರ ಬಿಡುಗಡೆ ಮಾಡಲಾಯಿತು.

ಮೈಸೂರು,ಏ.25(ಪಿಎಂ)– ಹಿರಿಯ ಸಾಹಿತಿ ದೇವನೂರ ಮಹಾದೇವ ಅವರ ಮಾತುಗಳಲ್ಲಿ ಕಥೆ, ವಿಚಾರಗಳೂ ಇರಲಿದ್ದು, ಸದ್ಯದ ದುಸ್ಥಿತಿ ಬಗ್ಗೆ ವಿಷಾದವೂ ವ್ಯಕ್ತವಾಗುವ ಜೊತೆಗೆ ಆ ಎಲ್ಲದಕ್ಕೂ ಪರಿಹಾರ ಸಹ ಇರುತ್ತದೆ. ಅವರೊಬ್ಬ ಲೋಕ ಸಂವಾದಿ ಎಂದು ಹಿರಿಯ ಸಾಹಿತಿ ಕೃಷ್ಣಮೂರ್ತಿ ಹನೂರು ಹೇಳಿದರು.

ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿರುವ ನವಕರ್ನಾಟಕ ಪಬ್ಲಿಕೇಷನ್ ಪುಸ್ತಕ ಮಳಿಗೆಯಲ್ಲಿ ಅಭಿರುಚಿ ಪ್ರಕಾಶನದ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ 'ದೇವನೂರ ಮಹಾದೇವ ಜೊತೆ ಮಾತುಕತೆ (ಆಯ್ದ ಸಂದರ್ಶನಗಳ ಸಂಕಲನ)' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಕಳೆದ 30 ವರ್ಷಗಳಿಂದ ದೇವನೂರ ಮಹಾದೇವ ಅವರೊಂದಿಗೆ ಸಂವಾದ ಮಾಡುತ್ತಲೇ ಬರುತ್ತಿದ್ದೇನೆ. ಈ ಮಾತುಕತೆ ಪುಸ್ತಕದ ಹಿನ್ನೆಲೆಯಲ್ಲಿ ಅವರನ್ನು ಲೋಕ ಸಂವಾದಿ ಎಂತಲೂ ಕರೆಯಬಹುದು. ದೇವನೂರ ಮಹಾದೇವ ಅವರ ಮಾತುಗಳಲ್ಲಿ ಕಥೆಗಳು ಇರುತ್ತವೆ. ಆ ಕಥೆಗಳಲ್ಲಿ ವಿಚಾರಗಳು ಅಡಕವಾಗಿರುತ್ತವೆ. ಆ ವಿಚಾರಗಳ ಜೊತೆಗೆ ಸದ್ಯದ ಸ್ಥಿತಿಗೆ ವಿಷಾದವೂ ವ್ಯಕ್ತವಾಗಿ ಎಲ್ಲದಕ್ಕೂ ಪರಿಹಾರ ಸಹ ಇರುತ್ತದೆ ಎಂದು ಹೇಳಿದರು.

ದೇವನೂರ ಮಹಾದೇವ ಅವರು ಯಾವ ಮತ ಧರ್ಮಕ್ಕೂ ಸೇರದವರು. ಆದರೆ ಎಲ್ಲಾ ಮತ ಧರ್ಮಕ್ಕೂ ಸಲ್ಲುತ್ತಾರೆ. ಪುಸ್ತಕದಲ್ಲಿ ಈ ವಿಚಾರಕ್ಕೆ ದಾಖಲೆ ಸಹ ಇದೆ. ನಾವು ಚಿಕ್ಕವರಿದ್ದಾಗ ಬುಡಕಟ್ಟು ಗುಣಲಕ್ಷಣ ಹೊಂದಿ, ಬೆಳೆಯುತ್ತಲೇ ಮತಾಂತರ ಹರಡಿ, ಕೊನೆಯಲ್ಲಿ ವೈರಾಗಿಗಳಾಗಿ ಜೈನರಾಗುತ್ತೇವೆ ಎನ್ನುವ ದೇವನೂರರ ಮಾತುಗಳು ಅದ್ಭುತ, ಅರ್ಥಪೂರ್ಣವೂ ಆಗಿವೆ ಎಂದರು.

ಈ ಪುಸ್ತಕದಲ್ಲಿ ರವೀಂದ್ರ ರೇಶ್ಮೆ ಅವರ ಸಂದರ್ಶನವು ಬಹಳ ಅದ್ಭುತವಾಗಿದೆ. ಅಲ್ಲಿ ನನಗೆ ಬಹಳ ಪ್ರಿಯರಾದ ಬೆಳಗೆರೆ ಕೃಷ್ಣಶಾಸ್ತ್ರಿ ಹೆಸರು ಪ್ರಸ್ತಾಪವಾಗಿದೆ. ಕೃಷ್ಣಶಾಸ್ತ್ರಿಗಳು ಮಹಾದೇವರನ್ನು ಭೇಟಿ ಮಾಡಬೇಕೆಂದು ನನ್ನೊಂದಿಗೆ ಹೇಳುತ್ತಿದ್ದರು. ನಾನು 1973ರಲ್ಲಿ ಚಿತ್ರದುರ್ಗದಲ್ಲಿ ಇದ್ದಾಗ ಅವರ ಗುಡಿಸಲಿಗೆ ಹೋಗುತ್ತಿದ್ದೆ. ಆಗ ಅವರು ಮಹಾದೇವರನ್ನು ಭೇಟಿ ಮಾಡಬೇಕು ಎನ್ನುತ್ತಿದ್ದರು. ಬೆಳಗೆರೆ ಕೃಷ್ಣಶಾಸ್ತ್ರಿ ಅವರು ಜಾತ್ಯಾತೀತವಾದಿ, ಮಾನವತಾವಾದಿಯೂ ಆಗಿದ್ದರು. ರೇಶ್ಮೆ ಅವರ ಸಂದರ್ಶನದಲ್ಲಿ ದೇವನೂರರು ಅವರ ಬಗ್ಗೆ ಮಾತನಾಡಿದ್ದಾರೆ. ಬೆಳಗೆರೆ ಕೃಷ್ಣಶಾಸ್ತ್ರಿ ಅವರಂತಹ ಮೇರು ವ್ಯಕ್ತಿತ್ವದವರ ಸಂಖ್ಯೆ ಇಂದು ಕಡಿಮೆಯಾಗುತ್ತಿದೆಯೋ ಏನೂ ಎಂದು ಬೇಸರ ವ್ಯಕ್ತಪಡಿಸಿದರು.

ಹಟ್ಟಿಯ ಜಗಲಿ ಮೇಲೆ ಕುಳಿತು: ನಿನ್ನೆಯಿಂದ ಇವತ್ತಿನವರೆಗೆ ಈ ಮಾತುಕತೆ ಪುಸ್ತಕ ಓದುವಾಗ ಬೆಳಗೆರೆ ಕೃಷ್ಣಶಾಸ್ತ್ರಿ, ಸಿರಿಯಜ್ಜಿ ಹಾಗೂ ದೇವನೂರ ಮಹಾದೇವ ಮೂವರು ಚಿತ್ರದುರ್ಗದ ಯಾವುದೋ ಹಟ್ಟಿಯ ಜಗಲಿ ಮೇಲೆ ಕುಳಿತು ಮಾತನಾಡಿದಂತೆ ನನಗೆ ಭಾಸವಾಯಿತು. ಸಿರಿಯಜ್ಜಿ ಮತ್ತು ಬೆಳಗೆರೆ ಕೃಷ್ಣಶಾಸ್ತ್ರಿಯವರ ಮನೆಯಲ್ಲಿ ಒಂದು ಪುಸ್ತಕ ಇರಲಿಲ್ಲ. ಅವರ ಆಸ್ತಿಯೆಂದರೆ ಮೂರು ಗುಡಿಸಲುಗಳು. ಆದರೆ ಇಡೀ ಲೋಕದ ವಿಚಾರಗಳನ್ನೆಲ್ಲಾ ಇವರು ಮಾತನಾಡುತ್ತಿದ್ದರು ಎಂದರು.

ನಮ್ಮ ಗ್ರಾಮಗಳಿಗೆ ಇನ್ನೂ ಜೀವವಿದೆ: ಈ ಪುಸ್ತಕದಲ್ಲಿ ಈ ದೇಶವನ್ನು ಎತ್ತ ಕೊಂಡೊಯ್ಯುತ್ತಿದ್ದೇವೆ, ನಾಳೆಗೆ ನಾವು ಏನನ್ನು ಉಳಿಸುತ್ತಿದ್ದೇವೆ ಎಂಬ ಆತಂಕ ವ್ಯಕ್ತವಾಗಿದೆ. ಅಭಿವೃದ್ಧಿ ಎನ್ನುವ ಬಗ್ಗೆಯೂ ಇಲ್ಲಿ ಆತಂಕದ ಮಾತುಗಳು ಕೇಳಿ ಬಂದಿವೆ. ಗ್ರಾಮಗಳ ಬಗ್ಗೆ ಮಹಾದೇವ ಅವರಿಗೆ ಬಹಳ ಭರವಸೆ ಇರುವಂತೆ ಇಲ್ಲಿ ಕಾಣುತ್ತದೆ. ನಮ್ಮ ಗ್ರಾಮಗಳಿಗೆ ಇನ್ನೂ ಜೀವವಿದ್ದು, ಇಂದಿನ ಈ ದುರ್ಬಲ ರಾಜಕಾರಣ ವ್ಯವಸ್ಥೆಯಲ್ಲಿ ನಮ್ಮ ಗ್ರಾಮಗಳನ್ನು ಇನ್ನೊಂದು ದಿಕ್ಕಿನಲ್ಲಿ ಕೊಂಡೊಯ್ಯುವ ಜನ ಬೇಕಾಗಿದ್ದಾರೆ. ಅದಕ್ಕೆಲ್ಲಾ ಮಾರ್ಗೋಪಾಯಗಳು ಈ ಪುಸ್ತಕದಲ್ಲಿರುವ ಮಹಾದೇವರ ಮಾತುಗಳಲ್ಲಿ ದೊರೆಯಲಿವೆ. ವಚನ ನನಗೆ ಹಳೆಯದಲ್ಲ ಎನ್ನುತ್ತಾರೆ ಮಹಾದೇವ. ಅದು ನಿಜ. ಅಲ್ಲಮ ಪ್ರಭುಗಳ ವಚನವನ್ನು ಹಳೆಯದು, ಅಪ್ರಸ್ತುತ ಎನ್ನಲು ಸಾಧ್ಯವೇ? ಇಂದಿಗೂ ಅವರ ವಚನ ಅನ್ವಯಿಸುತ್ತದೆ ಎಂದು ತಿಳಿಸಿದರು.

ನೀವೇನಾಗಬೇಕೆಂದು ಸಂದರ್ಶಕರು ಕೇಳಿದರೆ ಅದಕ್ಕೆ ಮಹಾದೇವ, ನಾನು ನನ್ನ ಮಗಳಾಗಬೇಕು ಎಂದಿದ್ದಾರೆ. ಮಗಳಾಗದೇ ಹೋದರೆ ಬಹಳ ಕಷ್ಟವಿದೆ. ಆ ಮಗಳು ಸೊಸೆಯಾಗುತ್ತಾಳೆ, ತಾಯಿಯಾಗುತ್ತಾಳೆ, ಮನೆಯವರನ್ನೆಲ್ಲಾ ಸಾಕಿ ಸಲಹುತ್ತಾಳೆ. ಆ ತರದ ತಾಯ್ತನದ ಮಗಳು ಬರಬೇಕಾಗಿದೆ. ಒಂದು ವೇಳೆ ಮಗಳಾಗದೇ ನಾವೆಲ್ಲಾ ಪುರುಷರು, ಗಂಡಸರೇ ಆಗಿಬಿಟ್ಟರೆ ಬಹಳ ಕಷ್ಟವಿದೆ. ಗಂಡಸ್ತನ ಎಂಬುದು ಇತಿಹಾಸದಲ್ಲಿ ಯುದ್ಧಗಳನ್ನು ನೆರವೇರಿಸಿದೆ. ಅವರವರ ಪರಾಕ್ರಮ ತೋರಿಸಲು ಯುದ್ಧ ಮಾಡಿ, ಅವರವರ ಕಿರೀಟ ದೊಡ್ಡದ್ದೂ ಮಾಡಿಕೊಂಡರು. ಆದರೆ ಸತ್ತ ಸೈನಿಕರ ಹೆಂಡತಿಯರು, ಮಕ್ಕಳು ಏನಾದರೆಂಬ ಲೆಕ್ಕಾಚಾರವನ್ನು ಈಗಲಾದರೂ ಹಾಕಬೇಕಲ್ಲವೇ? ನಾವು ಕೇವಲ ವಿಜಯದ ಬಗ್ಗೆ ಮಾತನಾಡುತ್ತೇವೆ. ಆದರೆ ಅಲ್ಲಾದ ಸೋಲೇನು ಎಂಬ ಬಗ್ಗೆ ನಾವು ಮಾತನಾಡುವುದಿಲ್ಲ ಎಂದು ಮಾರ್ಮಿಕವಾಗಿ ನುಡಿದರು.

ನಿವೃತ್ತ ಮೇಜರ್ ಜನರಲ್ ಸುಧೀರ್ ಒಂಬತ್ಕೆರೆ, ನಿವೃತ್ತ ಪ್ರಾಧ್ಯಾಪಕಿ ಹೆಚ್.ಜೆ. ಸರಸ್ವತಿ, ಮೈಸೂರು ರಂಗಾಯಣ ಮಾಜಿ ನಿರ್ದೇಶಕ ಸಿ.ಬಸವಲಿಂಗಯ್ಯ, ಬಹುಭಾಷ ನಟ ಪ್ರಕಾಶ್ ರಾಜ್ (ಪ್ರಕಾಶ್ ರೈ), ವಿಮರ್ಶಕ ಓ.ಎಲ್.ನಾಗಭೂಷಣಸ್ವಾಮಿ, ನಿವೃತ್ತ ಅಧಿಕಾರಿ ಡಾ.ಎಸ್.ತುಕಾರಾಂ, ವನ್ಯಜೀವಿ ತಜ್ಞರಾದ ಕೃಪಾಕರ–ಸೇನಾನಿ, ದೇವನೂರ ಮಹಾದೇವ ಅವರ ಪತ್ನಿ ಸುಮಿತ್ರಬಾಯಿ, ಅಭಿರುಚಿ ಪ್ರಕಾಶನ ಅಭಿರುಚಿ ಗಣೇಶ್ ಮತ್ತಿತರರು ಹಾಜರಿದ್ದರು.

'ಕುಸುಮಬಾಲೆ' ಮಲೆಗಳಲ್ಲಿ ಮದುಮಗಳ ಮೊಮ್ಮಗಳ ತರವಿದೆ ಎಂದಿರುವುದಿಷ್ಟ ; ದೇವನೂರ ಮಹಾದೇವ

ಮೈಸೂರು,ಏ.25(ಪಿಎಂ)– ಕುಸುಮಬಾಲೆ ಕಾದಂಬರಿ ಬಗ್ಗೆ ವಿಮರ್ಶಕರೊಬ್ಬರು ಮಲೆಗಳಲ್ಲಿ ಮದುಮಗಳ ಮೊಮ್ಮಗಳ ತರ ಇದೆ ಎಂದು ಹೇಳಿದ್ದರು. ಇದು ನನಗಿಷ್ಟ ಎಂದು ಹಿರಿಯ ಸಾಹಿತಿ ದೇವನೂರ ಮಹಾದೇವ ಹೇಳಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಧ್ಯಾಪಕಿ ಹೆಚ್.ಜೆ.ಸರಸ್ವತಿ, ವಿಮರ್ಶಕರೊಬ್ಬರು ತಮ್ಮನ್ನು ಕುವೆಂಪು ಅವರ ಉತ್ತರಾಧಿಕಾರಿ ಎಂದು ಪದೇ ಪದೆ ಹೇಳಿದ್ದಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು? ಎಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ದೇವನೂರ ಮಹಾದೇವ, ಅದು ಅವರವರ ಭಾವಕ್ಕೆ ಬಿಟ್ಟಿದ್ದು. ಕುಸುಮಬಾಲೆಯ ಬಗ್ಗೆ ಬಂದಿರುವ ವಿಮರ್ಶೆಗಳಲ್ಲಿ ನಿಮಗೆ ಯಾವುದು ಇಷ್ಟವೆಂದು ಸಂದರ್ಶಕರು ನನ್ನನ್ನು ಕೇಳಿದಾಗ, ಮಲೆಗಳಲ್ಲಿ ಮದುಮಗಳ ಮೊಮ್ಮಗಳ ತರ ಇದೆ ಎಂದು ವಿಮರ್ಶೆ ಬಂದಿರುವುದು ನನಗೆ ಇಷ್ಟ ಎಂದು ಹೇಳಿದ್ದೆ ಎಂದರು.

ನನಗೆ ಕುವೆಂಪು ಪ್ರಶಸ್ತಿ ಬಂದಾಗ, ಕುವೆಂಪು ಫೋಟೋ ನನ್ನನ್ನು ನೋಡುತ್ತಿರಲಿಲ್ಲ. ನಟರಾಜ್ ಹುಳಿಯಾರ್, ಕುವೆಂಪು ಫೋಟೋ ನಿಮ್ಮ ಕಡೆ ನೋಡುತ್ತಿಲ್ಲ ಎಂದರು. ಅದಕ್ಕೆ ನಾನು ಪ್ರತಿಕ್ರಿಯಿಸಿ, ಇದು ಬಹಳ ಕ್ಷೇಮ, ಅವರು ನೋಡುತ್ತಿದ್ದರೆ ನಾವು ಬೀಡಿ ಸಿಗರೇಟು ಸೇದಲು ಆಗಲ್ಲ. ಭಾರಿ ಗಂಭೀರವಾಗಿ ಇರಬೇಕು ಎಂದಿದ್ದೆ ಎಂದ ಅವರು, ನಿಮ್ಮ ಪ್ರಶ್ನೆಗೆ ಉತ್ತರ ಇಲ್ಲದೇ ಇರಬಹುದು, ಆದರೆ ಪರೋಕ್ಷವಾಗಿ ಉತ್ತರ ಇದೆ ಎಂದು ಸರಸ್ವತಿ ಅವರಿಗೆ ದೇವನೂರ ಮಹಾದೇವ ತಿಳಿಸಿದರು.

ಚುನಾವಣಾ ಕರ್ತವ್ಯಕ್ಕೆ 475 ಸಾರಿಗೆ ಬಸ್, 100ಕ್ಕೂ ಹೆಚ್ಚು ಖಾಸಗಿ ವಾಹನ ಬಳಕೆ

ಬಸ್‌ಗಳಿಲ್ಲದೆ ಪ್ರಯಾಣಿಕರ ಪರದಾಟ



ಮೈಸೂರು,ಏ.25(ಎಂಟಿವೈ)– ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಮತಗಟ್ಟೆಗಳಿಗೆ ಮತಯಂತ್ರದೊಂದಿಗೆ ಸಿಬ್ಬಂದಿಗಳನ್ನು ಕರೆದೊಯ್ಯಲು ಸಾರಿಗೆ ಸಂಸ್ಥೆಯ 475 ಬಸ್ ಹಾಗೂ 100ಕ್ಕೂ ಹೆಚ್ಚು ಖಾಸಗಿ ಮಿನಿ ಬಸ್‌ಗಳನ್ನು ಬಳಸಿಕೊಂಡಿದ್ದ ಹಿನ್ನೆಲೆಯಲ್ಲಿ ಮೈಸೂರಿಂದ ವಿವಿಧೆಡೆ ತೆರಳುವ ಪ್ರಯಾಣಿಕರಿಗೆ ಬಸ್ ಕೊರತೆ ಉಂಟಾಗಿ ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧ ವಿಧಾನಸಭಾ ಕ್ಷೇತ್ರದಲ್ಲಿರುವ ಮತಗಟ್ಟೆಗಳಿಗೆ ಮತದಾನಾಧಿಕಾರಿ, ಸಹಾಯಕ ಮತದಾನಾಧಿಕಾರಿ, ಭದ್ರತಾ ಸಿಬ್ಬಂದಿಗಳೊಂದಿಗೆ ಮತಯಂತ್ರ ಕೊಂಡೊಯ್ಯಲು ಮೈಸೂರು ನಗರ ವಿಭಾಗದಿಂದ 255 ಹಾಗೂ ಗ್ರಾಮಾಂತರ ವಿಭಾಗದಿಂದ 220 ಸೇರಿ ಒಟ್ಟು 475 ಸಾರಿಗೆ ಬಸ್‌ಗಳನ್ನು ಬಳಸಿಕೊಳ್ಳಲಾಗಿದೆ. ಇದರೊಂದಿಗೆ ಖಾಸಗಿ ಮಿನಿ ಬಸ್‌ಗಳು ಹಾಗೂ ಟ್ಯಾಕ್ಸಿಗಳನ್ನು ಬಳಸಿಕೊಳ್ಳಲಾಗಿದೆ.

ಮತಗಟ್ಟೆ ಸಿಬ್ಬಂದಿಗಳನ್ನು ಕರೆದೊಯ್ಯಲು ಮುಂಜಾನೆಯೇ ಸಾರಿಗೆ ಸಂಸ್ಥೆ ಬಸ್‌ಗಳನ್ನು ಮಸ್ಟರಿಂಗ್ ಕೇಂದ್ರದ ಬಳಿ ಕೊಂಡೊಯ್ದು ನಿಲ್ಲಿಸಿದ್ದರಿಂದ ಮೈಸೂರು ನಗರ ಹಾಗೂ ವಿವಿಧ ಜಿಲ್ಲೆಗಳಿಗೆ ಪ್ರಯಾಣಿಸುತ್ತಿದ್ದ ಬಸ್‌ಗಳ ಸಂಖ್ಯೆ ವಿರಳವಾಗಿತ್ತು. ಇದರಿಂದ ಬೆಳಗ್ಗಿನಿಂದಲೇ ಪ್ರಯಾಣಿಕರಿಗೆ ಸೂಕ್ತ ಬಸ್ ವ್ಯವಸ್ಥೆಯಿಲ್ಲದೆ ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು. ಗ್ರಾಮೀಣ ಪ್ರದೇಶದಿಂದ ಕೂಲಿ ಕೆಲಸ, ಮನೆಗೆಲಸ, ಅಂಗಡಿ ಸೇರಿದಂತೆ ವಿವಿಧ ಕೆಲಸಕ್ಕೆ ಬರುವವರು ಬಸ್ ಸೌಲಭ್ಯವಿಲ್ಲದೆ ಪರದಾಡಿದರು.

ಮತದಾನ ಮಾಡಲು ಅನುಕೂಲವಾಗುವಂತೆ ರಾಜ್ಯಸರ್ಕಾರ ಏ.26ರಂದು ಸಾರ್ವತ್ರಿಕ ರಜೆ ಘೋಷಿಸಿದ್ದ ಹಿನ್ನೆಲೆಯಲ್ಲಿ ಇಂದು ಸಂಜೆ ಕೆಲಸ ಮುಗಿಸಿ ತಮ್ಮ ತಮ್ಮ ಊರುಗಳಿಗೆ ತೆರಳಲು ಬಸ್ ನಿಲ್ದಾಣಕ್ಕೆ ಬಂದವರು ಸೂಕ್ತ ಬಸ್ ವ್ಯವಸ್ಥೆ ಇಲ್ಲದ ಕಾರಣ ತೀವ್ರವಾಗಿ ಪರದಾಡಬೇಕಾಯಿತು. ಸಾರಿಗೆ ಇಲಾಖೆ ಅಧಿಕಾರಿಗಳು ಪ್ರಯಾಣಿಕರ ಸಂಖ್ಯೆಗನುಗುಣವಾಗಿ ಬಸ್ ವ್ಯವಸ್ಥೆ ಕಲ್ಪಿಸಿದರಾದರೂ ಸದರಿ ಬಸ್‌ಗಳಿಗಾಗಿ ಪ್ರಯಾಣಿಕರು ಗಂಟೆಗಟ್ಟಲೆ ಕಾಯುತ್ತಿದ್ದ ದೃಶ್ಯ ಕಂಡುಬಂತು.

ಚುನಾವಣಾ ಕರ್ತವ್ಯಕ್ಕೆ ಸಾರಿಗೆ ಸಂಸ್ಥೆಯ ಬಸ್‌ಗಳನ್ನು ಬಳಸಿಕೊಂಡಿದ್ದ ಹಿನ್ನೆಲೆಯಲ್ಲಿ ಪ್ರಯಾಣಿಕರಿಗೆ ತೊಂದರೆಯಾಗದಂತೆ ಕಟ್ಟೆಚ್ಚರ ವಹಿಸಲು ಕ್ರಮ ಕೈಗೊಳ್ಳಲಾಗಿತ್ತು. ನಗರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ಟಿ. ವೀರೇಶ್ ನಗರ ಬಸ್ ನಿಲ್ದಾಣ ಹಾಗೂ ವಿವಿಧ ಡಿಪೋಗಳಿಗೆ ತೆರಳಿ ಪ್ರತಿದಿನ ಯಾವ ಮಾರ್ಗದಲ್ಲಿ ಹೆಚ್ಚಿನ ಸಂಖ್ಯೆ ಪ್ರಯಾಣಿಕರು ಸಂಚರಿಸುತ್ತಾರೆ ಎಂಬ ಮಾಹಿತಿ ಪಡೆದರು. ಈ ವೇಳೆ ಪತ್ರಕರ್ತರೊಂದಿಗೆ ಹೆಚ್.ಟಿ.ವೀರೇಶ್ ಮಾತನಾಡಿ, ನಗರ ವಿಭಾಗದಲ್ಲಿ 536 ಬಸ್‌ಗಳಿದ್ದು, ಅವುಗಳಲ್ಲಿ 255 ಬಸ್‌ಗಳನ್ನು ಚುನಾವಣಾ ಕರ್ತವ್ಯಕ್ಕೆ ನೀಡಲಾಗಿದೆ. ನಗರ ಬಸ್ ನಿಲ್ದಾಣದಲ್ಲಿ ಯಾವ ಮಾರ್ಗದಲ್ಲಿ ಹೆಚ್ಚಿನ ಸಂಖ್ಯೆಯ ಪ್ರಯಾಣಿಕರು ಸಂಚರಿಸುತ್ತಾರೋ ಆ ಮಾರ್ಗಕ್ಕೆ ಸಮರ್ಪಕ ಬಸ್ ಸಂಚಾರದ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ. ಹೆಚ್ಚುವರಿ ಬಸ್ ಸಂಚರಿಸುತ್ತಿದ್ದ ಮಾರ್ಗದಲ್ಲಿ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಬಸ್ ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಮತದಾನ ಮುಗಿದ ನಂತರ ಎಲ್ಲಾ ಬಸ್‌ಗಳು ವಾಪಸ್ಸಾಗಲಿದ್ದು, ಶನಿವಾರ ಮುಂಜಾನೆಯಿಂದಲೇ ಎಲ್ಲಾ ಮಾರ್ಗದಲ್ಲೂ ಎಂದಿನಂತೆ ಬಸ್ ಸಂಚಾರ ಮುಂದುವರೆಯುತ್ತದೆ ಎಂದು ಸ್ಪಷ್ಟಪಡಿಸಿದರು.

ಅಗತ್ಯ ಕ್ರಮ ಕೈಗೊಳ್ಳಲಾಗಿದೆ: ಗ್ರಾಮಾಂತರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ಶ್ರೀನಿವಾಸ್ ಮಾತನಾಡಿ, ಗ್ರಾಮಾಂತರ ವಿಭಾಗದಲ್ಲಿ 700 ಬಸ್‌ಗಳಿದ್ದು, ಅವುಗಳಲ್ಲಿ 220 ಬಸ್‌ಗಳನ್ನು ಲೋಕಸಭಾ ಚುನಾವಣಾ ಕರ್ತವ್ಯಕ್ಕೆ ನೀಡಲಾಗಿದೆ. ಗ್ರಾಮಾಂತರ ಬಸ್ ನಿಲ್ದಾಣದಿಂದ ವಿವಿಧ ಜಿಲ್ಲೆ ಹಾಗೂ ನಗರ, ಪಟ್ಟಣಗಳಿಗೆ ಪ್ರತಿದಿನ ಪ್ರಯಾಣಿಸುತ್ತಿದ್ದ ಬಸ್‌ಗಳಲ್ಲಿ ಇಂದು ಕೆಲ ಬಸ್‌ಗಳ ಸಂಚಾರದಲ್ಲಿ ವ್ಯತ್ಯಯವಾಗಿದೆ. ಆದರೆ, ಪ್ರಯಾಣಿಕರಿಗೆ ಅನಾನುಕೂಲವಾಗದಂತೆ ಕಾಯ್ದಿರಿಸಿದ್ದ ಹೆಚ್ಚುವರಿ ಬಸ್‌ಗಳನ್ನು ಬೇಡಿಕೆ ಇದ್ದ ಮಾರ್ಗದಲ್ಲಿ ಸಂಚರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಕರ್ನಾಟಕ ಸರ್ಕಾರ ಪತನಕ್ಕೆ ಬಿಜೆಪಿ ಪ್ರಯತ್ನ




ಬೆಂಗಳೂರು, ಏ.25– ರಾಜ್ಯ ಸರ್ಕಾರವನ್ನು ಪತನಗೊಳಿಸಲು ಬಿಜೆಪಿ ಪ್ರಯತ್ನ ನಡೆಸುತ್ತಿದೆ. ಆದರೆ ಅದು ಅಸಾಧ್ಯ ಎಂದು ಡಿಸಿಎಂ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಹೇಳಿದರು.

ಬೆಂಗಳೂರಿನ ಸದಾಶಿವನಗರ ನಿವಾಸದಲ್ಲಿ ಗುರುವಾರ ಮಾತನಾಡಿದ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿ ಹತಾಶೆಯಿಂದ ಹೇಳಿಕೆಗಳು ಕೊಡುತ್ತಿದ್ದಾರೆ. ತಮಿಳುನಾಡು, ಆಂಧ್ರ, ಕೇರಳದಲ್ಲಿ ಬಿಜೆಪಿ ಪಕ್ಷಕ್ಕೆ ನೆಲೆ ಇಲ್ಲ. ಕರ್ನಾಟಕದಲ್ಲಿ ಮಾತ್ರ ಅವರ ಸರ್ಕಾರ ಇತ್ತು, ಆದರೆ ಅದು ಕಳೆದ ಚುನಾವಣೆಯಲ್ಲಿ ಸೋತಿದೆ ಎಂದರು.

ಆದರೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವನ್ನು ಪತನ ಮಾಡಿ ಮತ್ತೆ ಬಿಜೆಪಿ ಸರ್ಕಾರ ರಚನೆ ಮಾಡುವ ಪ್ರಯತ್ನ ನಡೆಸುತ್ತಿದೆ. ಆದರೆ ಅದು ಸಾಧ್ಯವಿಲ್ಲ ಎಂದು ಇದೇ ಸಂದರ್ಭದಲ್ಲಿ ಡಿಕೆ ಶಿವಕುಮಾರ್ ಹೇಳಿದರು. ಲೋಕಸಭೆ ಚುನಾವಣೆಯಲ್ಲಿ ರಾಜ್ಯದಲ್ಲಿ ಬಿಜೆಪಿ ಡಬಲ್ ಅಂಕಿ ದಾಟುವುದಿಲ್ಲ. ಕಾಂಗ್ರೆಸ್ ಆಡಳಿತಕ್ಕೆ ಬಂದರೆ ಮಂಗಳಸೂತ್ರ ಹಾಕಲು ಇಲ್ಲದ ಹಾಗೆ ಮಾಡುತ್ತಾರೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಆದರೆ ಇದಕ್ಕೆ ಉತ್ತರವಾಗಿ, ಪ್ರಿಯಾಂಕಾ ಗಾಂಧಿ, ದೇಶದ ಐಕ್ಯತೆಗಾಗಿ ನನ್ನ ತಾಯಿ ಮಂಗಳ ಸೂತ್ರ ಕಳೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ ಎಂದು ತಿರುಗೇಟು ನೀಡಿದರು.

ಪರಿಶಿಷ್ಟ ಜಾತಿಯ ಎರಡೂ ಪಂಗಡಗಳು ಒಂದಾಗದಿದ್ದರೆ ಉಳಿಗಾಲವಿಲ್ಲ

ಮಾಜಿ ಮೇಯರ್ ನಾರಾಯಣ್ ಎಚ್ಚರಿಕೆ



ಮೈಸೂರಿನ ಕಿರುರಂಗಮಂದಿರದಲ್ಲಿ ನಡೆದ ವಿಚಾರ ಸಂಕಿರಣವನ್ನು ಮಾಜಿ ಮೇಯರ್ ನಾರಾಯಣ್ ಬುದ್ಧನ ವಿಗ್ರಹಕ್ಕೆ ಪುಷ್ಪಾರ್ಚನೆ ಮಾಡಿ ಉದ್ಘಾಟಿಸಿದರು. ಅಹಿಂದ ಜವರಪ್ಪ, ಡಾ.ಕೃಷ್ಣಮೂರ್ತಿ ಚಮರಂ ಇದ್ದರು.

ಮೈಸೂರು,ಏ.25(ಎಂಟಿವೈ)– ಕೆಲವರು ಪರಿಶಿಷ್ಟ ಜಾತಿಯಲ್ಲಿನ ಎಡಗೈ ಮತ್ತು ಬಲಗೈ ಒಳಪಂಗಡಗಳ ನಡುವೆ ಕಂದಕ ಸೃಷ್ಟಿಸಿ ಪರಸ್ಪರ ದೂರ ಮಾಡುತ್ತಿದ್ದು, ಕೋಮುವಾದಿ ಶಕ್ತಿಯನ್ನು ಹತ್ತಿಕ್ಕಲು ಎರಡೂ ಪಂಗಡ ಒಂದಾಗಬೇಕು. ಇಲ್ಲದಿದ್ದರೆ ಇಬ್ಬರಿಗೂ ಉಳಿಗಾಲ ಇಲ್ಲ ಎಂದು ಮಾಜಿ ಮೇಯರ್ ನಾರಾಯಣ್ ಎಚ್ಚರಿಕೆ ನೀಡಿದರು.

ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಚಾರ್ವಾಕ ಸಂಸ್ಥೆ ವತಿಯಿಂದ ಆಯೋಜಿಸಿದ್ದ 'ಸಂವಿಧಾನ ಉಳಿಸಲು ಕೋಮುವಾದ ಅಳಿಯಲು ಎಡಗೈ–ಬಲಗೈ ಜಾತಿಗಳು ಒಂದುಗೂಡುವ ಅನಿವಾರ್ಯತೆ' ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಸಂವಿಧಾನಕ್ಕೆ ಆಪತ್ತು ಬಂದಿದೆ. ಇದನ್ನು ಬುಡಮೇಲು ಮಾಡಲು ಸಂಚು ನಡೆದಿದೆ. ಹೀಗಾದರೆ, ಮೀಸಲಾತಿ, ಸರ್ಕಾರಿ ಸೌಲಭ್ಯಗಳು ಸಿಗಲ್ಲ. ಮತ್ತೆ ಗುಲಾಮಗಿರಿ ಪರಿಸ್ಥಿತಿಗೆ ಸಿಲುಕಿಕೊಳ್ಳಬೇಕಾಗುತ್ತದೆ. ಕಿತ್ತಾಟ, ವೈಮನಸ್ಸು ಮರೆತು ಎರಡು ಒಳಪಂಗಡಗಳು ಒಗ್ಗಟ್ಟಾಗಿ ಸಂವಿಧಾನ ಉಳಿಸಿಕೊಳ್ಳಬೇಕು. ಅದಕ್ಕಾಗಿ ಕೋಮುವಾದಿ ಶಕ್ತಿಯನ್ನು ಮನೆಗೆ ಕಳುಹಿಸಬೇಕು ಎಂದರು.

ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ (ಇಡಬ್ಲ್ಯೂಎಸ್) ಮೀಸಲಾತಿ ಕಲ್ಪಿಸುವ ಮೂಲಕ ಸಂವಿಧಾನಕ್ಕೆ ಅಪಚಾರ ಮಾಡಲಾಗಿದೆ. ಶೇ.3ರಷ್ಟು ಇರುವ ಮೇಲ್ವರ್ಗದವರಿಗೆ ಶೇ.10ರಷ್ಟು ಮೀಸಲಾತಿ ನೀಡಲಾಗಿದೆ. ಅರ್ಜಿ ಹಾಕದೆ, ಪ್ರತಿಭಟನೆ, ಹೋರಾಟ ಮಾಡದೆ ಇವರಿಗೆ ಮೀಸಲಾತಿ ಕೊಟ್ಟಿರುವ ಹಿಂದಿನ ಮರ್ಮವನ್ನು ದಲಿತರು ಅರ್ಥ ಮಾಡಿಕೊಳ್ಳಬೇಕು. ಅಧಿಕಾರಕ್ಕೆ ಬಂದಿರುವುದೇ ಸಂವಿಧಾನ ಬದಲಾವಣೆ ಮಾಡಲು ಎಂದು ಸಂಸದ ಅನಂತಕುಮಾರ್ ಹೆಗಡೆ ಬಹಿರಂಗವಾಗಿ ಹೇಳಿದರೂ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲಿಲ್ಲ. ಪ್ರಧಾನಿ ನರೇಂದ್ರ ಮೋದಿ ಏನೂ ಚಕಾರೆತ್ತಲಿಲ್ಲ. ಇದುವೇ ಆರ್‌ಎಸ್‌ಎಸ್, ಬಿಜೆಪಿ ರಹಸ್ಯ ಕಾರ್ಯಸೂಚಿ. ಸಂವಿಧಾನವನ್ನು ತೆಗೆದು, ಮನುಧರ್ಮಶಾಸ್ತ್ರ ತರುವುದು ಇವರ ಹುನ್ನಾರವಾಗಿದೆ ಎಂದು ಆರೋಪಿಸಿದರು.

ಸಾಹಿತಿ ಡಾ.ಕೃಷ್ಣಮೂರ್ತಿ ಚಮರಂ ಮಾತನಾಡಿ, ಸಂವಿಧಾನಕ್ಕೆ ಧಕ್ಕೆಯಾದಾಗ ಎಡಗೈ–ಬಲಗೈ ಸಮುದಾಯದವರು ಮಾತ್ರ ಹೋರಾಟ ಮಾಡಬೇಕೇ? ಸಂವಿಧಾನ ಕೇವಲ ದಲಿತರಿಗೆ ಮಾತ್ರವೇ? ದೇಶದಲ್ಲಿರುವ ಸಕಲ ಜೀವಿಗಳ ಬದುಕು ನಿರ್ಧರಿಸುವುದೇ ಸಂವಿಧಾನ. ಎಲ್ಲ ಜಾತಿ, ಧರ್ಮದವರಿಗೆ ಮಾನವೀಯ ಹಕ್ಕು ಕೊಟ್ಟಿರುವುದು ಸಂವಿಧಾನ ಆದ್ದರಿಂದ ಇದಕ್ಕೆ ಆಪತ್ತು ಬಂದಾಗ ಎಲ್ಲರೂ ಧ್ವನಿಯೆತ್ತಿ ಹೋರಾಟ ನಡೆಸಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಮಾತನಾಡಿ, ಶೋಷಿತ ಸಮುದಾಯಗಳ ನಡುವಿನ ಭಿನ್ನಾಭಿಪ್ರಾಯ ಮತ್ತು ಚಳವಳಿಗಾರರು, ರಾಜಕಾರಣಿಗಳು ಮತ್ತು ಅಧಿಕಾರಿಗಳಲ್ಲಿ ಒಗ್ಗಟ್ಟು ಕೊರತೆಯಿಂದ ನಾನಾ ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಸಂವಿಧಾನ ಬದಲಿಸುವ ಆತಂಕವನ್ನು ಎದುರಿಸುವ ಪರಿಸ್ಥಿತಿ ಇದೆ. ಭಿನ್ನಾಭಿಪ್ರಾಯ ಮರೆತು ಎಲ್ಲರೂ ಒಂದಾಗದಿದ್ದರೆ ಅಪಾಯಕಾರಿ ದಿನಗಳನ್ನು ಎದುರಿಸಬೇಕಾಗುತ್ತದೆ ಬಾಬಾ ಸಾಹೇಬರು ಜನಾಂಗದ ಏಳಿಗೆಗಾಗಿ ದುಡಿಯುವವರು ಧನ್ಯರು ಎಂದರು. ನಾವು ಅದನ್ನು ಮಾಡಲಿಲ್ಲ. ಕೊನೆಯದಾಗಿ ಧಮ್ಮ ದಾರಿ ತೋರಿದರು. ಆ ಮಾರ್ಗದಲ್ಲಿಯೂ ಹೋಗಲಿಲ್ಲ. ಅಂಬೇಡ್ಕರ್ ಶ್ರಮದ ಫಲಾನುಭವಿಗಳು ತಮ್ಮ ಜನವರ್ಗದ ಏಳಿಗೆಗೆ ದುಡಿಯದೇ ಅನ್ಯಾಯವೆಸಗಿದರು ಎಂದು ನುಡಿದರು. ಕಾರ್ಯಕ್ರಮದಲ್ಲಿ ಆರ್.ಎಸ್.ದೊಡ್ಡಣ್ಣ, ಶಿವಪ್ರಸಾದ್ ಎಂ.ಸಿ.ಹುಂಡಿ, ಚಾರ್ವಾಕ ಸಂಸ್ಥೆಯ ಮುಖ್ಯಸ್ಥ ಗಿರೀಶ್ ಮಾಚಳ್ಳಿ ಉಪಸ್ಥಿತರಿದ್ದರು.



ಕಿಚ್ಚ ಸುದೀಪ್‌ರೊಂದಿಗೆ ನಿರ್ಮಾಪಕ ಎನ್.ಸಂದೇಶ್



ರಾಮನವತಾರದಲ್ಲಿ ಪ್ರಣಿತ

ಕುತೂಹಲ ಕೆರಳಿಸಿದೆ ಸುದೀಪ್-ನಿರ್ಮಾಪಕ ಸಂದೇಶ್ ಎನ್. ಭೇಟಿ

ಇತ್ತೀಚೆಗೆ ನಟ ಕಿಚ್ಚ ಸುದೀಪ್ ಅವರನ್ನು ಘೋಸ್ಟ್ ಚಿತ್ರದ ನಿರ್ಮಾಪಕ ಎನ್.ಸಂದೇಶ್ ಅವರು ಭೇಟಿ ಮಾಡಿ ಬಂದಿದ್ದಾರೆ. ಅಲ್ಲದೆ ತಮ್ಮ ಭೇಟಿಯ ಫೋಟೋವನ್ನು ಸೋಷಿಯಲ್ ಮೀಡಿಯಾದಲ್ಲಿ ಕೂಡ ಹಂಚಿಕೊಂಡಿದ್ದಾರೆ. ಈಗ ಈ ಭೇಟಿಯನ್ನು ಅವರಿಬ್ಬರ ಅಭಿಮಾನಿಗಳು ನಾನಾ ಅರ್ಥದಲ್ಲಿ ಕಲ್ಪಿಸಿಕೊಳ್ಳುತ್ತಿದ್ದಾರೆ. ಇವರಿಬ್ಬರೂ ಹೊಸ ಸಿನಿಮಾ ಮಾಡುವ ಯೋಚನೆಯಲ್ಲೇನಾದರೂ ಇದ್ದಾರಾ? ಎಂದು ಕೇಳುತ್ತಿದ್ದಾರೆ. ಸದ್ಯ ಸುದೀಪ್ ಅಭಿನಯದ ಬಹುನಿರೀಕ್ಷಿತ ಮ್ಯಾಕ್ಸ್ ಚಿತ್ರದ ಚಿತ್ರೀಕರಣ ಮಹಾಬಲಿಪುರಂನಲ್ಲಿ ನಡೆಯುತ್ತಿದೆ. ಚಿತ್ರದ ಪ್ರಮುಖ ಸಾಹಸ ದೃಶ್ಯವನ್ನು ಇಲ್ಲಿ ಚಿತ್ರೀಕರಿಸಲಾಗುತ್ತಿದ್ದು, ಈ ಶೂಟಿಂಗ್‌ನಲ್ಲಿ ಸುದೀಪ್ ಅವರು ಭಾಗಿಯಾಗಿದ್ದಾರೆ. ಈಗಾಗಲೇ ಮ್ಯಾಕ್ಸ್ ಚಿತ್ರದ ಬಹುತೇಕ ಶೂಟಿಂಗ್ ಮುಗಿದಿದ್ದು, ಇದರನಂತರ ಸುದೀಪ್ ಯಾವ ಸಿನಿಮಾಗೆ ಕಾಲ್‌ಶೀಟ್ ಕೊಟ್ಟಿದ್ದಾರೆ ಎನ್ನುವ ಕುತೂಹಲ ಅವರ ಅಭಿಮಾನಿಗಳಲ್ಲಿದೆ. ಹಾಗಾಗಿ ಸಂದೇಶ್ ಹಾಗೂ ಸುದೀಪ್ ಭೇಟಿ ಅಷ್ಟು ಮಹತ್ವ ಪಡೆದುಕೊಂಡಿದೆ. ಮ್ಯಾಕ್ಸ್ ಚಿತ್ರದ ಕೊನೆಯ ಹಂತದ ಚಿತ್ರೀಕರಣ ತಮಿಳುನಾಡಿನ ಮಹಾಬಲಿಪುರಂನಲ್ಲಿ ನಡೆಯುತ್ತಿದೆ. ಕಿಚ್ಚ ಸುದೀಪ್ ಸೇರಿದಂತೆ ಹಲವು ಪ್ರಮುಖ ಕಲಾವಿದರುಗಳು ಈ ಹಂತದ ಚಿತ್ರೀಕರಣದಲ್ಲಿ ಭಾಗವಹಿಸಿದ್ದಾರೆ. ಈ ಮಾಹಿತಿಯನ್ನು ಸ್ವತಃ ಕಲಾವಿದರೇ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಮೊನ್ನೆಯಷ್ಟೇ ಸುದೀಪ್ ಅವರು ಮ್ಯಾಕ್ಸ್ ಚಿತ್ರದ ಬಗ್ಗೆ ಹೊಸ ಅಪ್‌ಡೇಟ್ ನೀಡಿದ್ದರು. 15 ದಿನಗಳ ಚಿತ್ರೀಕರಣ ಮುಗಿಸಿದರೆ, ಮ್ಯಾಕ್ಸ್ ಚಿತ್ರೀಕರಣ ಮುಕ್ತಾಯವಾಗುತ್ತದೆ. ನಂತರ ಮೇನಲ್ಲಿ ಚಿತ್ರ ರಿಲೀಸ್ ಆಗಬಹುದು ಎಂದು ಹೇಳಿದ್ದರು. ಹೆಸರಾಂತ ನಿರ್ದೇಶಕ ವಿಜಯ್ ಕಾರ್ತಿಕೇಯನ್ ಅವರು ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಕಲೈಪುಲಿ ಎಸ್. ತನು ಅವರ ಜೊತೆ ಸೇರಿ ಕಿಚ್ಚ ಸುದೀಪ್ ಅವರು ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಬಹಳ ದಿನಗಳ ನಂತರ ಕಿಚ್ಚ ಸುದೀಪ್ ಅವರು ಮತ್ತೊಮ್ಮೆ ಖಡಕ್ ಪೊಲೀಸ್ ಆಫೀಸರ್ ಆಗಿ ಅಬ್ಬರಿಸುತ್ತಿರೋ ಈ ಚಿತ್ರಕ್ಕೆ ಅಜನೀಶ್ ಲೋಕನಾಥ್ ಅವರ ಸಂಗೀತ ಸಂಯೋಜನೆ, ಶೇಖರ್‌ಚಂದ್ರ ಅವರ ಕ್ಯಾಮೆರಾ ವರ್ಕ್ ಇದೆ. ಚಿತ್ರದಲ್ಲಿ ಕಿಚ್ಚ ಸುದೀಪ್ ಅವರ ಜೊತೆ ಕಾಮರಾಜ್, ಉಗ್ರಂ ಮಂಜು ಹಾಗೂ ಸಂಯುಕ್ತಾ ಹೊರನಾಡ್ ಸೇರಿದಂತೆ ಹಲವಾರು ಕಲಾವಿದರುಗಳು ನಟಿಸುತ್ತಿದ್ದಾರೆ.

50 ಲಕ್ಷದ ಅದ್ದೂರಿ ಸೆಟ್‌ನಲ್ಲಿ ಸಂಜು-ಗೀತಾ ಹಾಡು....

ಒಂದು ಪ್ರೇಮಕಥೆ ಎಂದರೆ ಅಲ್ಲಿ ಖುಷಿ, ತ್ಯಾಗದ ಜೊತೆಗೆ ಕಾಡುವ ಕಥೆ ಇರಬೇಕು. ಇದನ್ನು ಅಚ್ಚುಕಟ್ಟಾಗಿ ತೆರೆಮೇಲೆ ತಂದವರು ನಿರ್ದೇಶಕ ನಾಗಶೇಖರ್. ಅದಕ್ಕೆ ಮೈನಾ, ಸಂಜು ವೆಡ್ಸ್ ಗೀತಾ ಸಿನಿಮಾಗಳಿಗಿಂತ ಬೇರೆ ಉದಾಹರಣೆ ಬೇಕಿಲ್ಲ. ಈಗ ಹೊಸ ಸಂಜು ಹಾಗೂ ಗೀತಾರ ನವೀನ ಪ್ರೇಮಕಥೆಯನ್ನು ನಾಗಶೇಖರ್ ಹೇಳಹೊರಟಿದ್ದಾರೆ. ಶ್ರೀನಗರ ಕಿಟ್ಟಿ ಜೊತೆ ರಮ್ಯಾ ಬದಲು ರಚಿತಾರಾಮ್ ಬಂದಿದ್ದಾರೆ.

ರೇಷ್ಮೆ ನೂಲಿಗೆ ಉತ್ತಮ ಬೆಲೆ ಸಿಗಬೇಕೆಂದು ಹೋರಾಡುವ ನಮ್ಮ ಮಣ್ಣಿನ ಪ್ರೇಮಿಗಳ ಅದ್ಭುತ ಪ್ರೇಮಕಾವ್ಯ ಇದಾಗಿದ್ದು, ಸದ್ಯ ಬಹುತೇಕ ಚಿತ್ರೀಕರಣ ಮುಗಿದಿದೆ, ಈಗಾಗಲೇ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ 15 ದಿನ ಹನ್ನೊಂದು ಲೊಕೇಶನ್‌ಗಳಲ್ಲಿ ಮೂರನೇ ಹಂತದ ಚಿತ್ರೀಕರಣ ಮುಗಿಸಿದ್ದು, ನಾಲ್ಕನೇ ಹಂತದ ಚಿತ್ರೀಕರಣ ಶುರುವಾಗಿದೆ. ಕುಣಿಗಲ್‌ನಲ್ಲಿ ಹಾಡೊಂದರ ಶೂಟಿಂಗ್ ನಡೆದಿದೆ. ಚಿತ್ರದ ಕುರಿತಂತೆ ಮಾತನಾಡಿದ ನಿರ್ಮಾಪಕ ಛಲವಾದಿ ಕುಮಾರ್, ಕುಣಿಗಲ್‌ನ ಯುಬಿ ಸ್ಟಡ್ ಫಾರಂ(ಕುದುರೆ ಫಾರಂ)ನಲ್ಲಿ ಕಲರ್‌ಫುಲ್ ಹಾಡೊಂದರ ಚಿತ್ರೀಕರಣ ನಡೆಸಲಾಯಿತು. ಅದ್ದೂರಿಯಾಗಿ ಮೂಡಿಬಂದಿರುವ ಈ ಹಾಡಿಗೆ ಸುಮಾರು 45 ರಿಂದ 50 ಲಕ್ಷ ರೂ.ವರೆಗೆ ಖರ್ಚು ಮಾಡಲಾಗಿದೆ. ಇದಲ್ಲದೆ ಉಳಿದ ಹಾಡುಗಳನ್ನು ಇನ್ನೂ ಅದ್ದೂರಿಯಾಗಿ ಚಿತ್ರೀಕರಿಸುವ ಯೋಜನೆ ಹಾಕಿಕೊಂಡಿದ್ದೇವೆ. ಇಡೀ ಚಿತ್ರ ವೈಭವಯುತವಾಗಿ, ಅದ್ಭುತ ದೃಶ್ಯಕಾವ್ಯವಾಗಿ ಸಂಜು ವೆಡ್ಸ್ ಗೀತಾ ಮೂಡಿಬರಬೇಕೆನ್ನುವುದೇ ನಮ್ಮ ಉದ್ದೇಶ ಎಂದು ಹೇಳಿದರು.

ಪವಿತರ ಇಂಟರ್‌ನ್ಯಾಷನಲ್ ಮೂವೀ ಮೇಕರ್ಸ್ ಅಡಿಯಲ್ಲಿ ನಿರ್ಮಾಪಕ ಛಲವಾದಿ ಕುಮಾರ್ ಅವರು ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ನಾಗಶೇಖರ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಶ್ರೀಧರ ವಿ.ಸಂಭ್ರಮ್ ಅವರು 5 ಸುಂದರ ಹಾಡುಗಳನ್ನು ಕಂಪೋಜ್ ಮಾಡಿದ್ದು, ಸೋನು ನಿಗಂ, ಶ್ರೇಯಾ ಘೋಷಾಲ್, ಮಂಗ್ಲಿ ದನಿಯಾಗಿದ್ದಾರೆ.




ಮಾಲಾಶ್ರೀ ಕೈಲೀಗ ಮಾರಣಾಯುಧಂ

ಆಕ್ಷನ್ ಕ್ವೀನ್ ಮಾಲಾಶ್ರೀ ಅವರು ಪ್ರಮುಖ ಪಾತ್ರದಲ್ಲಿ ನಟಿಸಿದ್ದ ಮಾರಕಾಸ್ತ್ರ ಚಿತ್ರವು ಕಳೆದ ವರ್ಷ ಬಿಡುಗಡೆಯಾಗಿ ಯಶಸ್ವಿಯಾಗಿತ್ತು. ಕೋಮಲ ನಟರಾಜ್ ಅವರ ನಿರ್ಮಾಣ ಹಾಗೂ ಗುರುಮೂರ್ತಿ ಸುನಾಮಿ ಅವರ ನಿರ್ದೇಶನದಲ್ಲಿ ಮೂಡಿಬಂದಿದ್ದ ಈ ಚಿತ್ರವೀಗ ತೆಲುಗಿಗೆ ಡಬ್ ಆಗಿದೆ.ಆ ಚಿತ್ರದ ಹೆಸರು "ಮಾರಣಾಯುಧಂ". ಈ ಚಿತ್ರವು ಏಪ್ರಿಲ್ 26ರಂದು ಕರ್ನಾಟಕದಲ್ಲಿ ತೆಲುಗು ಹಾಗೂ ಕನ್ನಡದಲ್ಲಿ ಏಕಕಾಲಕ್ಕೆ ಬಿಡುಗಡೆಯಾಗುತ್ತಿದೆ. ಈ ಕುರಿತು ಮಾಹಿತಿ ನೀಡಲು ಚಿತ್ರತಂಡ ಪತ್ರಿಕಾಗೋಷ್ಠಿ ಆಯೋಜಿಸಿತ್ತು. ಈ ಸಂದರ್ಭದಲ್ಲಿ ನಿರ್ಮಾಪಕ ನಟರಾಜ್ ಮಾತನಾಡುತ್ತ, ಕಳೆದ ವರ್ಷ ಮಾರಕಾಸ್ತ್ರ ಚಿತ್ರವನ್ನು ರಿಲೀಸ್ ಮಾಡಿದ್ದೆವು. ಆ ಸಮಯದಲ್ಲಿ ಕ್ರಿಕೆಟ್ ಮ್ಯಾಚ್, ಹಬ್ಬಗಳು ಬಂದದ್ದರಿಂದ ಬಹಳಷ್ಟು ಜನ ನಮ್ಮ ಸಿನಿಮಾ ನೋಡಲಾಗಲಿಲ್ಲ. ಆದರೆ, ಚಿತ್ರ ನೋಡಿದ ತೆಲುಗು ವಿತರಕ ವೆಂಕಟೇಶ್‌ರಾವ್ ಅವರು ತುಂಬಾ ಇಷ್ಟಪಟ್ಟು ಚಿತ್ರವನ್ನು ತೆಲುಗಿನಲ್ಲಿ ಮಾಡಿ ಎಂದರು. ಈಗ ನಮ್ಮ ಚಿತ್ರವನ್ನು "ಮಾರಣಾಯುಧಂ" ಎಂಬ ಹೆಸರಿನಲ್ಲಿ ಇಂದಿನಿಂದ ಕರ್ನಾಟಕದಾದ್ಯಂತ ಬಿಡುಗಡೆ ಮಾಡುತ್ತಿದ್ದೇವೆ. ಶನಿವಾರ(ಏ.27ರಂದು) ಪೌರಕಾರ್ಮಿಕರು ಸೇರಿದಂತೆ ಅನೇಕ ಶ್ರಮಿಕ ವರ್ಗದವರಿಗೆ ಉಚಿತ ಪ್ರದರ್ಶನದ ವ್ಯವಸ್ಥೆ ಮಾಡುತ್ತಿದ್ದೇವೆ ಎಂದರು.



ನಂತರ ನಿರ್ದೇಶಕ ಗುರುಮೂರ್ತಿ ಸುನಾಮಿ ಮಾತನಾಡುತ್ತ ಆಗ ಬಹಳಷ್ಟು ಜನ ಚಿತ್ರದ ಅವಧಿ ಸ್ವಲ್ಪ ಹೆಚ್ಚಿದೆ ಎಂದಿದ್ದರು, ಹಾಗಾಗಿ 26 ನಿಮಿಷಗಳಷ್ಟು ಸೀನ್ ಕಟ್ ಮಾಡಿ ರಿಲೀಸ್ ಮಾಡುತ್ತಿದ್ದೇವೆ. ಈಗ ಚಿತ್ರದ ವೇಗವೂ ಹೆಚ್ಚಾಗಿದೆ. ಮಾಲಾಶ್ರೀ ಅವರ ಪರ್‌ಫಾರ್ಮೆನ್ಸ್ ನಿಜಕ್ಕೂ ಅದ್ಭುತವಾಗಿ ಮೂಡಿಬಂದಿದೆ ಅಲ್ಲದೆ ನಾಯಕ ಆನಂದ್ ಆರ್ಯ ಹಾಗೂ ನಾಯಕಿ ಹರ್ಷಿಕಾ ಪೂಣಚ್ಚ ಕೂಡ ಅದ್ಭುತವಾಗಿ ನಟಿಸಿದ್ದಾರೆ ಎಂದು ಹೇಳಿದರು. ಚಿತ್ರದ ನಾಯಕಿ ಮಾಲಾಶ್ರೀ ಮಾತನಾಡಿ, ಆರಂಭದಲ್ಲಿ ನಾನು ಈ ಚಿತ್ರದಲ್ಲಿ ನಟಿಸಲು ಒಪ್ಪಿರಲಿಲ್ಲ. ಆನಂತರ ನಿರ್ದೇಶಕರು ಕಥೆ ಹೇಳಿದ ರೀತಿ, ಕಾನ್ಸೆಪ್ಟ್ ನೋಡಿ ಇಷ್ಟವಾಯಿತು. ಅದರಲ್ಲೂ ನಿರ್ದೇಶಕರಿಗೆ ಕಾಲಿನ ಸಮಸ್ಯೆಯಿದೆ. ಅಂತಹುದರಲ್ಲೂ ಅವರಿಗಿರುವ ಸಿನಿಮಾ ಪ್ರೀತಿ ಕಂಡು ತುಂಬಾ ಖುಷಿಯಾಯಿತು. ಈಗಾಗಲೇ ನಾನು ತೆಲುಗು ಚಿತ್ರಗಳಲ್ಲಿ ಅಭಿನಯಿಸಿದ್ದೇನೆ.

ಸಿನಿಪದಬಂಧ-523



ಹೆಸರು ______________________

ವಿಳಾಸ ______________________

____

ದೂರವಾಣಿ ಸಂಖ್ಯೆ ______________________

ಎಡದಿಂದ ಬಲಕ್ಕೆ

1. ಪ್ರಿಯನಿಗಾಗಿ ಕಾಯುತ್ತಿರುವ ಹೆಣ್ಣು! 5
5. ಪ್ರಭಾಕರ್ "ಯುದ್ಧ ಕೇಸರಿ" 5
6. ಶಿವರಾಜ್‌ಕುಮಾರ್ ಇಳಿದ ಯುದ್ಧ ಭೂಮಿ 4
9. ನೀನು ನಕ್ಕರೆ __ ___ 5
11. ಕುಮಾರ್ ಗೋವಿಂದ್ ಅಭಿನಯದ ಪ್ರಾಣಿಯೊಂದರ ಊರು 5
13. ಸಾಹಸ ಸಿಂಹ ಭ್ರಷ್ಟರ ವಿರುದ್ಧ ಕಟ್ಟಿದ ಪಡೆ 4
16. ಶಶಿಕುಮಾರ್, ನಿವೇದಿತಾ ಜೈನ್ ಅಭಿನಯಕ್ಕೆ ಬಿ. ಸುಬ್ಬರಾವ್ ನಿರ್ದೇಶಕ 5
17. ಶಶಿಕುಮಾರನಿಗೆ ಹೆಂಡತಿಯ ಅಪ್ಪ ಬಲು ಇಷ್ಟ 5

ಮೇಲಿನಿಂದ ಕೆಳಕ್ಕೆ

1. ಅನಂತ್ ನಾಗ್ - ಪ್ರಭಾಕರ್ ಈರ್ವರೂ ಅಸಾಮಾನ್ಯರು 8
2. ವಿಷ್ಣುವರ್ಧನ್ "ಶ್ರೀಮಂತ" 4
3. ಸರದಾರನ ಬಾಣದ ರಭಸ 4
4. ನನ್ನ ಪ್ರತಿಜ್ಞೆ ಚಿತ್ರದ ನಾಯಕಿ 3
5. ಒಂಟಿಯಾಗಿ ಬಂದ ಪ್ರಾಣಿ 3
7. ರಾಜ್ ಕುಮಾರ್ ಅಭಿನಯದಲ್ಲಿ ಸುರನನ್ನು ಜಯಿಸಿದ ನರ 8
8. ಚಾಮುಂಡಿ ಹಿಡಿದ ಹಠ 2
10. ಮಹಾ ಪುರುಷ ಚಿತ್ರದ ಸಂಗೀತ ನಿರ್ದೇಶಕ 2
12. ಸಂಜನಾ ಹರಿಸಿದ ದೊಡ್ಡ ಹೊಳೆ 4
13. ಶರಣ್ ತೋರಿದ ಗೆಲುವಿನ ಸಂಕೇತ 3
14. ರಾಜಕುಮಾರ್ ಅಭಿನಯದ ಚಿತ್ರವೊಂದರ ಹೆಸರಿನಲ್ಲಿ ತೆಲುಗಿನ ನಟನಿದ್ದಾನೆ 4
15. ವಿಠಲನಿಗಾಗಿ ಮಣ್ಣು ತುಳಿದ ಭಕ್ತ 3

ವಿಜೇತರು: ವೆಂಕಟರಾಜು, ಭಾರತೀಯ ಜೀವ ವಿಮಾ ನಿಗಮ, ಚಾಮರಾಜನಗರ - 571313


ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 522ರ ಉತ್ತರ

ಮ	ತ್ತೆ	ವ	ಸಂ	ತ			ಅಂ		ಬ	
ತ್ತೇ		ಜ್ರ			ಅ	ಜ್ಞಾ	ತ	ವಾ	ಸ	
ಹಾ		ಕಾ			ಗ್ರ		ರಾ		ವ	
ಡಿ		ಯ	ಮ	ರಾ	ಜ		ಳ			ಹೊ
ತು								ಮಾ		ಸಿ
ಕೋ	ಕಿ	ಲ	ವಾ	ಣಿ		ಒ	ಡೆ	ದ	ಹಾ	ಲು
ಗಿ		ವ್								ಮೆ
ಲೆ			ಸೂ		ಮ	ಹೇ	ಶ್ವ	ರ		ಟ್ಟಿ
	ಹ		ರ್ಯ		ದ			ವಿ		ದ
	ಸಿ	ರಿ	ಚಂ	ದ	ನ			ಕಾ		ಹೆ
	ರು		ದ್ರ			ನೇ	ರ	ಳೆ	ಹ	ಣ್ಣು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015



ಇವಿಎಂ, ವಿವಿ ಪ್ಯಾಟ್‌ಗಳೊಂದಿಗೆ ಮತಗಟ್ಟೆಗಳಿಗೆ ತೆರಳುತ್ತಿರುವ ಅಧಿಕಾರಿಗಳು.

ಲೋಕಸಭಾ ಚುನಾವಣೆ ಮತದಾನಕ್ಕೆ ಕ್ಷಣಗಣನೆ

ನಂ.ಗೂಡು, ವರುಣ ಕ್ಷೇತ್ರದಲ್ಲಿ ಸಕಲ ಸಿದ್ಧತೆ

ಮತಗಟ್ಟೆಗೆ ತೆರಳಿದ ಚುನಾವಣಾ ಅಧಿಕಾರಿಗಳು

ನಂಜನಗೂಡು, ಏ.25– ಲೋಕಸಭಾ ಚುನಾವಣೆ ಮತದಾನಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಇದಕ್ಕಾಗಿ ನಂಜನಗೂಡು ಹಾಗೂ ವರುಣ ವಿಧಾನಸಭಾ ಕ್ಷೇತ್ರದಲ್ಲಿ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ.

ನಂಜನಗೂಡು ವಿಧಾನಸಭಾ ಕ್ಷೇತ್ರಕ್ಕೆ ಸರ್ಕಾರಿ ಬಾಲಕರ ಪದವಿಪೂರ್ವ ಕಾಲೇಜು ಆವರಣ ಹಾಗೂ ವರುಣ ವಿಧಾನಸಭಾ ಕ್ಷೇತ್ರಕ್ಕೆ ದೇವೀರಮ್ಮನಹಳ್ಳಿಯ ಜೆಎಸ್‌ಎಸ್ ಪದವಿ ಕಾಲೇಜಿನ ಆವರಣದಿಂದ ಇವಿಎಂ ಹಾಗೂ ವಿವಿ ಪ್ಯಾಟ್‌ಗಳೊಂದಿಗೆ ಚುನಾವಣಾ ಸಿಬ್ಬಂದಿ ಕೆಎಸ್‌ಆರ್‌ಟಿಸಿ ಬಸ್‌ಗಳ ಮೂಲಕ ಮತಗಟ್ಟೆಗಳಿಗೆ ತೆರಳಿದರು.

ನಂಜನಗೂಡು ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 246 ಮತಗಟ್ಟೆಗಳಿದ್ದು, ಈ ಪೈಕಿ 42 ಸೂಕ್ಷ್ಮ, 1 ಅತಿಸೂಕ್ಷ್ಮ ಮತಗಟ್ಟೆ ಎಂದು ಗುರುತಿಸಲಾಗಿದೆ. ಒಟ್ಟು 2,22,757 ಮತದಾರರಿದ್ದು, ಇದರಲ್ಲಿ 1,12,381 ಮಹಿಳೆಯರು, 1,10,369 ಪುರುಷರು ಹಾಗೂ 7 ತೃತೀಯ ಲಿಂಗಿಗಳು ಒಳಗೊಂಡಿದ್ದಾರೆ.

ಪ್ರತಿ ಮತಗಟ್ಟೆಗೆ ನಾಲ್ವರು ಅಧಿಕಾರಿಗಳು ಹಾಗೂ ಒಬ್ಬ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ. ಕಸುವಿನಹಳ್ಳಿ, ಮಲ್ಕುಂಡಿ, ಶಿರಮಳ್ಳಿ, ಕುರಹಟ್ಟಿ, ನೇರಳೆ ಗ್ರಾಮಗಳಲ್ಲಿ ಸಖಿ ಮತಗಟ್ಟೆಗಳನ್ನು ತೆರೆಯಲಾಗಿದೆ. ಚಿನ್ನದಗುಡಿಹುಂಡಿಯಲ್ಲಿ ವಿಶೇಷಚೇತನರ ಮತಗಟ್ಟೆ, ಬಂಕಹಳ್ಳಿಯಲ್ಲಿ ಹಾಡಿ ಜನಾಂಗದ ಮತಗಟ್ಟೆ, ಹೆಮ್ಮರಗಾಲದಲ್ಲಿ ರೈತ ಮತಗಟ್ಟೆ, ದೇವೀರಮ್ಮನಹಳ್ಳಿಯಲ್ಲಿ ಯುವ ಮತದಾರರ ಮತಗಟ್ಟೆ, ಹುಲ್ಲಹಳ್ಳಿಯಲ್ಲಿ ಯತ್ನಿಕ್ ಮತಗಟ್ಟೆ ತೆರೆಯಲಾಗಿದೆ. 69 ಅಧಿಕಾರಿಗಳು ವೀಕ್ಷಕರಾಗಿ ಕಾರ್ಯ ನಿರ್ವಹಿಸಲಿದ್ದಾರೆ ಎಂದು ತಹಸೀಲ್ದಾರ್ ಶಿವಕುಮಾರ್ ಕಾಸನೂರು ಮಾಹಿತಿ ನೀಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿನಿಧಿಸುವ ವರುಣ ವಿಧಾನಸಭಾ ಕ್ಷೇತ್ರದಲ್ಲಿ 261 ಮತಗಟ್ಟೆಗಳಿವೆ. ಇದರಲ್ಲಿ 32 ಸೂಕ್ಷ್ಮ ಮತಗಟ್ಟೆಗಳೆಂದು ಗುರುತಿಸಲಾಗಿದೆ. ಒಟ್ಟು 2,40,949 ಮತದಾರರಿದ್ದು, ಇದರಲ್ಲಿ 1,19,545 ಮಹಿಳೆಯರು, 1,21,391 ಪುರುಷರು ಹಾಗೂ 13 ತೃತೀಯ ಲಿಂಗಿಗಳಿದ್ದಾರೆ. ಕುಪ್ಪರವಳ್ಳಿ ಹಾಗೂ ಹೊಸಕೋಟೆ ಗ್ರಾಮಗಳಲ್ಲಿ ಸಖಿ ಮತಗಟ್ಟೆ ತೆರೆಯಲಾಗಿದೆ. ಕೆಂಪಿಸಿದ್ದನಹುಂಡಿಯಲ್ಲಿ ವಿಶೇಷಚೇತನ ಮತಗಟ್ಟೆ, ಮಲ್ಲೂಪುರದಲ್ಲಿ ರೈತರ ಮತಗಟ್ಟೆ, ತಾಂಡವಪುರದಲ್ಲಿ ಯತ್ನಿಕ್ ಮತಗಟ್ಟೆ ತೆರೆಯಲಾಗಿದೆ.

ಬನ್ನಿಕುಪ್ಪೆ ಮತಗಟ್ಟೆಗೆ ಜಿಪಂ ಸಿಇಓ ಭೇಟಿ, ಪರಿಶೀಲನೆ



ಬನ್ನಿಕುಪ್ಪೆ ಮತಗಟ್ಟೆಗೆ ಜಿಪಂ ಸಿಇಓ ಭೇಟಿ ನೀಡಿ, ಪರಿಶೀಲಿಸಿದರು.

ಹುಣಸೂರು, ಏ.25– ನಾಳೆ(ಏ.26) ನಡೆಯುವ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ತಾಲೂಕಿನ ಬನ್ನಿಕುಪ್ಪೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜಲ ಸಂರಕ್ಷಣೆ ಪರಿಕಲ್ಪನೆಯಡಿ ನಿರ್ಮಿಸಿರುವ ಮತಗಟ್ಟೆ ಸಂಖ್ಯೆ 146ಕ್ಕೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯಿತ್ರಿ ಭೇಟಿ ನೀಡಿ, ಪರಿಶೀಲಿಸಿದರು.

ಇದೇ ವೇಳೆ ಮಾತನಾಡಿದ ಅವರು, ಮತದಾನ ಸಂದರ್ಭದಲ್ಲಿ ಯಾವುದೇ ಸಮಸ್ಯೆಗಳಾಗದಂತೆ ನೋಡಿಕೊಳ್ಳುವಂತೆ ತಿಳಿಸಿದರು. ಬಳಿಕ ಉಮ್ಮತ್ತೂರು ಗ್ರಾಪಂ ವ್ಯಾಪ್ತಿಯ ಆಶ್ರಮ ಶಾಲೆ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಗುರುಪುರ ನಾಗಾಪುರ ಹಾಡಿಯ ಆಶ್ರಮ ಶಾಲೆಗೆ ಭೇಟಿ ನೀಡಿ ಕುಡಿಯುವ ನೀರು, ಶೌಚಾಲಯ, ಮತಗಟ್ಟೆ ಅಧಿಕಾರಿಗಳಿಗೆ ಉಳಿದುಕೊಳ್ಳಲು ಅವಶ್ಯಕವಿರುವ ಸೌಲಭ್ಯಗಳ ಕುರಿತು ಪರಿಶೀಲಿಸಿದರು. ಈ ವೇಳೆ ತಾಪಂ ಇಓ ಶಿವಕುಮಾರ, ಪಿಡಿಓ ರಾಘವೇಂದ್ರ ಪ್ರಸನ್ನ, ಮಹದೇವ್ ಸೇರಿದಂತೆ ಸೆಕ್ಟರ್ ಅಧಿಕಾರಿಗಳು, ಮತಗಟ್ಟೆ ಅಧಿಕಾರಿಗಳು, ಸಹಾಯಕ ಮತಗಟ್ಟೆ ಅಧಿಕಾರಿಗಳು ಹಾಗೂ ಗ್ರಾಪಂ ಸಿಬ್ಬಂದಿ ಉಪಸ್ಥಿತರಿದ್ದರು.

ಲೋಕಸಭಾ ಚುನಾವಣೆ: ಕೋಟೆಯಲ್ಲೂ ಸಕಲ ಸಿದ್ಧತೆ



ಮತಗಟ್ಟೆ ಕೇಂದ್ರಗಳಿಗೆ ತೆರಳಿದ ಮತಗಟ್ಟೆ ಅಧಿಕಾರಿಗಳು ಹಾಗೂ ಸಿಬ್ಬಂದಿ.

ಹೆಚ್.ಡಿ.ಕೋಟೆ, ಏ.25– ಲೋಕಸಭಾ ಚುನಾವಣೆಗೆ ತಾಲೂಕಿನಲ್ಲಿ ಸಕಲ ಸಿದ್ಧತೆ ಕೈಗೊಳ್ಳಲಾಗಿದ್ದು, ಮತಗಟ್ಟೆಗಳಿಗೆ ಚುನಾವಣಾಧಿಕಾರಿಗಳು ಹಾಗೂ ಸಿಬ್ಬಂದಿಗಳು ತೆರಳಿದರು ಎಂದು ತಹಸೀಲ್ದಾರ್ ಶ್ರೀನಿವಾಸ್ ತಿಳಿಸಿದರು.

ಪಟ್ಟಣದ ಸೆಂಟ್ ಮೇರಿಸ್ ಶಾಲಾ ವರಣದಲ್ಲಿ ಗುರುವಾರ ಮಾತನಾಡಿದ ಅವರು, ತಾಲೂಕಿನಲ್ಲಿ 282 ಮತಗಟ್ಟೆಗಳಿದ್ದು, ಅವುಗಳನ್ನು 28 ಸೆಕ್ಟರ್‌ಗಳನ್ನಾಗಿ ಮಾಡಿ ಅಧಿಕಾರಿಗಳನ್ನು ನಿಯೋಜಿಸಿ ಪ್ರತಿ ಸೆಕ್ಟರ್ ಅಧಿಕಾರಿಗೆ 10 ಮತಗಟ್ಟೆಗಳ ಜವಾಬ್ದಾರಿ ನೀಡಲಾಗಿದೆ ಎಂದರು.

ಚುನಾವಣೆ ಹಿನ್ನೆಲೆಯಲ್ಲಿ 1 ಡಿವೈಎಸ್ಪಿ, 5 ಇನ್ಸ್‌ಪೆಕ್ಟರ್, 14 ಸಬ್ ಇನ್ಸ್‌ಪೆಕ್ಟರ್, 16 ಎಎಸ್‌ಐ, 242 ಪೇದೆಗಳು, 16 ಪ್ಯಾರ ಮಿಲಿಟರಿ ಹಾಗೂ ಗೃಹ ರಕ್ಷಕ ದಳದ 1400 ಸಿಬ್ಬಂದಿಗಳನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ. ಅಲ್ಲದೇ ಚುನಾವಣಾ ಕಾರ್ಯಕ್ಕೆ 45 ಸಾರಿಗೆ ಬಸ್ ಹಾಗೂ 12 ಖಾಸಗಿ ಬಸ್‌ಗಳನ್ನು ಬಳಸಿಕೊಳ್ಳಲಾಗಿದೆ ಎಂದರು.

ತಾಲೂಕಿನಲ್ಲಿ 56 ಸೂಕ್ಷ್ಮ ಮತಗಟ್ಟೆಗಳಿದ್ದು, ಮುಂಜಾಗ್ರತಾ ಕ್ರಮವಾಗಿ ಪ್ರತಿಯೊಂದು ಮತಗಟ್ಟೆಗೆ ವೆಬ್ ಕಾಸ್ಟಿಂಗ್ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಮತಗಟ್ಟೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಅಕ್ಷರ ದಾಸೋಹ ಇಲಾಖೆಯಿಂದ ಊಟ, ತಿಂಡಿ ವ್ಯವಸ್ಥೆ ಮಾಡಲಾಗಿದೆ. ಮತದಾನದ ನಂತರ ಮತಯಂತ್ರಗಳ ಸುರಕ್ಷತೆಗಾಗಿ 6 ಭದ್ರತಾ ಕೊಠಡಿಗಳನ್ನು ಸಿದ್ಧಪಡಿಸಲಾಗಿದೆ ಎಂದರು.

ತಾಪಂ ಇಓ ಧರಣೇಶ್ ಮಾತನಾಡಿ, ತಾಲೂಕಿನಲ್ಲಿ ಹೆಚ್ಚು ಮತದಾನವಾಗುವಂತೆ ಮಾಡಲು ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಂದ ಹಾಗೂ ಪ್ರತಿ ಗ್ರಾಪಂಗಳಲ್ಲಿ ಈಗಾಗಲೇ ಮತದಾನದ ಬಗ್ಗೆ ಜಾಗೃತಿ ಮೂಡಿಸಲಾಗಿದೆ. 5 ಸಖಿ ಮತಗಟ್ಟೆ, 1 ಯುವ ಮತಗಟ್ಟೆ, 1 ವಿಶೇಷ ಚೇತನರ ಮತಗಟ್ಟೆ, 3 ಸಾಂಪ್ರದಾಯಿಕ ಮತಗಟ್ಟೆ, 1 ಥೀಮ್ ಬೇಸ್ ಮತಗಟ್ಟೆಗಳನ್ನು ರೂಪಿಸಲಾಗಿದೆ ಎಂದರು.

ಜಿಪಿಎಸ್‌ನಿಂದ ಮತಗಟ್ಟೆ ಸಿಬ್ಬಂದಿಗಳ ಚಲನವಲನ ವೀಕ್ಷಣೆ

ಉಪವಿಭಾಗಾಧಿಕಾರಿ ಮಹಮ್ಮದ್ ಹ್ಯಾರಿಸ್ ಸುಮೇರ್



ಹುಣಸೂರು, ಏ.25– ಲೋಕಸಭಾ ಚುನಾವಣೆಗೆ ತಾಲೂಕು ಆಡಳಿತ ಸಿದ್ಧತೆ ಕೈಗೊಂಡಿದೆ ಎಂದು ಸಹಾಯಕ ಚುನಾವಣಾಧಿಕಾರಿಯೂ ಆದ ಉಪವಿಭಾಗಾಧಿಕಾರಿ ಮಹಮ್ಮದ್ ಹ್ಯಾರಿಸ್ ಸುಮೇರ್ ತಿಳಿಸಿದರು.

ನಗರದ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲೇ ಪ್ರಥಮ ಬಾರಿಗೆ ಹುಣಸೂರಿನಲ್ಲಿ ಜಿಪಿಎಸ್ ಮ್ಯಾಪ್ ಅನ್ನು ಹೊಸದಾಗಿ ಸಿದ್ಧಪಡಿಸಿದ್ದು, ಇದರಿಂದ ಮತಗಟ್ಟೆಗೆ ಹೋಗುವ ಎಲ್ಲಾ ಸಿಬ್ಬಂದಿಗಳ ಮತ್ತು ವಾಹನಗಳ ಚಲನವಲನವನ್ನು ನಾವು ಕುಳಿತಲ್ಲೇ ವೀಕ್ಷಿಸಬಹುದಾಗಿದೆ ಎಂದರು.

ಚುನಾವಣೆಯಲ್ಲಿ 1096 ಮಂದಿ ಕಾರ್ಯ ನಿರ್ವಹಿಸಲಿದ್ದಾರೆ. ಹೆಚ್ಚುವರಿ ಸಿಬ್ಬಂದಿ ಕೇಂದ್ರ ಸ್ಥಾನದಲ್ಲೇ ಇರಬೇಕು. ಅಲ್ಲದೇ ಚುನಾವಣೆ ಸಿಬ್ಬಂದಿ ಜಿಲ್ಲೆಯವರೇ ಆದರೆ ಕರ್ತವ್ಯ ನಿರ್ವಹಿಸುವ ಮತಗಟ್ಟೆಯಲ್ಲೇ ಮತದಾನ ಮಾಡಬಹುದು ಎಂದರು.

ಡಿವೈಎಸ್‌ಪಿ ಗೋಪಾಲಕೃಷ್ಣ ಮಾತನಾಡಿ, ತಾಲೂಕಿನ 274 ಮತಗಟ್ಟೆಗಳ ಮೇಲುಸ್ತುವಾರಿಗೆ 17 ಸೆಕ್ಟರ್ ಅಧಿಕಾರಿಗಳನ್ನು ನೇಮಿಸಲಾಗಿದೆ. ಒಂದು ಸೆಕ್ಟರ್‌ಗೆ 14 ಮತಗಟ್ಟೆಗಳು ಸೇರ್ಪಡೆಗೊಳ್ಳಲಿದ್ದು, ಚುನಾವಣೆ ಕಾರ್ಯಕ್ಕೆ ಸ್ಥಳೀಯ ಸಿಬ್ಬಂದಿ ಜೊತೆಗೆ ಶಿವಮೊಗ್ಗ, ಹಾವೇರಿ, ಬಳ್ಳಾರಿಗಳಿಂದ ಸಿಬ್ಬಂದಿ ಕರೆಸಿಕೊಳ್ಳಲಾಗಿದೆ. ಅಲ್ಲದೇ ಭದ್ರತೆಗಾಗಿ ಇಂಡೋ–ಟಿಬೆಟಿಯನ್ ಫೋರ್ಸ್ ಕರೆಸಿಕೊಳ್ಳಲಾಗಿದೆ. ಓರ್ವ ಡಿವೈಎಸ್ಪಿ, ನಾಲ್ವರು ಸಿಪಿಐ, 17 ಎಸ್‌ಐ, 150 ಸಿವಿಲ್ ಸಿಬ್ಬಂದಿ, 183 ಹೋಂ ಗಾರ್ಡ್ ಕಾರ್ಯ ನಿರ್ವಹಿಸಲಿದ್ದಾರೆ ಎಂದರು.

ತಾಪಂ ಇಓ ಮಾತನಾಡಿ, ಕಳೆದ ಬಾರಿ ಶೇ.70 ರಷ್ಟು ಮತದಾನವಾಗಿತ್ತು. ಈ ಬಾರಿ ಶೇ.5 ರಷ್ಟು ಮತದಾನ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದರು. ಈ ವೇಳೆ ತಹಸೀಲ್ದಾರ್ ನಯನ ಕುಮಾರಿ, ಬಿಇಓ ರೇವಣ್ಣ ಇದ್ದರು.

ವಿದ್ಯಾರ್ಥಿನಿ ನೇಹಾ ಹೀರೇಮಠ್ ಹತ್ಯೆ ಪ್ರಕರಣ

ಆರೋಪಿಗೆ ಗಲ್ಲು ಶಿಕ್ಷೆ ವಿಧಿಸಲು ಆಗ್ರಹ



ತಿ.ನರಸೀಪುರ, ಏ.25– ಹುಬ್ಬಳ್ಳಿಯ ಬಿವಿಬಿ ಕಾಲೇಜು ಆವರಣದಲ್ಲಿ ನಡೆದ ವಿದ್ಯಾರ್ಥಿನಿ ನೇಹಾ ಹಿರೇಮಠ್ ಹತ್ಯೆ ಆರೋಪಿ ಫಯಾಜ್‌ಗೆ ಗಲ್ಲು ಶಿಕ್ಷೆ ವಿಧಿಸಬೇಕು ಎಂದು ತಾಲೂಕು ಜಾಗತಿಕ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ತೊಟ್ಟವಾಡಿ ಎಂ.ರವಿ ಆಗ್ರಹಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂತಹ ಘೋರ ದುಷ್ಕೃತ್ಯ ಎಸಗಿದವರಿಗೆ ಗಲ್ಲು ಶಿಕ್ಷೆ ಆಗಬೇಕು. ಆಗ ಮಾತ್ರ ಇಂತಹ ಘಟನೆಗಳು ಮರುಕಳಿಸದಂತೆ ತಡೆಗಟ್ಟಲು ಸಾಧ್ಯ. ಇಂತಹ ಘಟನೆ ಯಾರೇ ಮಾಡಿದರೂ ಖಂಡನಾರ್ಹ. ಇದೊಂದು ಬರ್ಬರ ಕೃತ್ಯ, ರಾಜ್ಯ ಸರ್ಕಾರ ಕಾನೂನು ಸುವ್ಯವಸ್ಥೆ ಕಾಪಾಡಲು ವಿಫಲವಾಗಿದೆ. ಹಾಡಹಗಲೇ ವಿದ್ಯಾರ್ಥಿನಿಯನ್ನು ಕಾಲೇಜು ಕ್ಯಾಂಪಸ್‌ನಲ್ಲೇ ಅನ್ಯ ಕೋಮಿಗೆ ಸೇರಿದ ವಿದ್ಯಾರ್ಥಿ ಬರ್ಬರವಾಗಿ ಹತ್ಯೆ ಮಾಡಿದ್ದಾನೆಂದರೆ ರಾಜ್ಯದ ಕಾನೂನು ಸುವ್ಯವಸ್ಥೆ ಎಷ್ಟು ಹದಗೆಟ್ಟಿದೆ ಎಂಬುದು ತಿಳಿಯುತ್ತದೆ ಎಂದರು.

ತಾಲೂಕು ಬಸವ ಕೇಂದ್ರದ ಅಧ್ಯಕ್ಷ ಪರಮೇಶ್ ಪಟೇಲ್ ಮಾತನಾಡಿ, ನೇಹಾ ಹಿರೇಮಠ್ ಹತ್ಯೆ ಇಡೀ ಮಾನವ ಕುಲವೇ ತಲೆ ತಗ್ಗಿಸುವ ಘಟನೆಯಾಗಿದೆ. ಇಂತಹ ಘಟನೆಗಳಿಂದ ಸಮಾಜದ ಸ್ವಾಸ್ಥ್ಯ ಕೆಡಲಿದೆ. ಹಾಗಾಗಿ ಸರ್ಕಾರ ಮುಂದೆ ಇಂತಹ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಬೇಕು. ಪೊಲೀಸರು ಆರೋಪಿಯನ್ನು ತ್ವರಿತವಾಗಿ ಬಂಧಿಸಿರುವುದು ಸ್ವಾಗತಾರ್ಹ. ಆದರೆ ಘೋರಕೃತ್ಯ ಎಸಗಿದ ಇಂತಹ ಆರೋಪಿಯನ್ನು ಯಾವುದೇ ವಿಳಂಬ ಮಾಡದೆ ಗಲ್ಲು ಶಿಕ್ಷೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಜಾಗತಿಕ ಲಿಂಗಾಯತ ಮಹಾಸಭಾ ಟಿ.ಎನ್. ನಾಗರಾಜು, ಹೆಳವರಹುಂಡಿ ಸತೀಶ್, ಎಲ್‌ಐಸಿ ಮಹದೇವಪ್ಪ, ನಾಗರಾಜಪ್ಪ, ನಂಜುಂಡಸ್ವಾಮಿ, ಲಿಂಗರಾಜಪ್ಪ, ಓಂಕಾರ್ ಸ್ವಾಮಿ, ಚೌಹಳ್ಳಿ ಲಿಂಗರಾಜಪ್ಪ, ಕು.ಶಿ.ಬ್ರಂಗೀಶ್, ಗುರುಸ್ವಾಮಿ, ಕುಮಾರ್. ಡಣಾಯಕನಪುರ ಲಿಂಗರಾಜಪ್ಪ ಮಹದೇವಸ್ವಾಮಿ, ನಾಗಪ್ಪ ರೈತ ಸಂಘದ ಅಧ್ಯಕ್ಷ ಪ್ರದೀಪ್, ಸೋಮಶೇಖರ್, ಕೆ.ಜಿ.ಶಿವಪ್ರಸಾದ್, ಅಕ್ಕಮಹಾದೇವಿ ಸಂಘದ ಕಾರ್ಯದರ್ಶಿ ಮಹದೇವಸ್ವಾಮಿ ಹಾಜರಿದ್ದರು.

ಪ್ರಬುದ್ಧ ಭಾರತಕ್ಕಾಗಿ ಶ್ರಮಿಸಿದ ಡಾ. ಅಂಬೇಡ್ಕರ್

ರಾಷ್ಟ್ರಪ್ರಶಸ್ತಿ ಪುರಸ್ಕೃತ ಸಂಶೋಧಕ ಡಾ.ಕುಪ್ಪನಹಳ್ಳಿ ಎಂ.ಭೈರಪ್ಪ ಅಭಿಪ್ರಾಯ



ಹುಣಸೂರಿನ ರತ್ನಪುರಿಯಲ್ಲಿ ಅಂಬೇಡ್ಕರ್ ಜಯಂತಿ ನಡೆಯಿತು.

ಹುಣಸೂರು, ಏ.25– ಸರ್ವ ಜನಾಂಗದ ನಡುವೆ ಸಮಾನತೆ ತರುವ ಮೂಲಕ ಪ್ರಬುದ್ಧ ಭಾರತ ನಿರ್ಮಾಣಕ್ಕಾಗಿ ಶ್ರಮಿಸಿದ ಮಹಾನಾಯಕ ಡಾ.ಬಿ.ಆರ್. ಅಂಬೇಡ್ಕರ್ ಎಂದು ರಾಷ್ಟ್ರಪ್ರಶಸ್ತಿ ಪುರಸ್ಕೃತ ಸಂಶೋಧಕ ಡಾ.ಕುಪ್ಪನಹಳ್ಳಿ ಎಂ.ಭೈರಪ್ಪ ಅಭಿಪ್ರಾಯಪಟ್ಟರು.

ತಾಲೂಕಿನ ರತ್ನಪುರಿಯಲ್ಲಿ ಅಂಬೇಡ್ಕರ್ ಯುವಕ ಸಂಘ, ಮಹಿಳಾ ಸಂಘಗಳು ಹಾಗೂ ಸ್ವಸಹಾಯ ಸಂಘಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ ಜಯಂತ್ಯುತ್ಸವದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ಭಾರತದ ಅಸಮಾನತೆಯ ಕೊಳೆಯನ್ನು ತೊಳೆದು ಸರ್ವಜನಾಂಗದ ಹಿತಕ್ಕಾಗಿ ಮೇಲ್ಜಾತಿಯ ಅಮಾನವೀಯತೆಯನ್ನು ವಿಮರ್ಶಿಸುತ್ತಾ, ತಳಸಮುದಾಯಗಳನ್ನು ಮಾನವೀಯವಾಗಿ ಮೇಲೆತ್ತುವ ಮಹೋನ್ನತ ಕೆಲಸ ಮಾಡಿದರು ಎಂದರು.

ಬಸವಣ್ಣನವರ ಸರ್ವ ಜನಾಂಗಗಳ ಸಮತೆಯ ಬಾಳನ್ನೇ ಹಂಬಲಿಸಿದ ಭಾರತೀಯ ಸರ್ವಾಭ್ಯುದಯ ಸಾರಥಿಯಾದ ಭಾರತ ಸಂವಿಧಾನದ ಪೀಠಿಕೆಯಲ್ಲಿ, ಬಾಬಾ ಸಾಹೇಬ್ ಸಾರಿರುವುದು ಭಾರತೀಯರಾದ ನಾವು ಎಂತಲೇ ಅದಕ್ಕೆ ಅಂಬೇಡ್ಕರ್ ಅವರನ್ನು ಭಾರತೀಯರಾದ ನಾವೆಲ್ಲ ನಮ್ಮಗಳ ಹೃದಯಸ್ಥ ಮಾಡಿಕೊಂಡಿದ್ದೇವೆಯೇ ಎಂಬ ಪ್ರಶ್ನೆ ಅಂತರಂಗದಲ್ಲಿ ಕೇಳಿಕೊಳ್ಳಬೇಕಿದೆ ಎಂದರು.

ದಸಂಸ ಮುಖಂಡ ಹರಿಹರ ಆನಂದ ಸ್ವಾಮಿ ಮಾತನಾಡಿ, ಪ್ರಜಾಪ್ರತಿನಿಧಿಗಳು ಭಾರತ ಸಂವಿಧಾನದ ಆಂತರ್ಯವನ್ನು ಅರಿಯದೆ, ವಿಕೃತವಾಗಿ ನಡೆದುಕೊಳ್ಳುತ್ತಿರುವುದು ದುರಂತ. ಜಾತೀಯತೆ ಹಾಗೂ ಭ್ರಷ್ಟಾಚಾರ ಮಾಡುತ್ತಾ ನಂಬಿದ ಪ್ರಜೆಗಳನ್ನು ನಯವಂಚಕ ನುಡಿಗಳಿಂದ ವಂಚಿಸುತ್ತಾ ಸರ್ವರಕ್ಷಕ ಸಂವಿಧಾನ ಶಕ್ತಿಹೀನಗೊಳಿಸುವ ಹುನ್ನಾರ ನಡೆಯುತ್ತಿದೆ. ಮನಬಂದತೆ ಹೊರದಬ್ಬುವ ಹಾಗೂ ಒಡೆದಾಳುವ ಕುತಂತ್ರಗಳನ್ನು ಭಾರತೀಯರಾದ ನಾವೆಲ್ಲ ಪ್ರೀತಿ, ಸಹನೆಯಿಂದ ಅರ್ಥಮಾಡಿಕೊಂಡು ಸಂವಿಧಾನ ವಿರೋಧಿಗಳಿಗೆ ತಕ್ಕಪಾಠ ಕಲಿಸಬೇಕಿದೆ. ಅಂಬೇಡ್ಕರ್ ಬರೆದಂತಹ ಸಂವಿಧಾನವನ್ನು ರಕ್ಷಿಸಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಹೈಯರ್ ಸೆಕೆಂಡರಿ ಮದರಸ ಕಾಲೇಜಿನ ಪ್ರಾಂಸುಪಾಲ ಎಂ.ತಮ್ಲೀಖ್ ದಾರಮಿ ಹಾಗೂ ಶಾಂತಿಪುರದ ಸೇಂಟ್ ಜೇಮ್ಸ್ ಚರ್ಚ್ ಫಾದರ್ ಸಂತೋಷ್, ಗ್ರಾಪಂ ಸದಸ್ಯ ವಿಜೇಂದ್ರಕುಮಾರ್ ಮಾತನಾಡಿದರು. ಮುಖಂಡರಾದ ಬಿ.ವೈ.ಪ್ರಸನ್ನ, ನಿಂಗರಾಜ್ ಮಲ್ಲಾಡಿ, ರತ್ನಪುರಿ ಪುಟ್ಟಸ್ವಾಮಿ, ಮಾಜಿ ತಾಪಂ ಸದಸ್ಯರಾದ ಪ್ರಭಾಕರ್, ಅಜ್ಗರ್ ಪಾಷಾ, ತಾಲೂಕು ಕುರುಬ ಸಂಘದ ಅಧ್ಯಕ್ಷ ಡಿ.ಕೆ.ಕುನ್ನೇಗೌಡ, ಶಿವಣ್ಣ, ಉದ್ಯಮಿಗಳಾದ ಕೃಷ್ಣ ಕೋಡಿ, ನಾಡಪ್ಪನಹಳ್ಳಿ ರಾಜು, ಕರ್ಣ, ಗ್ರಾಪಂ ಅಧ್ಯಕ್ಷೆ ಮುಬಾರಕ್ ಬಾನು, ಸದಸ್ಯರಾದ ರತ್ನ ರಾಜಶೇಖರ್ ಮೂರ್ತಿ, ಶಾಂತಿ, ಮೋಹನಾಚಾರಿ, ರಾಮಬೋವಿ, ಅಲ್ತಾಫ್ ಷರೀಫ್ ಸೇರಿದಂತೆ ಯುವಕರು, ಯಜಮಾನರು ಅನೇಕರು ಹಾಜರಿದ್ದರು.

ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆ



ನಂಜನಗೂಡು ತಾಲೂಕಿನ ಕಡಬೂರು ಗ್ರಾಮದ ಬಸವೇಶ್ವರ ಯುವಕ ಸಂಘದ ನೂರಾರು ಯುವಕರು ಬಿಜೆಪಿ ತೊರೆದು ಶಾಸಕ ದರ್ಶನ್ ಹಾಗೂ ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಬುಲೆಟ್ ಮಹದೇವಪ್ಪ ನೇತೃತ್ವದಲ್ಲಿ ಕಾಂಗ್ರೆಸ್ ಸೇರ್ಪಡೆಗೊಂಡರು. ಈ ವೇಳೆ ಮುಖಂಡ ಸೋಮೇಶ್ ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರತ್ನಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರತ್ನಂ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ರುಸ್ಲಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರತ್ನಂ (ತ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ರೂಬನ್ (ತ)	4 ಪ್ರದರ್ಶನಗಳು
ಸಂಗಂ	
ಅವತಾರ ಪುರುಷ 2 (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ರತ್ನಂ (ತ)	4 ಪ್ರದರ್ಶನಗಳು
ಪ್ರಭಾ	
ಇತ್ಯಾದಿ (ಕ)	2 ಪ್ರದರ್ಶನಗಳು
ಆತ್ಮ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕುಂಗ್ ಫೂ ಪಾಂಡ 4 (3ಡಿ) (ಇಂ): ಬೆ.11.30ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.30ಕ್ಕೆ, ಗಿಲ್ಲಿ (ತ): ಮ.3.50ಕ್ಕೆ, ಆವೇಶಂ (ಮ): ರಾ.7ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ಇತ್ಯಾದಿ (ಕ): ಬೆ.11.30ಕ್ಕೆ, O2 (ಕ): ಮ.1.55ಕ್ಕೆ, ದಾಸವರೇಣ್ಯ ಶ್ರೀ ವಿಜಯದಾಸರು (ಕ): ಸಂ.4.15ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ರಾ.7ಕ್ಕೆ, ಪವಿ ಕೇರ್‌ಟೇಕರ್ (ಮ): ರಾ.10.10ಕ್ಕೆ,
ಸ್ಕ್ರೀನ್ 3	ರತ್ನಂ (ತ): ಮ.1.10ಕ್ಕೆ, ಸಂ.4.10ಕ್ಕೆ, ಯುವ (ಕ): ರಾ.7.10ಕ್ಕೆ, ರುಸ್ಲಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಮಂಜುಮ್ಮೆಲ್ ಬಾಯ್ಸ್ (ಮ): ಮ.1.45ಕ್ಕೆ, ಘೋಸ್ಟ್‌ಬಸ್ಟರ್ಸ್ ಫ್ರೋಜನ್ ಎಂಪೈರ್ (ಇಂ): ಸಂ.4.50ಕ್ಕೆ, ರಾ.7.20ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್

LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.25ಕ್ಕೆ, ರಾ.10ಕ್ಕೆ, ಯುವ (ಕ): ಮ.1ಕ್ಕೆ, ಸಂ.4.15ಕ್ಕೆ, O2 (ಕ): ರಾ.7.30ಕ್ಕೆ.
ಸ್ಕ್ರೀನ್ 2	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.45ಕ್ಕೆ, ಸಂ.5.55ಕ್ಕೆ, ಮೈದಾನ್ (ಹಿಂ): ಮ.2.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.9.20ಕ್ಕೆ.
ಸ್ಕ್ರೀನ್ 3	ಯುವ (ಕ): ಬೆ.10.10ಕ್ಕೆ, O2 (ಕ): ಮ.1.25ಕ್ಕೆ, ಪಾರಿಜಾತ ಪರ್ವಂ (ತೆ): ಮ.3.55ಕ್ಕೆ, ಆವೇಶಂ (ಮ): ಸಂ.6.50ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಮೈದಾನ್ (ಹಿಂ): ಬೆ.11.25ಕ್ಕೆ, ರಾ.9.50ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ಮ.3.10ಕ್ಕೆ, ಯುವ (ಕ): ಸಂ.6.35ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್,

2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,

1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮುತ್ತುಮಾರಿಯಮ್ಮ ದೇವಾಲಯದ ರಸ್ತೆ ಸಮಸ್ಯೆ ಹಿನ್ನೆಲೆ

ಚುನಾವಣೆ ಬಹಿಷ್ಕರಿಸುವುದಾಗಿ ಗ್ರಾಮಸ್ಥರಿಂದ ಪ್ರತಿಭಟನೆ



ಚನ್ನಕಲ್ ಕಾವಲ್ ಗ್ರಾಮದ ಮುತ್ತುಮಾರಿಯಮ್ಮ ದೇವಾಲಯದ ಎದುರು ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಬೆಟ್ಟದಪುರ, ಏ.25– ಇಲ್ಲಿಗೆ ಸಮೀಪದ ಚನ್ನಕಲ್ ಕಾವಲ್ ಗ್ರಾಮದ ಮುತ್ತು ಮಾರಿಯಮ್ಮ ದೇವಾಲಯದ ರಸ್ತೆ ಸಮಸ್ಯೆ ಬಗೆಹರಿಯುವವರೆಗೂ ನಾವು ಮತದಾನ ಮಾಡುವುದಿಲ್ಲ ಎಂದು ದೇವಾಲಯದ ಮುಂಭಾಗ ಆಧಾರ್ ಕಾರ್ಡ್ ಹಾಗೂ ವೋಟರ್ ಐಡಿ ಇಟ್ಟು ಗುರುವಾರ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಗ್ರಾಮದ ಮುಖಂಡ ಸಿ.ಆರ್.ಪ್ರಕಾಶ್ ಮಾತನಾಡಿ, ಪೂರ್ವಜರ ಕಾಲದಿಂದಲೂ ನಾವು ಈ ದೇವಾಲಯದಲ್ಲಿ ಪೂಜೆ ಮಾಡಿಕೊಂಡು ಬಂದಿದ್ದೇವೆ. ಕಳೆದ 33 ವರ್ಷಗಳಿಂದಲೂ ಹಬ್ಬ ಆಚರಣೆ ಮಾಡಿ ಅಕ್ಕಪಕ್ಕದ ಗ್ರಾಮಗಳಿಗೆ ಅನ್ನದಾನ ಮಾಡುತ್ತಿದ್ದೇವೆ. ಮೇ 2 ಮತ್ತು 3 ರಂದು ವಾರ್ಷಿಕೋತ್ಸವ ಆಚರಿಸಲು ಸಕಲ ಸಿದ್ಧತೆ ಕೈಗೊಂಡಿದ್ದೇವೆ. ಆದರೆ ಈ ಭಾಗದ ವ್ಯಕ್ತಿಯೋರ್ವ ರಸ್ತೆ ಒತ್ತುವರಿ ಮಾಡಿ ಈ ವರ್ಷ ಹಬ್ಬ ಆಚರಿಸಿ. ಮುಂದಿನ ವರ್ಷ ಹಬ್ಬ ಆಚರಿಸಬಾರದು. ಅದಕ್ಕೆ ಅವಕಾಶ ನೀಡುವುದಿಲ್ಲ ಎಂದು ತಾಕೀತು ಮಾಡಿದ್ದಾರೆ ಎಂದರು.

ಈ ದೇವಾಲಯಕ್ಕೆ ರಸ್ತೆ ಸಮಸ್ಯೆ ಇದ್ದ ಕಾರಣ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ ಹಿನ್ನೆಲೆಯಲ್ಲಿ ತಹಸೀಲ್ದಾರ್ ರಸ್ತೆಗೆ ಜಾಗ ನೀಡಿ ಓಡಾಡಲು ಅನುವು ಮಾಡಿಕೊಟ್ಟಿದ್ದರು. ಆದರೆ ಇಲ್ಲಿನ ಪ್ರಭಾವಿ ವ್ಯಕ್ತಿಯೊಬ್ಬರು ಅಧಿಕಾರಿಗಳಿಗೆ, ಸರ್ಕಾರಕ್ಕೆ ಮಾನ್ಯತೆ ನೀಡದೆ ರಸ್ತೆ ಒತ್ತುವರಿ ಮಾಡಿಕೊಂಡು ನಮ್ಮಗಳ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ. ಹಬ್ಬದ ವಿಚಾರವಾಗಿ ಈಗಾಗಲೇ ಕರಪತ್ರ ಹಂಚಲಾಗಿದೆ. ಪ್ರತಿ ಬಾರಿ ಇದೇ ಸಮಸ್ಯೆಯಾದರೆ ನಮಗೆ ಅನ್ಯಾಯವಾಗುತ್ತದೆ. ಆದ್ದರಿಂದ 300 ಕುಟುಂಬಗಳು ಚುನಾವಣೆ ಬಹಿಷ್ಕರಿಸುವುದಾಗಿ ಎಚ್ಚರಿಕೆ ನೀಡಿದರು.

ಗ್ರಾಮದ ನಿವಾಸಿ ಕೃಷ್ಣವೇಣಿ ಮಾತನಾಡಿ, ಸರ್ಕಾರದಿಂದಲೇ ನಮಗೆ ರಸ್ತೆ ಮಾಡಿಕೊಟ್ಟಿದ್ದರು. ರಾಜಕೀಯದವರ ಪ್ರಭಾವದಿಂದ ಓಡಾಡಲು ಸಮಸ್ಯೆಯಾಗಿದೆ. ಈ ಸಮಸ್ಯೆ ಬಗೆಹರಿಯದಿದ್ದರೆ 300 ಕುಟುಂಬದ ಸದಸ್ಯರು ಜಿಲ್ಲಾಧಿಕಾರಿಗಳಿಗೆ ನಮ್ಮ ಆಧಾರ್ ಕಾರ್ಡ್ ಹಾಗೂ ವೋಟರ್ ಐಡಿ ತಲುಪಿಸಿ, ಇನ್ನು ಮುಂದೆ ಅಲೆಮಾರಿ ಜೀವನ ಮಾಡುತ್ತೇವೆ ಎಂದು ಕಿಡಿಕಾರಿದರು.

ಗ್ರಾಪಂ ಸದಸ್ಯೆ ಲೀಲಾವತಿ ಮಾತನಾಡಿ, ದೇವಾಲಯದ ಸುತ್ತ ಪ್ರಬಲರು ಒತ್ತುವರಿ ಮಾಡಿಕೊಂಡಿದ್ದಾರೆ. ಮಾಜಿ ಶಾಸಕ ಕೆ.ಮಹದೇವ್ ದೇವಾಲಯದ ಅಭಿವೃದ್ಧಿಗೆ 4 ಲಕ್ಷ ರೂ. ಅನುದಾನ ನೀಡಿದ್ದಾರೆ. ಆದರೆ ಆ ಅನುದಾನ ಬಳಸದಂತಾಗಿದೆ. ಹೀಗಾಗಿ ಮುಂಬರುವ ದಿನಗಳಲ್ಲಿ ರಸ್ತೆ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಮನವಿ ಮಾಡಿದರು.

ಸ್ಥಳಕ್ಕಾಗಮಿಸಿದ ತಹಸೀಲ್ದಾರ್ ಸುರೇಂದ್ರ ಮೂರ್ತಿ ಮಾತನಾಡಿ, ನಿಮ್ಮ ಮೂಲಭೂತ ಹಕ್ಕನ್ನು ಚಲಾಯಿಸಿ. ನಿಮ್ಮ ಬೇಡಿಕೆಯನ್ನು ಅರ್ಜಿ ಮೂಲಕ ನಮಗೆ ಸಲ್ಲಿಸಿದರೆ ನಾವು ಪರಿಶೀಲಿಸಿ ಕಾನೂನಾತ್ಮಕವಾಗಿ ಪರಿಹರಿಸುವ ಕ್ರಮ ಕೈಗೊಳ್ಳುತ್ತೇವೆ. ಎಲ್ಲರೂ ತಪ್ಪದೇ ಮತದಾನ ಮಾಡಿ ಎಂದು ಗ್ರಾಮಸ್ಥರ ಮನವೊಲಿಸಿದರು.

ಪ್ರತಿಭಟನೆಯಲ್ಲಿ ಮುಖಂಡ ಸುರೇಶ್, ಮಣಿ, ಷಣ್ಮುಗ, ಕಾವೇರಿ, ಮಂಜುನಾಥ್, ರಾಮಚಂದ್ರ, ಗಂಗೂಲಿ, ಕಾಮಾಕ್ಷಿ, ಲಕ್ಷ್ಮಿ, ಚೆಲುವಿ, ಪಾಳಿಯಮ್ಮ, ರೂಪಾ, ವೆಂಕಟೇಶ್, ಶಾಂತಮ್ಮ ಅಮಿತ ಭಾಗವಹಿಸಿದ್ದರು.

ಮತ್ತೆ ಗೆಲುವಿನ ಲಯಕ್ಕೆ ಮರಳಿದ ಆರ್‌ಸಿಬಿ



ಹೈದರಾಬಾದ್, ಏ.25– ಸತತ ಸೋಲಿನಿಂದ ಕಂಗೆಟ್ಟಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ 35 ರನ್‌ಗಳ ಭರ್ಜರಿ ಗೆಲುವು ಸಾಧಿಸಿದೆ. ಆ ಮೂಲಕ ಸತತ 6 ಸೋಲು ಅನುಭವಿಸಿದ್ದ ಆರ್‌ಸಿಬಿ ಮತ್ತೆ ಗೆಲುವಿನ ಲಯಕ್ಕೆ ಮರಳಿದೆ.

ಇಲ್ಲಿನ ರಾಜೀವ್ ಗಾಂಧಿ ಅಂತರಾಷ್ಟ್ರೀಯ ಮೈದಾನದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 206 ರನ್ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ಫಾಫ್ ಡು ಪ್ಲೆಸಿಸ್ ಹಾಗೂ ವಿರಾಟ್ ಕೊಹ್ಲಿ ಮೊದಲ ವಿಕೆಟ್‌ಗೆ 48 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಆದರೆ ಡುಪ್ಲೆಸಿಸ್ 12 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಒಳಗೊಂಡ 25 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಇದರ ಬೆನ್ನಲ್ಲೇ ವಿಲ್ ಜ್ಯಾಕ್ಸ್ ಕೇವಲ 6 ರನ್ ಗಳಿಸಿ ಔಟಾದರು.

65 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡಿದ್ದ ತಂಡಕ್ಕೆ ರಜತ್ ಪಾಟೀದಾರ್ ಹಾಗೂ ವಿರಾಟ್ ಕೊಹ್ಲಿ ಆಸರೆಯಾದರು. ಒಂದೆಡೆ ರಜತ್ ಪಾಟೀದಾರ್ ಸಿಡಿಲಬ್ಬರದ ಬ್ಯಾಟಿಂಗ್ ನಡೆಸಿದರೆ, ಮತ್ತೊಂದು ತುದಿಯಲ್ಲಿ ವಿರಾಟ್ ಕೊಹ್ಲಿ ಜವಾಬ್ದಾರಿಯುತ ಬ್ಯಾಟಿಂಗ್ ನಡೆಸಿದರು. ಆ ಮೂಲಕ 3ನೇ ವಿಕೆಟ್‌ಗೆ ಈ ಜೋಡಿ 65 ರನ್ ಜೊತೆಯಾಟವಾಡಿತು. ಪಾಟೀದಾರ್ 20 ಎಸೆತಗಳಲ್ಲಿ 2 ಬೌಂಡರಿ, 5 ಸಿಕ್ಸರ್ ಸಹಿತ 50 ರನ್ ಸಿಡಿಸಿ ನಿರ್ಗಮಿಸಿದರು. ಮತ್ತೊಂದೆಡೆ ಜವಾಬ್ದಾರಿಯುತ ಬ್ಯಾಟಿಂಗ್ ನಡೆಸಿದ ಕೊಹ್ಲಿ 4 ಬೌಂಡರಿ, 1 ಸಿಕ್ಸರ್ ಒಳಗೊಂಡ 51 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಉಳಿದಂತೆ ದಿನೇಶ್ ಕಾರ್ತಿಕ್ 11, ಸ್ವಪ್ನಿಲ್ ಸಿಂಗ್ 12 ಹಾಗೂ ಮಹಿಪಾಲ್ ಲೋಮ್ರಾರ್ 7 ರನ್ ಗಳಿಸಿದರು. ಕ್ಯಾಮರೋನ್ ಗ್ರೀನ್ 20 ಎಸೆತಗಳಲ್ಲಿ 5 ಬೌಂಡರಿ ಒಳಗೊಂಡ ಅಜೇಯ 37 ರನ್ ಸಿಡಿಸುವ ಮೂಲಕ ತಂಡದ ಮೊತ್ತವನ್ನು ಇನ್ನೂರರ ಗಡಿದಾಟಿಸುವಲ್ಲಿ ಯಶಸ್ವಿಯಾದರು. ಸನ್‌ರೈಸರ್ಸ್ ಹೈದರಾಬಾದ್ ಪರ ಉನಾದ್ಕತ್ 3, ಟಿ.ನಟರಾಜನ್ 2 ಹಾಗೂ ಪ್ಯಾಟ್ ಕಮಿನ್ಸ್, ಮಯಾಂಕ್ ಮಾರ್ಕಂಡೆ ತಲಾ ಒಂದೊಂದು ವಿಕೆಟ್ ಪಡೆದರು.

ಇಂದಿನ ಪಂದ್ಯ (ಏ.26)
ಕೋಲ್ಕತ್ತಾ ನೈಟ್ ರೈಡರ್ಸ್ / ಪಂಜಾಬ್ ಕಿಂಗ್ಸ್
ಸ್ಥಳ: ಕೋಲ್ಕತ್ತಾ, ಈಡನ್ ಗಾರ್ಡನ್ಸ್ ಕ್ರೀಡಾಂಗಣ
ಸಮಯ: ಸಂಜೆ 7.30ಕ್ಕೆ

ಆರ್‌ಸಿಬಿ ನೀಡಿದ 207 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಸನ್‌ರೈಸರ್ಸ್ ಹೈದರಾಬಾದ್ ಆರ್‌ಸಿಬಿ ಶಿಸ್ತುಬದ್ಧ ದಾಳಿಗೆ ತತ್ತರಿಸಿ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 171 ರನ್ ಗಳಿಸುವ ಮೂಲಕ 35 ರನ್‌ಗಳ ಸೋಲು ಅನುಭವಿಸಿತು. ಇಂಪ್ಯಾಕ್ಟ್ ಆಟಗಾರ ನಾಗಿ ಕಣಕ್ಕಿಳಿದ ಆರಂಭಿಕ ಆಟಗಾರ ಟ್ರಾವಿಸ್ ಹೆಡ್ ಮೊದಲ ಓವರ್‌ನಲ್ಲೇ 1 ರನ್ ಗಳಿಸಿ ವಿಲ್ ಜ್ಯಾಕ್ಸ್‌ಗೆ ವಿಕೆಟ್ ಒಪ್ಪಿಸಿದರು. ನಂತರ ಬಂದ ಏಯ್ಡನ್ ಮಾರ್ಕ್‌ರಮ್ ಹಾಗೂ ಹೆನ್ರಿಚ್ ಕ್ಲಾಸೇನ್ ಅವರು ತಲಾ 7 ರನ್ ಗಳಿಸಿ ಪೆವಿಲಿಯನ್ ಹಾದಿ ಹಿಡಿದರು. ಮತ್ತೊಂದೆಡೆ ಅಬ್ಬರದ ಬ್ಯಾಟಿಂಗ್‌ಗೆ ಇಳಿದಿದ್ದ ಅಭಿಷೇಕ್ ಶರ್ಮಾ 13 ಎಸೆತಗಳಲ್ಲಿ 2 ಸಿಕ್ಸರ್, 3 ಬೌಂಡರಿ 31 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಲೆಗ್ ಸ್ಪಿನ್ನರ್ ಕರ್ಣ್ ಶರ್ಮಾ, ನಿತೀಶ್ ರೆಡ್ಡಿ ಹಾಗೂ ಅಬ್ದುಲ್ ಸಮದ್ ಅವರನ್ನು ಪೆವಿಲಿಯನ್ನಿಗಟ್ಟಿದರು. ಉಳಿದಂತೆ ನಾಯಕ ಪ್ಯಾಟ್ ಕಮಿನ್ಸ್ ಕೇವಲ 15 ಎಸೆತಗಳಲ್ಲಿ ಅಜೇಯ 31 ರನ್ ಬಾರಿಸಿ ಕ್ಯಾಮರೋನ್ ಗ್ರೀನ್‌ಗೆ ವಿಕೆಟ್ ಒಪ್ಪಿಸಿದರು. ಇದರ ಬೆನ್ನಲ್ಲೇ ಭುವನೇಶ್ವರ್ ಕುಮಾರ್ 13 ರನ್ ಗಳಿಸಿ ಔಟಾದರು. ಕೊನೆಯಲ್ಲಿ ಶಹಬಾಜ್ ಅಹಮದ್ 37 ಎಸೆತಗಳಲ್ಲಿ ಅಜೇಯ 40 ರನ್ ಬಾರಿಸಿದರಾದರೂ ತಂಡವನ್ನು ಸೋಲಿನಿಂದ ಪಾರು ಮಾಡಲು ಸಾಧ್ಯವಾಗಲಿಲ್ಲ. ಉಳಿದಂತೆ ಜಯದೇವ್ ಉನಾದ್ಕಟ್ 8 ರನ್ ಗಳಿಸಿದರು.

ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಕರ್ಣ್ ಶರ್ಮಾ, ಸ್ವಪ್ನಿಲ್ ಸಿಂಗ್, ಕ್ಯಾಮರೋನ್ ಗ್ರೀನ್ ತಲಾ ಎರಡು ವಿಕೆಟ್ ಪಡೆದರೆ, ಯಶ್ ದಯಾಳ್ ಹಾಗೂ ವಿಲ್ ಜ್ಯಾಕ್ಸ್ ತಲಾ ಒಂದೊಂದು ವಿಕೆಟ್ ಪಡೆದರು. ರಜತ್ ಪಾಟೀದಾರ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಫಾರ್ಮಸಿಸ್ಟ್‌ಗಳ ಸತತ ಗೈರು; 32 ಮಂದಿ ರಿಜಿಸ್ಟ್ರೇಷನ್ ರದ್ದು

ಬೆಂಗಳೂರು, ಏ.25– ಔಷಧ ವಿತರಣಾ ಸಮಯದಲ್ಲಿ ಔಷಧ ಅಂಗಡಿಗಳಲ್ಲಿ ರಿಜಿಸ್ಟರ್ಡ್ ಫಾರ್ಮಾಸಿಸ್ಟಗಳ ಸತತ ಗೈರು ಹಾಜರಿಯಾದ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ 32 ಜನ ಫಾರ್ಮಾಸಿಸ್ಟಗಳ ರಿಜಿಸ್ಟ್ರೇಷನ್ ರದ್ದು ಮಾಡಲಾಗಿದೆ.

ಕರ್ನಾಟಕ ರಾಜ್ಯ ಫಾರ್ಮಸಿ ಕೌನ್ಸಿಲ್ (ಕೆಎಸ್‌ಪಿಸಿ) ಮೂರು ತಿಂಗಳ ಅವಧಿಗೆ 16 ನೋಂದಾಯಿತ ಫಾರ್ಮಸಿಸ್ಟ್‌ಗಳ ಹೆಸರನ್ನು ಶಾಶ್ವತವಾಗಿ ಮತ್ತು ಇನ್ನೂ 16 ನೋಂದಾಯಿತ ಫಾರ್ಮಸಿಸ್ಟ್‌ಗಳ ಹೆಸರನ್ನು ತೆಗೆದುಹಾಕುವ ಮೂಲಕ ಶಿಸ್ತು ಕ್ರಮ ಕೈಗೊಂಡಿದೆ.

ಫಾರ್ಮಸಿ ಕಾಯಿದೆ, 1948 ರ ಸೆಕ್ಷನ್ 42 ಅನ್ನು ಜಾರಿಗೆ ತರಲು ಕ್ರಮಗಳನ್ನು ಫಾರ್ಮಸಿ ಕೌನ್ಸಿಲ್ ತೆಗೆದುಕೊಂಡಿದೆ. ಸೆಕ್ಷನ್ 42 ರ ಉಪವಿಭಾಗ (1) ನೋಂದಾಯಿತ ಫಾರ್ಮಾಸಿಸ್ಟ್ ಅನ್ನು ಹೊರತುಪಡಿಸಿ ಯಾವುದೇ ವ್ಯಕ್ತಿಯು ನೋಂದಾಯಿತ ವೈದ್ಯಕೀಯ ವೈದ್ಯರ ಪ್ರಿಸ್ಕ್ರಿಪ್ಷನ್ ಮೇಲೆ ಯಾವುದೇ ಔಷಧಿಯನ್ನು ವಿತರಿಸಬಾರದು ಎಂದು ಆದೇಶಿಸುತ್ತದೆ. ಮೆಡಿಕಲ್ ಸ್ಟೋರ್ಸ್‌ಗಳಲ್ಲಿ ಔಷಧೀಯ ವಿತರಣೆಯಲ್ಲಿ ಸಾರ್ವಜನಿಕ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಈ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಫಾರ್ಮಸಿ ಕಾಯಿದೆ, 1948ರ ಪರಿಚ್ಛೇದ 36 ರ ಪ್ರಕಾರ ನೋಂದಾಯಿತ ಫಾರ್ಮಸಿಸ್ಟ್ ತನ್ನ ವೃತ್ತಿಪರ ನಡತೆಗೆ ತಪ್ಪಿತಸ್ಥನಾಗಿದ್ದರೆ, ನೋಂದಾಯಿತ ಫಾರ್ಮಸಿಸ್ಟ್‌ನ ಹೆಸರನ್ನು ರಿಜಿಸ್ಟರ್‌ನಿಂದ ನಿರ್ದಿಷ್ಟ ಅವಧಿಗೆ ಅಥವಾ ಶಾಶ್ವತವಾಗಿ ತೆಗೆದು ಹಾಕಲು ಆದೇಶ ನೀಡಲು ಕೌನ್ಸಿಲ್‌ನ ಕಾರ್ಯಕಾರಿ ಸಮಿತಿಗೆ ಅಧಿಕಾರ ನೀಡುತ್ತದೆ. ಫಾರ್ಮಸಿಗೆ ಹಾಜರಾಗದೆ ಫಾರ್ಮಸಿಸ್ಟ್ ನೋಂದಣಿ ಪ್ರಮಾಣ ಪತ್ರವನ್ನು ಬಳಸಲು ಫಾರ್ಮಸಿಯ ಮಾಲೀಕರಿಗೆ ಅನುಮತಿಸುವುದು ನೋಂದಾಯಿತ ಫಾರ್ಮಸಿಸ್ಟ್‌ನ ತಪ್ಪು ನಡವಳಿಕೆಯಾಗಿದೆ.

ನೋಂದಾಯಿತ ಫಾರ್ಮಸಿಸ್ಟ್‌ಗೆ ಕೇಳಲು ಸಮಂಜಸವಾದ ಅವಕಾಶವನ್ನು ಒದಗಿಸುವ ಪ್ರಕ್ರಿಯೆಯ ನಂತರ ಕೌನ್ಸಿಲ್, 16 ನೋಂದಾಯಿತ ಫಾರ್ಮಾಸಿಸ್ಟ್‌ಗಳ ಹೆಸರನ್ನು ರಿಜಿಸ್ಟರ್‌ನಿಂದ ಶಾಶ್ವತವಾಗಿ ಮತ್ತು ಇನ್ನೂ 16 ನೋಂದಾಯಿತ ಫಾರ್ಮಾಸಿಸ್ಟ್‌ಗಳ ನೋಂದಣಿಯನ್ನು ಮೂರು ತಿಂಗಳ ಅವಧಿಗೆ ತೆಗೆದು ಹಾಕಿದೆ.

ಫಾರ್ಮಸಿ ಇನ್ಸ್‌ಪೆಕ್ಟರ್‌ಗಳ ತಂಡವು ನಡೆಸಿದ ತಪಾಸಣೆ ಸಂದರ್ಭದಲ್ಲಿ ನೋಂದಾಯಿತ ಫಾರ್ಮಾಸಿಸ್ಟ್‌ಗಳನ್ನು ಹೆಸರಿಗೆ ಮಾತ್ರ ನೇಮಿಸಿಕೊಂಡಿರುವ ಹಲವಾರು ಪ್ರಕರಣಗಳು ಬೆಳಕಿಗೆ ಬಂದಿವೆ. ಅಂತಹ ಪ್ರಕರಣಗಳಲ್ಲಿ ಕಾನೂನು ನಿಬಂಧನೆಗಳನ್ನು ತಿಳಿಸಿ, ನೋಂದಾಯಿತ ಫಾರ್ಮಸಿಸ್ಟ್ ಅನುಪಸ್ಥಿತಿಯನ್ನು ಖಚಿತಪಡಿಸಿಕೊಂಡು ಅಂಗಡಿಯ ಮಾಲೀಕರಿಗೆ ನೋಟಿಸ್ ನೀಡಲಾಗಿದೆ ಎಂದು ಔಷಧ ಮತ್ತು ವೈದ್ಯಕೀಯ ಮಾಹಿತಿಗಳ ಪತ್ರಿಕೆಯಲ್ಲಿ ವರದಿ ಮಾಡಲಾಗಿದೆ.

ಜಿ. ಭುವನೇಶ್‌ಗೆ ಪಿಎಚ್.ಡಿ



ಮೈಸೂರು, ಏ. 25– ಡಾ. ರವಿಕುಮಾರ್ ಅವರ ಮಾರ್ಗದರ್ಶನದಲ್ಲಿ ಜಿ. ಭುವನೇಶ್ ಅವರು ಚಾಮರಾಜನಗರ ಜಿಲ್ಲೆಯ ಅಂತರ ತಾಲೂಕು ಭೌಗೋಳಿಕ ಅಸಮಾನತೆಗಳು ವಿಷಯ ದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಭಾವಪೂರ್ಣ ಶ್ರದ್ಧಾಂಜಲಿ



ಬಿ. ಕೆಂಪೇಗೌಡ (ಬುಲೆಟ್ ರಾಜು)
ಸೀನಿಯರ್ ಬೈಂಡರ್, ಸರ್ಕಾರಿ ಮುದ್ರಣಾಲಯ

ಇವರು ದಿನಾಂಕ : 25-04-2024ರ ಗುರುವಾರ ರಾತ್ರಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತ್ಯಕ್ರಿಯೆ ದಿನಾಂಕ : 26-04-2024ರ ಶುಕ್ರವಾರ ಮಧ್ಯಾಹ್ನ ಮೈಸೂರಿನ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಲಿದೆ.

ದುಃಖತಪ್ತರು - ಪತ್ನಿ: ಶ್ರೀಮತಿ ಶಾಂತಕುಮಾರಿ, ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯರು, ಕುಟುಂಬವರ್ಗ ಹಾಗೂ ಸ್ನೇಹಿತರು

10ನೇ ವರ್ಷದ ಪುಣ್ಯಸ್ಮರಣೆ



ಎಸ್.ಡಿ.ಚೈತನ್ಯ ಪ್ರಸಾದ್
ದುಃಖತಪ್ತರು: ತಾಯಿ ಸರೋಜಮ್ಮ, ತಮ್ಮಂದಿರಾದ ಎಸ್.ಡಿ.ಮೋಹನ್‌ಕುಮಾರ್, ಎಸ್.ಡಿ.ಮುರಳೀಧರ ತಂಗಿಯರಾದ ಎಸ್.ಡಿ.ಬೀನಾಕುಮಾರಿ ಎಸ್.ಡಿ.ಭವಾನಿ, ಹೆಂಡತಿ ಮತ್ತು ಮಕ್ಕಳು ಹಾಗೂ ಕುಟುಂಬವರ್ಗದವರು

ಕೈಲಾಸ ಶಿವಗಣಾರಾಧನೆ



ಶ್ರೀಮತಿ ಇಂದಿರ
ವಿಶ್ವೇಶ್ವರಯ್ಯನಗರ 2ನೇ ಹಂತ, ಮೈಸೂರು

ಇವರು ದಿನಾಂಕ: 16-04-2024ರಂದು ಶಿವೈಕ್ಯರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ: 28-04-2024 ಭಾನುವಾರ ಬೆಳಗ್ಗೆ 10.00ಕ್ಕೆ ಕೈಲಾಸ ಶಿವಗಣಾರಾಧನೆಯನ್ನು ಸ್ವಗೃಹ, ವಿಶ್ವೇಶ್ವರಯ್ಯನಗರ 2ನೇ ಹಂತ, ಮೈಸೂರಿನಲ್ಲಿ ಏರ್ಪಡಿಸಲಾಗಿದೆ. ಆದ್ದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ತಾವುಗಳು ಸಕಾಲಕ್ಕೆ ಆಗಮಿಸಿ ಶಿವೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ದುಃಖತಪ್ತರು: ಪತಿ–ಎಸ್.ರೇವಣ್ಣ, ಪುತ್ರ–ಆರ್.ಪ್ರಶಾಂತ್ ಪುತ್ರಿ–ಆರ್.ತನುಜಾ ಮತ್ತು ಕುಟುಂಬವರ್ಗ

ಕಾಣೆಯಾಗಿದ್ದಾರೆ



ರವಿಕುಮಾರ್. ಹೆಚ್.ಎಂ

ನನ್ನ ಪತಿ ರವಿಕುಮಾರ್. ಹೆಚ್.ಎಂ (40 ವರ್ಷ) ರವರು ದಿನಾಂಕ:24-12-2023ರಂದು ಬೆಂಗಳೂರಿಗೆ ಹೋಗಿ ಬರುವುದಾಗಿ ಹೇಳಿ ಹೋದವರು ಈವರೆವಿಗೂ ಬಂದಿಲ್ಲ ಅವರ ಮೊಬೈಲ್ ಸಹ ಸ್ವಿಚ್ ಆಫ್ ಆಗಿದ್ದು ಈ ಬಗ್ಗೆ ಸ್ನೇಹಿತರು ಮತ್ತು ಸಂಬಂಧಿಕರಲ್ಲಿ ವಿಚಾರಿಸಿ ಎಲ್ಲೂ ಪತ್ತೆಯಾಗದ ಕಾರಣ ಪೋಲಿಸರಿಗೆ ದೂರು ನೀಡುತ್ತಿದ್ದು ನನ್ನ ಪತಿ ಎಲ್ಲಿಯಾದರು ಪತ್ತೆಯಾದ ಬಗ್ಗೆ ಮಾಹಿತಿಯನ್ನು ಮೈಸೂರಿನ ಸರಸ್ವತಿಪುರಂ ಪೋಲಿಸರಿಗೆ ಅಥವಾ ಮೊ. 9980852621, 9880466245 ನಂಬರಿಗೆ ತಿಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

– ಪತ್ನಿ: ಮಂಜುಶ್ರೀ.ಕೆ.ಜಿ

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಶ್ರೀ ತುಳಸಿರಾಜನ್ ಬಿನ್ ಡಾ|| ಆರ್.ದೇವರಾಜ್, ವಯಸ್ಸು 40 ವರ್ಷ, ವಾಸ ನಂ.315, 10ನೇ ಕ್ರಾಸ್, ರೈಲ್ವೆ ಲೇಔಟ್, ವಿಜಯನಗರ, ಮೈಸೂರು–570017 ರವರು ಷೆಡ್ಯೂಲ್‌ನಲ್ಲಿ ಕಂಡ, ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ವಿಜಯನಗರ ಬಡಾವಣೆ, 4ನೇ ಹಂತ, 2ನೇ ಫೇಸ್‌ನಲ್ಲಿರುವ ನಿವೇಶನ ಸಂಖ್ಯೆ: 8782 (ಎಂಟು ಸಾವಿರದ ಏಳುನೂರ ಎಂಭತ್ತೆರಡು)ನೇ ನಂಬರಿನ ಸ್ವತ್ತು ವಿಸ್ತೀರ್ಣ ಪೂರ್ವ ಪಶ್ಚಿಮ 9 ಮೀಟರ್, ದಕ್ಷಿಣೋತ್ತರ 6 ಮೀಟರ್ ವಿಸ್ತೀರ್ಣವುಳ್ಳ ನಿವೇಶನವನ್ನು ಖರೀದಿಸಲು ಇಚ್ಛಿಸಿರುತ್ತಾರೆ.

ಮೇಲೆ ತಿಳಿಸಿದ ಸದರಿ ನಿವೇಶನವು ಶ್ರೀ ಮಾದಯ್ಯ ರವರ ಹೆಂಡತಿ ಶ್ರೀಮತಿ ಪುಟ್ಟ ನಂಜಮ್ಮ ರವರಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಮೈಸೂರು ರವರಿಂದ ದಿನಾಂಕ 04-04-2002 ರ ಕ್ರಯಪತ್ರದ ಪ್ರಕಾರ ಬಂದಿದ್ದು, ಸದರಿ ಪುಟ್ಟನಂಜಮ್ಮ ರವರು ಸದರಿ ನಿವೇಶನವನ್ನು ಅವರ ಮಕ್ಕಳುಗಳಾದ ಶ್ರೀಮತಿ ನಾಗರತ್ನ, ಶ್ರೀಮತಿ ಎಂ.ಲೀಲಾವತಿ ಹಾಗೂ ಶ್ರೀಮತಿ ಎಂ.ರೇಖಾ ರವರುಗಳಿಗೆ ದಿನಾಂಕ 11-06-2008 ರ ದಾನಪತ್ರದ ಪ್ರಕಾರ ದಾನವಾಗಿ ಕೊಟ್ಟಿದ್ದು, ಸದರಿ ದಾನಪತ್ರದಂತೆ ಸದರಿ ನಿವೇಶನವು ಶ್ರೀಮತಿ ನಾಗರತ್ನ, ಶ್ರೀಮತಿ ಎಂ.ಲೀಲಾವತಿ ಹಾಗೂ ಶ್ರೀಮತಿ ಎಂ.ರೇಖಾ ರವರ ಹೆಸರಿಗೆ ಖಾತಾ ವರ್ಗಾವಣೆಯು ದಿನಾಂಕ 10-02-2015 ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಆಗಿರುತ್ತದೆ. ಆ ಪ್ರಕಾರ ಸದರಿಯವರು ಸದರಿ ಆಸ್ತಿಯ ಮಾಲೀಕರು ಮತ್ತು ಹಕ್ಕುದಾರರು ಹಾಗೂ ಸ್ವಾಧೀನದಾರರು ಆಗಿರುತ್ತಾರೆ. ಮೇಲ್ಕಂಡವರ ಪೈಕಿ ಶ್ರೀಮತಿ ನಾಗರತ್ನ ರವರು ಮೃತಪಟ್ಟಿರುತ್ತಾರೆ. ಅವರ ಪತಿಯಾದ ವಿಶ್ವನಾಥ ಎಂ. ರವರು ಮೃತಪಟ್ಟಿರುತ್ತಾರೆ. ಅವರ ಮಗನಾದ ಮಧು.ವಿ. ರವರು ಮೃತಪಟ್ಟಿರುತ್ತಾರೆ. ಹಾಗಾಗಿ ಶ್ರೀಮತಿ ನಾಗರತ್ನ ರವರ ವಾರಸುದಾರರಾಗಿ ಸೌಮ್ಯ ವಿ. ರವರು ಮಾತ್ರ ಇರುತ್ತಾರೆ. ಮೇಲ್ಕಂಡ ಸೌಮ್ಯ ರವರು, ಎಂ.ಲೀಲಾವತಿ ರವರು ಹಾಗೂ ಶ್ರೀಮತಿ ಎಂ.ರೇಖಾ ರವರು ಷೆಡ್ಯೂಲ್‌ನಲ್ಲಿ ತಿಳಿಸಿರುವ ನಿವೇಶನವನ್ನು ನಮ್ಮ ಕಕ್ಷಿದಾರರಿಗೆ ಮಾರಾಟ ಮಾಡಲು ಒಪ್ಪಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ವಿಜಯನಗರ ಬಡಾವಣೆ, 4ನೇ ಹಂತ, 2ನೇ ಫೇಸ್‌ನಲ್ಲಿರುವ ನಿವೇಶನ ಸಂಖ್ಯೆ: 8782 (ಎಂಟು ಸಾವಿರದ ಏಳುನೂರ ಎಂಭತ್ತೆರಡು)ನೇ ನಂಬರ್‌ನ ಸ್ವತ್ತಿಗೆ ಚಕ್ಕುಬಂದಿ:

ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : 8750ನೇ ನಂಬರ್‌ನ ಸ್ವತ್ತು, ಉತ್ತರಕ್ಕೆ : 8783ನೇ ನಂಬರ್‌ನ ಸ್ವತ್ತು, ದಕ್ಷಿಣಕ್ಕೆ : 8781ನೇ ನಂಬರ್‌ನ ಸ್ವತ್ತು. ಈ ಮೇಲ್ಕಂಡ ಚಕ್ಕುಬಂದಿಯಲ್ಲಿರುವ ಪೂರ್ವ ಪಶ್ಚಿಮ 9 ಮೀಟರ್, ದಕ್ಷಿಣೋತ್ತರ 6 ಮೀಟರ್ ವಿಸ್ತೀರ್ಣವುಳ್ಳ ಖಾಲಿ ನಿವೇಶನ ಆಗಿರುತ್ತದೆ. ಈ ಮೇಲೆ ತಿಳಿಸಿದ ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಾದರೂ ತಕರಾರು ಅಥವಾ ಹಕ್ಕು ಪ್ರತಿಪಾದನೆ ಮಾಡುವವರು ಇದ್ದರೆ, ಅವರು ತಮ್ಮ ದಾಖಲಾತಿಗಳ ಸಮೇತವಾಗಿ ಈ ಕೆಳಕಂಡ ವಿಳಾಸದಲ್ಲಿ ತಿಳಿಸಿರುವ ವಕೀಲರನ್ನು ಈ ಪ್ರಕಟಣೆಯಾದ 7 ದಿನಗಳ ಒಳಗಾಗಿ ಕೆಳಕಂಡ ವಿಳಾಸದಲ್ಲಿ ಬಂದು ಸಂಪರ್ಕಿಸುವುದು. ಆನಂತರ ಬಂದರೆ ಅಂತಹವರನ್ನು ಪರಿಗಣಿಸಲಾಗುವುದಿಲ್ಲ.

ಸಂಪರ್ಕಿಸಬೇಕಾದ ವಿಳಾಸ: ಕೆ. ಮಹದೇವ, ವಕೀಲರು, ಕೆ.ಎಂ.ಅಸೋಸಿಯೇಟ್ಸ್, ನಂ.2378/ಸಿ ಸೆಲ್ಲಾರ್, ನ್ಯೂ ಕಾಂತರಾಜ ಅರಸ್ ರಸ್ತೆ, ಶ್ಯಾಂ ಸ್ಟುಡಿಯೊ ಬಸ್ ಸ್ಟಾಪ್ ಹತ್ತಿರ, ಜಯನಗರ, ಮೈಸೂರು. ಮೊ: 9980887449